ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 9 ಶನಿವಾರ 2025

ಸಂಪುಟ: 46 | ಸಂಚಿಕೆ: 114 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಮತ ಕದ್ದು ಮೋದಿ ಪ್ರಧಾನಿಯಾಗಿದ್ದಾರೆ!

- ಕಾಂಗ್ರೆಸ್ ಅಧಿನಾಯಕ–ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪ
- ಮತಗಳ್ಳತನದ ವಿರುದ್ಧ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ರ‍್ಯಾಲಿ
- ಚುನಾವಣಾ ಆಯೋಗ ದಾಖಲೆ ನೀಡದೇ ಇದ್ದಲ್ಲಿ ಇನ್ನು ಅಧಿಕ ಕ್ಷೇತ್ರಗಳ ಮಾಹಿತಿ ಬಹಿರಂಗ ಎಚ್ಚರಿಕೆ

ಬೆಂಗಳೂರು, ಆ.8(ಕೆಎಂಶಿ)– ಮತ ಕದ್ದು ನರೇಂದ್ರ ಮೋದಿ ಪ್ರಧಾನಮಂತ್ರಿ ಆಗಿದ್ದಾರೆ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಇಂದಿಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತಗಳ್ಳತನದಿಂದ ಅಧಿಕಾರದ ಚುಕ್ಕಾಣಿ ಹಿಡಿದಿರುವುದನ್ನು ನಾನು ನಿನ್ನೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ದಾಖಲೆ ಸಹಿತ ಸಾಬೀತು ಮಾಡಿದ್ದೇನೆ.

ಕರ್ನಾಟಕದ ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ಮಹದೇವಪುರ ವಿಧಾನಸಭಾ ಕ್ಷೇತ್ರವೊಂದರಲ್ಲೇ 1,00250 ಮತಗಳವು ಮಾಡಿ ಬಿಜೆಪಿ ಅಭ್ಯರ್ಥಿ 25 ರಿಂದ 35 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆಂದು ದೂರಿದರು. ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ■ 6ನೇ ಪುಟಕ್ಕೆ



ರಾಹುಲ್‌ಗಾಂಧಿ

ದೇಶಾದ್ಯಂತ ಮತದಾನದ ಹಕ್ಕು ದುರ್ಬಳಕೆ ಆಗಿದೆ

ನಾನು ಮೊದಲು ಸೋತಾಗ ನನಗೂ ಡೌಟಿತ್ತು; ಈಗ ಸಾಬೀತಾಗಿದೆ

ಬೆಂಗಳೂರು, ಆ.8(ಕೆಎಂಶಿ)– ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ ಸೇರಿದಂತೆ ದೇಶಾದ್ಯಂತ ಮತದಾನದ ಹಕ್ಕು ದುರ್ಬಳಕೆ ಮಾಡಿ, ನಕಲಿ ಮತದಾನದ ಮೂಲಕ ಪ್ರಧಾನಿ ನರೇಂದ್ರ ಮೋದಿ ದೇಶ ಆಳುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.



ಮತಗಳ್ಳತನ ವಿರೋಧಿಸಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, 2024ರ ಚುನಾವಣೆಯಲ್ಲಿ ಮತಗಳ್ಳತನ ಮಾಡಿ ಮೋದಿ ಪ್ರಧಾನಿಯಾಗಿದ್ದಾರೆ ಎಂದರು. ಮೋದಿ ಅಂಡ್ ಕಂಪನಿ 2024ರ ಚುನಾವಣೆ ಗೆದ್ದಿಲ್ಲ, ಮತಕಳ್ಳತನದಿಂದ ಗೆದ್ದಿದ್ದು, ಈ ಸರ್ಕಾರ ಬಹುಕಾಲ ಉಳಿಯುವುದಿಲ್ಲ ■ 6ನೇ ಪುಟಕ್ಕೆ

ಪ್ರಧಾನಿ ಮೋದಿ ರಾಜೀನಾಮೆಗೆ ಸಿಎಂ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು, ಆ.8(ಕೆಎಂಶಿ)– ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿದ್ದು ನರೇಂದ್ರ ಮೋದಿ ಅವರಿಗೆ ಪ್ರಧಾನಿ ಕುರ್ಚಿಯಲ್ಲಿ ಕೂರುವ ನೈತಿಕ ಹಕ್ಕಿಲ್ಲ. ಕೂಡಲೇ ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆಗ್ರಹಿಸಿದ್ದಾರೆ.



ಮತಗಳ್ಳತನ ವಿರೋಧಿಸಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗ ಬಿಜೆಪಿಯ ಶಾಖಾ ಕಚೇರಿಯಾಗಿದೆ. ಮತಗಳ್ಳತನ ವಿರುದ್ಧ ಕರ್ನಾಟಕದಲ್ಲಿ ಆರಂಭವಾಗಿರುವ ಪ್ರತಿಭಟನಾ ಅಭಿಯಾನ ಇಡೀ ದೇಶಾದ್ಯಂತ ವ್ಯಾಪಿಸಲಿದೆ ಎಂದರು. ರಾಹುಲ್ ಗಾಂಧಿ ಸಂಪೂರ್ಣ ಅಧ್ಯಯನ ನಡೆಸಿ, ಮತದಾನದ ಅಂಕಿ–ಅಂಶ ಸಂಗ್ರಹಿಸಿ, ವಿಶ್ಲೇಷಣೆ ಮಾಡಿ ದಾಖಲೆಗಳ ಸಮೇತ ■ 6ನೇ ಪುಟಕ್ಕೆ

ಬಾದಾಮಿಯಲ್ಲಿ ಸಿದ್ದರಾಮಯ್ಯ ಗೆದ್ದಿದ್ದು ನಾವು ಖರೀದಿಸಿದ ಮತಗಳಿಂದ!



ಮೈಸೂರು: ಸಿದ್ದರಾಮಯ್ಯ ಬಾದಾಮಿ ಕ್ಷೇತ್ರದಲ್ಲಿ ಗೆದ್ದಿದ್ದು ನಾವು ಖರೀದಿಸಿದ್ದ 3 ಸಾವಿರ ಮತಗಳಿಂದ ಎಂದು ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೊಸ ಬಾಂಬ್ ಸಿಡಿಸಿದ್ದಾರೆ. ಮೈಸೂರಿನಲ್ಲಿ ನಡೆದ ವೈ.ರಾಮಕೃಷ್ಣ ಅವರ ಸಾಧನೆಗಳು ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, 2018ರ ಚುನಾವಣೆ ವೇಳೆ ನನ್ನ ರಾಜಕೀಯ ಅನುಭವದಿಂದ ಲೆಕ್ಕಾಚಾರ ಹಾಕಿದಾಗ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆಲುವು ಕಷ್ಟ, ಹಾಗಾಗಿ ಬಾದಾಮಿಯಲ್ಲಿ ಸ್ಪರ್ಧಿಸಲು ಸಲಹೆ ನೀಡಿದೆ. ■ 6ನೇ ಪುಟಕ್ಕೆ

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಮಹತ್ವದ ನಿರ್ಧಾರ

ಮೈಸೂರಿನ ವಿವಿಧೆಡೆ 400 ಎಕರೆ ಪ್ರದೇಶದಲ್ಲಿ ಖಾಸಗಿ ಬಡಾವಣೆ ಅಭಿವೃದ್ಧಿಗೆ ಅನುಮೋದನೆ

- ಕಾದು ಕುಳಿತಿದ್ದ ಖಾಸಗಿ ಡೆವಲಪರ್‌ಗಳ ಬೇಡಿಕೆಗೆ ಮನ್ನಣೆ
- ವಿವಿಧ ಯೋಜನೆಯ ಮನೆಗಳ ಬಾಕಿ ಪಾವತಿಗೆ ಕೊನೆ ಅವಕಾಶ
- ಸರ್ಕಾರ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಸಿಎ ನಿವೇಶನ ಮಂಜೂರು
- ಮೈಸೂರು–ನಂ.ಗೂಡು ಮಹಾ ಯೋಜನೆ ಪರಿಷ್ಕರಣೆ ನಿರ್ಣಯ



ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಎಂಡಿಎ ಸಾಮಾನ್ಯ ಸಭೆ ನಡೆಯಿತು.

ಮೈಸೂರು, ಆ.8(ಬಿಎಲ್‌ಯು)– ಮೈಸೂರಿನ ವಿವಿಧ ಸ್ಥಳಗಳಲ್ಲಿ ಸುಮಾರು 400 ಎಕರೆ ಪ್ರದೇಶದಲ್ಲಿ ಖಾಸಗಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಹಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಈವರೆವಿಗೂ ಯಾವುದೇ ರಾಜಕಾರಣಿಗಳನ್ನು ನೇಮಕ ಮಾಡದ ಕಾರಣ ಇಂದಿನ ಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಅಧಿಕಾರಿಗಳೇ ಆಗಿದ್ದು ವಿಶೇಷ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೊಳಪಟ್ಟ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಸುಮಾರು 400 ಎಕರೆ ಪ್ರದೇಶದಲ್ಲಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ಅನುಮತಿ ಕೋರಿ ಹಲವು ಖಾಸಗಿ ಡೆವಲಪರ್‌ಗಳು ಹಿಂದಿನ ಮುಡಾಗೆ ಅರ್ಜಿ ಸಲ್ಲಿಸಿ ಕಾದು ಕುಳಿತ್ತಿದ್ದರು. ಈ ವಿಷಯದ ಬಗ್ಗೆ ಚರ್ಚೆ ನಡೆದು ಬಡಾವಣೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

ಮನೆ ಬಾಕಿ ಪಾವತಿಗೆ ಅಂತಿಮ ಗಡುವು: ಪ್ರಾಧಿಕಾರದಿಂದ ಹುಡ್ಕೋ, ಇಡಬ್ಲ್ಯೂಎಸ್, ಎಲ್‌ಐಜಿ, ಎಂಐಜಿ, ಹೆಚ್‌ಐಜಿ ಹಾಗೂ ಬ್ಯಾಂಕ್‌ಗಳ ನೆರವಿನಿಂದ ಕೆಲ ವರ್ಷಗಳ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಇಂದು ಮುಖ್ಯಮಂತ್ರಿಗಳ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ಆ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ.9 ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಶನಿವಾರ ಬೆಳಗ್ಗೆ 10.55ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು, ನಂತರ ಕಾಂಗ್ರೆಸ್ ಭವನದಲ್ಲಿ ಆಯೋಜಿಸಲಾಗಿರುವ ಶ್ರೀಮತಿ ಇಂಧಿರಾ ಗಾಂಧಿ ಕಾಂಗ್ರೆಸ್ ಭವನದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಮೈಸೂರು ಜಿಲ್ಲಾಡಳಿತ ಮತ್ತು ಜಿಪಂ ವತಿಯಿಂದ ನಂಜನಗೂಡು ತಾಲೂಕಿನ ಹದಿನಾರು ಗ್ರಾಮದಲ್ಲಿ ಆಯೋಜಿಸಲಾಗಿರುವ ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 3.45 ಗಂಟೆಗೆ ಅಗ್ರಹಾರದ ಎನ್. ಮಾಧವರಾವ್ ವೃತ್ತದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಮೈಸೂರು ಇದರ ಕೆಳ ಅಂತಸ್ತಿನ ನವೀಕೃತ ಕಟ್ಟಡದ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಬ್ಯಾಂಕ್ ನವೀಕೃತ ಕಟ್ಟಡ ಉದ್ಘಾಟನೆ ಇಂದು

ಮೈಸೂರು, ಆ.8– ನಗರದ ಅಗ್ರಹಾರದಲ್ಲಿರುವ ಶತಮಾನದ ಶ್ರೀಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನೆಲ ಅಂತಸ್ತಿನ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ ಶನಿವಾರ ಸಂಜೆ 4ಕ್ಕೆ ನಡೆಯಲಿದ್ದು, ಬ್ಯಾಂಕ್‌ನ ಸದಸ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬ್ಯಾಂಕ್ ನಿರ್ದೇಶಕ ಪ್ರತಿಧ್ವನಿ ಪ್ರಸಾದ್ ಮನವಿ ಮಾಡಿದ್ದಾರೆ.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನವೀಕೃತ ಕಟ್ಟಡವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ಪ್ರತಿಧ್ವನಿ ಪ್ರಸಾದ್

ಮಧ್ಯಮ ವರ್ಗದವರ ಅನುಕೂಲಕ್ಕಾಗಿ ಶೆಟ್ಟಿಪ್ಪ ಸಿದ್ದಪ್ಪ ಅವರು 1919ರಲ್ಲಿ ಕೆ.ಆರ್. ಬ್ಯಾಂಕ್ ಸ್ಥಾಪಿಸಿದರು. 25 ಪೈಸೆಯಿಂದ ಆರಂಭವಾದ ಬ್ಯಾಂಕ್, ಸದಸ್ಯರ ಸಹಕಾರದಿಂದ ಹಂತ ಹಂತವಾಗಿ ನೂರಾರು ಕೋಟಿ ರೂ. ವಹಿವಾಟು ನಡೆಸುವ ಮಟ್ಟಕ್ಕೆ ಬೆಳೆದಿರುವುದು ಹೆಮ್ಮೆ ತಂದಿದೆ ಎಂದಿದ್ದಾರೆ.

ಕನ್ನಡ ವೈಭವ ಕವನ ಸಂಕಲನಕ್ಕೆ ಕವಿತೆಗಳ ಆಹ್ವಾನ


ಮೈಸೂರು, ಆ. 8– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರ 77ನೇ ಜನ್ಮ ದಿನೋತ್ಸವದ ಅಂಗವಾಗಿ ಮಡ್ಡೀಕೆರೆ ಗೋಪಾಲ್ ಅಭಿಮಾನಿಗಳ ಬಳಗವು ಕವನ ಸಂಕಲನ ಹೊರತರುತ್ತಿದೆ. ಈ ಸಂಬಂಧ ಆಸಕ್ತ ಕವಿ ಕವಯಿತ್ರಿಯರಿಂದ ಕವನಗಳನ್ನು ಆಹ್ವಾನಿಸಲಾಗಿದೆ. ಕನ್ನಡ ನಾಡು, ನುಡಿ, ಭಾಷೆ, ಸಂಸ್ಕೃತಿ ಕುರಿತಂತೆ 20 ಸಾಲುಗಳನ್ನು ಮೀರದಂತೆ ಬರೆದ ಕವಿತೆಯೊಂದನ್ನು ಆ. 20 ರ ಒಳಗಾಗಿ ರಂಗನಾಥ್ ಮೈಸೂರು, ಕನ್ನಡ ವೈಭವ ಕವನ ಸಂಕಲನ, ನಂ. 75, ಇ ಬ್ಲಾಕ್, 15ನೇ ಕ್ರಾಸ್, ಜೆ.ಪಿ.ನಗರ ಈ ವಿಳಾಸಕ್ಕೆ ಕಳುಹಿಸಿಕೊಡಲು ಕೋರಲಾಗಿದೆ.

ವೆಬ್‌ಸೈಟ್ ಬಂದ್ ಆರೋಪ ಅಲ್ಲಗಳೆದ ಚುನಾವಣಾ ಆಯೋಗ

ಬೆಂಗಳೂರು, ಆ.8– ಹಲವು ರಾಜ್ಯದಲ್ಲಿನ ಚುನಾವಣಾ ಆಯೋಗದ ವೆಬ್‌ಸೈಟ್ ಸೇವೆಯಲ್ಲಿ ವ್ಯತ್ಯಯವಾಗಿದೆ ಎಂದು ನೆಟ್ಟಿಗರು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದಾರೆ. ಆದರೆ ಈ ಆರೋಪಗಳನ್ನು ಚುನಾವಣಾ ಆಯೋಗ ಅಲ್ಲಗಳೆದಿದೆ.

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, 2024ರ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನವಾಗಿದೆ. ಬಿಜೆಪಿಯು ಚುನಾವಣೆಗಳನ್ನು ಗೆಲ್ಲಲು ಚುನಾವಣಾ ಆಯೋಗ ಸಾಥ್ ನೀಡಿದೆ ಎಂದು ಗುರುವಾರವಷ್ಟೇ ಆರೋಪಿಸಿದ್ದರು. ಇದರ ಬೆನ್ನಲ್ಲೇ, ಹಲವು ರಾಜ್ಯಗಳಲ್ಲಿ ಚುನಾವಣಾ ಆಯೋಗದ ವೆಬ್‌ಸೈಟ್ ಸ್ಥಗಿತಗೊಂಡಿರುವುದಾಗಿ ಕೆಲವರು ಆರೋಪಿಸಿದ್ದಾರೆ. ಆದರೆ, 'ಎಕ್ಸ್'ನಲ್ಲಿ ಇದಕ್ಕೆ ಪ್ರತಿಕ್ರಿಯೆ ನೀಡಿರುವ ಚುನಾವಣಾ ಆಯೋಗ, ಯಾವುದೇ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮತದಾರರ ಪಟ್ಟಿಯನ್ನು ಯಾರು ಬೇಕಾದರೂ ಡೌನ್‌ಲೋಡ್ ಮಾಡಿ ಕೊಳ್ಳಬಹುದು ಎಂದು ಸ್ಪಷ್ಟಪಡಿಸಿದೆ. ಅದಕ್ಕೆ ಸಂಬಂಧಿಸಿದ ಲಿಂಕ್ ಅನ್ನೂ ನೀಡಿದೆ.

ಮತಗಳ್ಳತನವಾಗಿದೆ ಎಂದು ಸಾಂವಿಧಾನಿಕ ಸಂಸ್ಥೆಗಳ ಮೇಲೆ ಅನುಮಾನ ಪಟ್ಟಿರುವುದು ಕಿಡಿಗೇಡಿ ಪಿತೂರಿಯಾಗಿದೆ. ಚುನಾವಣೆಯಲ್ಲಿ ಎಸಗಿದ ಪಾಪವನ್ನು ಸುಳ್ಳಿನಿಂದ ಮುಚ್ಚಿಕೊಳ್ಳಲು ಚುನಾವಣೆ ಆಯೋಗದ ಮೇಲೆ ಸುಳ್ಳಿನ ಸುರಿಮಳೆ ಜನತಂತ್ರಕ್ಕೆ ನೇಣು ಬಿಗಿಯುವ ದೂರ್ತ ಹುನ್ನಾರ. ಅಮೃತಕಾಲದ ಪ್ರಜಾಪ್ರಭುತ್ವಕ್ಕೆ ವಿಷವಿಕ್ಕುವ ಘೋರ ಷಡ್ಯಂತ್ರ್ಯ ಮತಗಳ್ಳತನ ಆರೋಪಕ್ಕೆ ಒಂದೇ ಮದ್ದು. ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಲಿಂಕ್ ಮಾಡುವುದು. ಅಷ್ಟು ಮಾಡಿದರೆ ಮತಗಳ್ಳರ ಆಟಕ್ಕೆ ಅಂಕೆ ಬೀಳುವುದು ಗ್ಯಾರಂಟಿ.



-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು.

ಸಂವಿಧಾನಬದ್ಧ ಸಂಸ್ಥೆ ಮೇಲೆ ರಾಹುಲ್ ಗಾಂಧಿ ಆಧಾರರಹಿತ ಆರೋಪ ಮಾಡಿದ್ದಾರೆ. ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬ ಸಾಮಾನ್ಯ ಜ್ಞಾನವೂ ಅವರಿಗೆ ಇಲ್ಲ. ಚುನಾವಣಾ ಆಯೋಗದ ಕಚೇರಿ ದೆಹಲಿ, ಬೆಂಗಳೂರಿನಲ್ಲಿ ಇರುತ್ತದೆ. ಇಲ್ಲೆಲ್ಲ ರಾಜ್ಯ ಸರ್ಕಾರದ ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ನೌಕರರನ್ನು ತಾತ್ಕಾಲಿಕವಾಗಿ ಚುನಾವಣೆ ಸೇವೆಗೆ ಬಳಸಿಕೊಳ್ಳುತ್ತಾರೆ. ರಾಹುಲ್ ಗಾಂಧಿ ಮಿಸ್ ಗೈಡೆಡ್ ಲೀಡರ್, ಅವರ ರಿಮೋಟ್ ಎಲ್ಲೋ ಇದೆ. ಆ ರಿಮೋಟಿಗೆ ತಕ್ಕಂತೆ ಇಲ್ಲಿ ಕೆಲಸ ಮಾಡುತ್ತಾರೆ. ತಿಳುವಳಿಕೆ ಕೊರತೆ ಇದೆ ಅಂತ ಹೇಳ್ಲಾ. ಬೇರೆ ಏನಾದರೂ ಸಮಸ್ಯೆ ಇದೆಯೋ ಗೊತ್ತಿಲ್ಲ.



-ಸಿ.ಟಿ.ರವಿ, ಬಿಜೆಪಿ ವಿಧಾನ ಪರಿಷತ್ ಸದಸ್ಯ.

ದೇಶದ ತುರ್ತು ಪರಿಸ್ಥಿತಿಗೂ ಮೊದಲೇ ಮತಗಳ್ಳತನ ನಡೆದಿದೆ. ರಾಯ್‌ಬರೇಲಿಯಲ್ಲಿ ರಾಜ್ ನಾರಾಯಣ್ ವಿರುದ್ಧ ರಾಹುಲ್ ಅಜ್ಜಿ ಇಂದಿರಾ ಗಾಂಧಿ ಮತಗಳ್ಳತನದಿಂದ ಗೆದ್ದಿದ್ದರು. ಅಲಹಾಬಾದ್ ಹೈಕೋರ್ಟ್ ಇಂದಿರಾಗಾಂಧಿಯವರ ಸದಸ್ಯತ್ವ ರದ್ದು ಮಾಡಿತ್ತು. ಆಗ ಅವರು ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಅಲಹಾಬಾದ್ ಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಸುಪ್ರೀಂಕೋರ್ಟ್ ಹೇಳಿದರೂ ಅಧಿಕಾರದಿಂದ ಅವರು ಕೆಳಗೆ ಇಳಿಯಲಿಲ್ಲ. ತುರ್ತು ಪರಿಸ್ಥಿತಿ ಹೇರಿ ದಬ್ಬಾಳಿಕೆ ಮಾಡಿದರು. ಪ್ರಜಾಪ್ರಭುತ್ವದ ಕತ್ತು ಹಿಸುಕಿದ್ದು ಕಾಂಗ್ರೆಸ್, ರಾಹುಲ್ ಇದನ್ನು ಅರ್ಥ ಮಾಡಿಕೊಳ್ಳಲಿ.



-ಅರಗ ಜ್ಞಾನೇಂದ್ರ, ಮಾಜಿ ಸಚಿವ.

ಮತದಾರರ ಪಟ್ಟಿ ತಯಾರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಥವಾ ಬಿಜೆಪಿ ನಾಯಕರ ಪಾತ್ರವೇ ಇಲ್ಲ. ಇದನ್ನು ಅಧಿಕಾರಿಗಳೇ ತಯಾರು ಮಾಡುತ್ತಾರೆ. ಹೀಗಾಗಿ ರಾಹುಲ್ ಗಾಂಧಿಯದ್ದು ಆಟಂ ಬಾಂಬ್ ಅಲ್ಲ. ಹೊಸೂರಿನಲ್ಲಿ ತಯಾರಾದ ಹಳೇ ಟುಸ್ ಪಟಾಕಿಯಾಗಿದೆ. ಮತದಾರರ ಪಟ್ಟಿಯ ಮೊದಲ ಪ್ರತಿಯನ್ನು ಬಿಎಲ್‌ಎಗೆ ನೀಡಲಾಗುತ್ತದೆ. ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ನೇಮಿಸಿದ್ದಾರೆ. ಮತದಾರರ ಪಟ್ಟಿಯಲ್ಲಿ ಸತ್ತವರ ಹೆಸರು ತೆಗೆದುಹಾಕುವುದು, ಹೊಸಬರನ್ನು ಸೇರಿಸುವುದು ಮೊದಲಾದ ಕೆಲಸವನ್ನು ಬಿಎಲ್‌ಎ ಮಾಡುತ್ತಾರೆ. ಇಂತಹ ಬಿಎಲ್‌ಎಗಳನ್ನು ನೇಮಿಸಿದ ಕಾಂಗ್ರೆಸ್ ಏನು ತಪ್ಪು ಮಾಡಿಲ್ಲವೇ?



- ಆರ್.ಅಶೋಕ್, ವಿಪಕ್ಷ ನಾಯಕ.

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅಪ್ರಬುದ್ಧ ನಾಯಕ. ದನ ಕಾಯುವ ಮಕ್ಕಳ ರೀತಿಯಲ್ಲಿ ಅವರು ಆಪಾದನೆ ಮಾಡುತ್ತಿದ್ದಾರೆ. ಅವರು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ರಾಜ್ಯ ಸರ್ಕಾರದ ಅಧಿಕಾರಿಗಳನ್ನೇ ಚುನಾವಣಾ ಕೆಲಸಕ್ಕೆ ನಿಯೋಜಿಸಲಾಗಿತ್ತು. ಅನಗತ್ಯವಾಗಿ ಕೇಂದ್ರ ಸರ್ಕಾರದ ಮೇಲೆ ಆರೋಪಿಸುವುದು ತಪ್ಪು. ರಾಜ್ಯದ ಆರ್ಥಿಕ ಸ್ಥಿತಿ ಅಧಃಪತನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬರೇ ಕಾರಣ ಅಲ್ಲ, ರಾಹುಲ್ ಗಾಂಧಿಯೂ ಕಾರಣ.



- ವಿ.ಸೋಮಣ್ಣ, ಕೇಂದ್ರ ಸಚಿವ.

ಮೈಸೂರಿನ ಎಪಿಎಂಸಿ ಅಂಗಡಿಯಲ್ಲಿ ನಗದು ಸೇರಿ ಅಕ್ಕಿ ಮೂಟೆ ಕಳ್ಳತನ

ಮರದ ದಿಮ್ಮಿ, ರಾಡ್ ಬಳಸಿ ರೋಲಿಂಗ್ ಶೆಟ್ಟರ್ ಮುರಿದಿರುವ ಖದೀಮರು



ಮೈಸೂರಿನ ನಂಜನಗೂಡು ರಸ್ತೆಯ ಎಂಪಿಎಂಸಿ ಅಂಗಡಿಯಲ್ಲಿ ಗುರುವಾರ ರಾತ್ರಿ ರೋಲಿಂಗ್ ಶೆಟ್ಟರ್ ಮುರಿದು ಕಳ್ಳತನ ನಡೆದಿದೆ.

ಮೈಸೂರು, ಆ.8(ಬಿಎಲ್‌ಯು)– ಮೈಸೂರಿನ ನಂಜನಗೂಡು ರಸ್ತೆಯ ಬಂಡಿಪಾಳ್ಯ ಬಳಿಯ ಎಪಿಎಂಸಿಯ ಅಂಗಡಿಗಳಲ್ಲಿ ರೋಲಿಂಗ್ ಶೆಟ್ಟರ್ ಮುರಿದು ಖದೀಮರು ನಗದು ಸೇರಿದಂತೆ ಅಕ್ಕಿ ಮೂಟೆಗಳನ್ನು ಹೊತ್ತೊಯ್ದಿದ್ದಾರೆ.

ಎಪಿಎಂಸಿಯ ತಾಜ್ ಎಂಟರ್ ಪ್ರೈಸಸ್ ಅಂಗಡಿಯಲ್ಲಿ ಮರದ ದಿಮ್ಮಿ, ಕಬ್ಬಿಣದ ರಾಡ್ ಮೂಲಕ ರೋಲಿಂಗ್ ಶೆಟ್ಟರ್ ಮೀಟಿ ಒಳ ಪ್ರವೇಶಿಸಿದ್ದಾರೆ. ಅಂಗಡಿಯ ಕ್ಯಾಶ್ ಟೇಬಲ್ ಒಡೆದಿರುವ ಖದೀಮರು ಅದರಲ್ಲಿದ್ದ ನಗದು ದೋಚಿದ್ದಾರೆ. ತರುವಾಯ ಅಶೋಕ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನದಲ್ಲಿ ಸುಮಾರು 15 ರಿಂದ 20 ಮೂಟೆ ಅಕ್ಕಿಯನ್ನು ಕದ್ದು ಸಾಗಿಸಿದ್ದಾರೆ.

ಇದೇ ಅಂಗಡಿ ಪಕ್ಕದಲ್ಲಿರುವ ರಾಘವೇಂದ್ರ ಟ್ರೇಡಿಂಗ್ ಕಂಪನಿಯ ಅಂಗಡಿಯಲ್ಲಿ ಮರದ ದಿಮ್ಮಿ ಬಳಸಿ ರಾಡ್‌ನಿಂದ ರೋಲಿಂಗ್ ಶೆಟ್ಟರ್ ಮೀಟಲು ಪ್ರಯತ್ನಿಸಿದ್ದಾರೆ. ಆದರೆ ಅದು ಸಾಧ್ಯವಾಗದೆ ಅಲ್ಲಿಂದ ತೆರಳಿದ್ದಾರೆ.

ತಾಜ್ ಎಂಟರ್ ಪ್ರೈಸಸ್ ಹಾಗೂ ಅಕ್ಕ ಪಕ್ಕದ ಅಂಗಡಿಗಳಲ್ಲಿರುವ ಸಿಸಿಟಿವಿ ಕ್ಯಾಮರಾಗಳ ಮೂಲಕ ಕಳ್ಳರ ಕೈಚಳಕ ಸೆರೆಯಾಗಿದೆ. ಆದರೆ ಅಕ್ಕಿ ಮೂಟೆ ಕದ್ದೊಯ್ಯಲು ತಂದಿದ್ದ ಮಿನಿ ಗೂಡ್ಸ್ ವಾಹನದ ನಂಬರ್ ಸ್ಪಷ್ಟವಾಗಿ ಕಾಣುತ್ತಿಲ್ಲ. ಈ ಕೃತ್ಯಕ್ಕೆ ಖದೀಮರು ಮಿನಿ ಗೂಡ್ಸ್ ವಾಹನವನ್ನು ಕೂಡ ಕದ್ದು ತಂದಿರುವ ಸಾಧ್ಯತೆ ಇದೆ ಎಂದು ಪೊಲೀಸರು ಸಂಶಯ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮೈಸೂರು ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಸೆರೆಗೆ ಮುಂದಾಗಿದ್ದಾರೆ.

ಎಪಿಎಂಸಿ ಸಿಸಿಟಿವಿ ಕ್ಯಾಮರಾ ಕೆಟ್ಟು ಹಲವು ತಿಂಗಳೇ ಕಳೆದಿವೆ

ಮೈಸೂರಿನ ನಂಜನಗೂಡು ರಸ್ತೆಯ ಬಂಡಿಪಾಳ್ಯ ಎಪಿಎಂಸಿಯಲ್ಲಿ ಅಳವಡಿಸಿರುವ ಹತ್ತಾರು ಸಿಸಿಟಿವಿ ಕ್ಯಾಮರಾಗಳು ಕೆಟ್ಟು ಬಹಳಷ್ಟು ತಿಂಗಳೇ ಕಳೆದರೂ ಅದನ್ನು ರಿಪೇರಿ ಮಾಡಿಸಲು ಇಲ್ಲವೇ ಹೊಸ ಸಿಸಿಟಿವಿ ಕ್ಯಾಮರಾ ಅಳವಡಿಸಲು ಎಪಿಎಂಸಿ ಅಧಿಕಾರಿಗಳು ಮುಂದಾಗದೆ ಬೇಜವಾಬ್ದಾರಿ ಮೆರೆದಿದ್ದಾರೆ.

ಎಪಿಎಂಸಿಯಲ್ಲಿ ನೂರಾರು ಅಂಗಡಿಗಳಿದ್ದು, ಪ್ರತಿ ದಿನ ಇಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುತ್ತದೆ. ಇಂತಹ ವಾಣಿಜ್ಯ ವ್ಯವಹಾರ ನಡೆಯುವ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾವನ್ನೇನೋ ಅಳವಡಿಸಲಾಗಿದೆ.

ಆದರೆ, ಈ ಕ್ಯಾಮರಾಗಳು ಕೆಟ್ಟು ಬಹಳಷ್ಟು ತಿಂಗಳಾಗಿದೆ. ಇದನ್ನು ಗಮನಿಸಿರುವ ಮೈಸೂರು ಗ್ರಾಮಾಂತರ ಪೊಲೀಸರು ಸಿಸಿಟಿವಿ ಅಳವಡಿಸುವಂತೆ ಪತ್ರ ಮುಖೇನ ಹಾಗೂ ಮೌಖಿಕವಾಗಿ ಬಹಳಷ್ಟು ಬಾರಿ ಸಲಹೆ ನೀಡಿದರೂ ಎಂಪಿಎಂಸಿ ಅಧಿಕಾರಿಗಳು ಈ ಬಗ್ಗೆ ಕಿಂಚಿತ್ತು ಗಮನ ನೀಡಿಲ್ಲ.

ಸಿಸಿಟಿವಿ ಕ್ಯಾಮರಾಗಳಿದ್ದರೆ ಸುತ್ತಮುತ್ತಲಿನ ಚಲನವಲನಗಳನ್ನು ಗಮನಿಸಬಹುದು. ಕಳ್ಳತನ ಸೇರಿದಂತೆ ಇತರೆ ಅಪರಾಧ ಕೃತ್ಯ ನಡೆದಾಗ ಆರೋಪಿಗಳ ಸೆರೆಗೆ ಪೊಲೀಸರಿಗೆ ಸಹಾಯವಾಗುತ್ತದೆ.

ಇಡೀ ಎಪಿಎಂಸಿ ಆವರಣಕ್ಕೆ ಕೇವಲ ಇಬ್ಬರು ಸೆಕ್ಯೂರಿಟಿಗಳನ್ನು ನಿಯೋಜಿಸಲಾಗಿದೆ. ಅವರು ಇಡೀ ರಾತ್ರಿ ಎಲ್ಲಾ ಕಡೆ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಹೆಚ್ಚಿನ ಸೆಕ್ಯೂರಿಟಿಗಳ ಅಗತ್ಯತೆ ಇದೆ ಎಂದು ವ್ಯಾಪಾರಸ್ಥರು ಅಭಿಪ್ರಾಯಪಟ್ಟಿದ್ದಾರೆ.

ಕಲಾಮಂದಿರದ ಚಿಂತಕರ ಚಾವಡಿಯಲ್ಲಿ 15 ದಿನಕ್ಕೊಂದು ಚಿಂತನ ಮಂಥನ ಕಾರ್ಯಕ್ರಮ

ರಂಗಕರ್ಮಿ ಎನ್.ಎಸ್. ಗೋಪಿನಾಥ್ ಘೋಷಣೆ


ಮೈಸೂರು, ಆ.8(ಎಂಟಿವೈ)– ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಏಕೀಕರಣಗೊಳಿಸಿ ಅದಕ್ಕಾಗಿ ಹೋರಾಡಿದ ಮಹನೀಯರ ಹೆಸರಿನಲ್ಲಿ ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಚಿಂತಕರ ಚಾವಡಿಯಲ್ಲಿ 15 ದಿನಕ್ಕೊಂದು ಚಿಂತನ ಮಂಥನ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ರಂಗಕರ್ಮಿ ಎನ್.ಎಸ್.ಗೋಪಿನಾಥ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಏಕೀಕರಣ ಟ್ರಸ್ಟ್ ವತಿಯಿಂದ ಚಿಂತನ ಮಂಥನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆ.10ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದ ಮುಂಭಾಗದ ಚಿಂತನ ಚಾವಡಿಯಲ್ಲಿ ಮೊದಲ ಕಾರ್ಯಕ್ರಮಕ್ಕೆ ಸಾಹಿತಿ ಪ್ರೊ.ಚ. ಸರ್ವಮಂಗಳ ಅವರು ಚಾಲನೆ ನೀಡಲಿದ್ದಾರೆ. ಅಂಕಣಕಾರ ನಾ. ದಿವಾಕರ ಮೊದಲ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಇದೊಂದು ವಿಶಿಷ್ಟ ರೀತಿಯ ಕಾರ್ಯಕ್ರಮವಾಗಿದ್ದು, ಯುವ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಆಯೋಜಿಸಲಾಗುತ್ತಿದೆ ಎಂದರು.

ಕರ್ನಾಟಕ ಏಕೀಕರಣ ಕುರಿತು ಅನೇಕರಿಗೆ ಗೊತ್ತಿಲ್ಲ. ಸಮಗ್ರ ಪಠ್ಯ ಪುಸ್ತಕವೂ ಬಂದಿಲ್ಲ. ಹೀಗಾಗಿ ಟ್ರಸ್ಟ್ ಅಂತಹ ಹೋರಾಟಗಾರರ ಬಗ್ಗೆ ವಿದ್ಯಾರ್ಥಿಗಳಿಗಾಗಿ ಈ ಉಪನ್ಯಾಸ ಮಾಲೆ ಆಯೋಜಿಸುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿಗಳಾದ ಧನಂಜಯ, ಅರಸಿಕೆರೆ ಯೋಗಾನಂದ, ಭಾಸ್ಕರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.08.2025 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್, ಮೈಗ್ರೇನ್ ಮತ್ತು ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ :** ಶ್ರೀ ಗುರುರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ, ಬೆಳಗ್ಗೆ 6.30 ರಿಂದ ಋಗ್‌ವೇದ, ಯಜುರ್ವೇದ, ಉಪಾಕರ್ಮ, ಬೆಳಗ್ಗೆ 11ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ 7ಕ್ಕೆ ಸರ್ವ ಸಮರ್ಪಣೋತ್ಸವ, ಧ್ವಜಾರೋಹಣ, ಧನದಾನ್ಯ ಪೂಜೆ, ಸ್ವಸ್ತಿವಾಚನ, ಮಹಾಮಂಗಳಾರತಿ, ಸ್ಥಳ: ಟ್ರಸ್ಟ್ ಆವರಣ, ಟಿ.ಕೆ. ಬಡಾವಣೆ 4ನೇ ಹಂತ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಯಜುರುಪಾಕರ್ಮ, ಯಜ್ಞೋಪವೀತ ಧಾರಣೆ ಮತ್ತು ಅಧ್ಯಯನ ಹೋಮ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 7.30 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸಹಜ ಸಮೃದ್ಧ :** ದೇಸಿ ಅಕ್ಕಿ ಮೇಳ, ಉದ್ಘಾಟನೆ: ಕೊಡಗು ಜಿಲ್ಲೆ ಪೊನ್ನಂಪೇಟೆ ಹುದೂರಿನ 57 ಬಗೆಯ ದೇಸಿ ಭತ್ತ ಸಂರಕ್ಷಕ ಬಿ.ಪಿ. ರವಿಶಂಕರ್, ಔಷಧೀಯ ಅಕ್ಕಿಗಳ ಅನಾವರಣ: ಸಿಎಸ್‌ಐಆರ್ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ನಿವೃತ್ತ ನಿರ್ದೇಶಕರಾದ ಡಾ. ಶ್ರೀದೇವಿ ಅನ್ನಪೂರ್ಣಸಿಂಗ್, ಮುಖ್ಯ ಅತಿಥಿಗಳು: ಈಕ್ವೇಟರ್ ಇನಿಷಿಯೇಟಿವ್ ಪ್ರಶಸ್ತಿ ವಿಜೇತರಾದ ಶ್ರೀಮತಿ ಬೇಬಿಜಾನ್, ಸುರೇಶ್‌ಕನ್ನಾ, ಶಿಗ್ಗಾಂವದ ದೇಸಿ ಭತ್ತ ಬೆಳೆಗಾರರ ಬಳಗದ ಶ್ರೀಮತಿ ಪ್ರೇಮ ಲೊಕ್ಕುಂಡಿ, ಅಧ್ಯಕ್ಷತೆ: ಸಹಜ ಸಮೃದ್ಧದ ನಿರ್ದೇಶಕ ಜಿ. ಕೃಷ್ಣಪ್ರಸಾದ್, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 11.30ಕ್ಕೆ, ಬೆಳಗ್ಗೆ 10 ರಿಂದ ರಾತ್ರಿ 8ರವರೆಗೆ ಸಾರ್ವಜನಿಕರಿಗೆ ಭೇಟಿಗೆ ಅವಕಾಶ.

■ **ಯೋಗ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್, ಗ್ಲೋಬಲ್ ಯೋಗ ಫೋರಂ :** 50ನೇ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್, ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನ ಗಂಟಿಗೆ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಆದಿವಾಸಿ ಸಂಘರ್ಷ ಮೋರ್ಚಾ :** ಆದಿವಾಸಿ ಚಿಂತನಾ ಸಮಾವೇಶ, ಸ್ಥಳ: ಐಡಿಯಲ್ ಜಾವಾ ರೋಟರಿ ಸ್ಕೂಲ್ ಆವರಣ, ಚಾಮರಾಜಪುರಂ, ಬೆಳಗ್ಗೆ 10ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** ಬೆಳಗ್ಗೆ 9ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಬೆಳಗ್ಗೆ 10.30ಕ್ಕೆ ಪ್ರತಿಭಾ ಪುರಸ್ಕಾರ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಕರಗ ದೇವಸ್ಥಾನ, ವಿದ್ಯಾರಣ್ಯಪುರಂ.

■ **ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ, ಬೆಳಗ್ಗೆ ಹುಣ್ಣಿಮೆ, ಉಪಾಕರ್ಮ, ಸಂಜೆ ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಶ್ರೀ ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ, ಹುಡ್ಕೋ 1ನೇ ಹಂತ, ಬನ್ನಿಮಂಟಪ :** 35ನೇ ವಾರ್ಷಿಕೋತ್ಸವ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯ, ಬೆಳಗ್ಗೆ 7 ರಿಂದ ಗಣಪತಿ ಪೂಜೆ, ನವಗ್ರಹ ಪೂಜೆ, ಬೆಳಗ್ಗೆ 10ಕ್ಕೆ ಋಗ್ ಯಜುರ್ ಉಪಾಕರ್ಮ ಪ್ರಯುಕ್ತ ಋಷಿ ಪೂಜೆ, ಯಜ್ಞೋಪವಿತ ಧಾರಣೆ, ಋಷಿ ಹೋಮ, ಮಧ್ಯಾಹ್ನ 1.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಗಣಪತಿ ಹೋಮ, ನವಗ್ರಹ ಹೋಮ ಪರಿವಾರ ದೇವತೆಗಳ ಹೋಮ, ರಾತ್ರಿ 8ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಾಲಯ, ಹುಡ್ಕೋ 1ನೇ ಹಂತ, ಬನ್ನಿಮಂಟಪ.

■ **ಕದಂಬ ಕನ್ನಡ ಸೇನೆ ಕರ್ನಾಟಕ :** ಹಾರಿಸೋಣ ಬನ್ನಿ ಕನ್ನಡಿಗರೇ ಮನೆ ಮನೆಗಳ ಮೇಲೆ ಕನ್ನಡದ ಬಾವುಟ ಶೀರ್ಷಿಕೆಯಡಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ತ್ಯಾಗದ ಅವಿಸ್ಮರಣೀಯ ಸವಿನೆನಪು ಕಾರ್ಯಕ್ರಮ,ಸ್ಥಳ: ಆರ್.ಗೇಟ್, ಜಯಚಾಮರಾಜೇಂದ್ರ ಒಡೆಯರ್ ವೃತ್ತ, ಬೆಳಗ್ಗೆ 11ಕ್ಕೆ.

■ **ಅನಿಸಿಕೆಗಳು :** ಗುಂಪು ಚಿತ್ರಕಲೆ ಪ್ರದರ್ಶನ, ಭಾಗವಹಿಸುವವರು : ಬಾಲು ಭಾಸ್ಕರ್, ಗೌತಮಿ ಕಲ್ಬಾರ್, ಜ್ಯೋತಿ ಮಚ್ಚಿಗಡ್, ನೂತನ್ ರಾಜ್, ಪೂಜಾ ಶರ್ಮಾ, ಶಿವರಾಜ್ ಎಂ., ಸುರೇನಾ ಶೆಟ್ಟಿ, ಸುವರ್ಣ ಮಾಗಜಿ, ಸ್ಥಳ: ಹೆರಿಟೇಜ್ ಹೌಸ್, ಕಾಂತರಾಜ ಅರಸ್ ರಸ್ತೆ, ಕುಕ್ಕರಹಳ್ಳಿ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು :** ಹಳೆಯ ವಿದ್ಯಾರ್ಥಿಗಳ ಸಭೆ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ. ಸುರೇಶ್, ಜೆಎಸ್‌ಎಸ್ ಎಎಚ್‌ಇಆರ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಅಧ್ಯಕ್ಷತೆ : ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಟಿ.ಎಂ. ಪ್ರಮೋದ್ ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರ್ ವಾರಿಯರ್ಸ್, ಪವರ್ಡ್ ಬೈ ಸೈಕಲ್ ಪ್ಯೂರ್ ಅಗರಬತ್ತಿ :** ತಂಡದ ಸದಸ್ಯರ ಪರಿಚಯ ಕಾರ್ಯಕ್ರಮ, ಸ್ಥಳ : ರ್ಯಾಡಿಸನ್ ಬ್ಲೂ ಹೋಟೆಲ್, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಕನ್ನಡ ಪಿಎಚ್.ಡಿ. ಕೋರ್ಸ್ ವರ್ಕ್‌ನ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಕಾಳೇಗೌಡ ನಾಗವಾರ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ, ಉಪಸ್ಥಿತರು : ಪ್ರಾಧ್ಯಾಪಕರಾದ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಪ್ರೊ. ಎಸ್.ಡಿ. ಶಶಿಕಲಾ, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮುಖ್ಯ ಅತಿಥಿಗಳು : ಭದ್ರತಾ ಮತ್ತು ಜಾಗೃತ ಶಾಖೆ ನಿರ್ದೇಶಕ ಅಬ್ದುಲ್ ಅಹದ್, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ಗಾಯತ್ರಿದೇವಿ ಅಮ್ಮನವರ ದೇವಸ್ಥಾನ :** ಕಳಶ ಸ್ಥಾಪನೆ ಮತ್ತು ಗಾಯತ್ರಿದೇವಿ ಅಮ್ಮನವರ ಹೋಮ, ಸಂಜೆ 6ಕ್ಕೆ ಪುಣ್ಯಾಹಃ, ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ಮಂಡಲ ಪೂಜೆ, ಕಳಶ ಸ್ಥಾಪನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಗಾಯತ್ರಿದೇವಿ ಅಮ್ಮನವರ ದೇವಸ್ಥಾನ, ಅರಮನೆ ಕೋಟೆ ಆವರಣ.

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಯುವ ಸೌರಭ–ನೂತನ ಮಾಲಿಕೆ, ರಾಜ್ಯ ಯುವ ಕಲಾವಿದರ ಪ್ರತಿಭಾ ಪ್ರದರ್ಶನ, ಮುಖ್ಯ ಅತಿಥಿಗಳು : ಸಂಗೀತ ವಿದುಷಿ ಡಾ. ಆರ್.ಎನ್. ಶ್ರೀಲತಾ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದುಷಿ ಲಾವಣ್ಯ ಕೃಷ್ಣಮೂರ್ತಿ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಪರಮಹಂಸಾನಂದ ಅವರಿಂದ ಕ್ಲೀನ್ಸಿಂಗ್ ಅವರ್ ಚಿತ್ತ ಅಕಾರ್ಡಿಂಗ್ ಟು ಭಗವದ್ಗೀತಾ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಮಾತೃ ಮಂಡಳಿ :** 90ರ ಸಂಭ್ರಮ, ಉದ್ಘಾಟನೆ : ಚಲನಚಿತ್ರ ನಟಿ ಉಮಾಶ್ರೀ, ಸ್ಮರಣ ಸಂಚಿಕೆ ಬಿಡುಗಡೆ : ಕವಯಿತ್ರಿ ಶ್ರೀಮತಿ ಧರಣೀದೇವಿ ಮಾಲಗತ್ತಿ, ಭಾವಚಿತ್ರ ಅನಾವರಣ : ಶಾಸಕ ಹರೀಶ್‌ಗೌಡ, ಉಪಸ್ಥಿತರು : ಗೌರವ ಉಪಾಧ್ಯಕ್ಷರಾದ ಶ್ರೀಮತಿ ರಾಮೇಶ್ವರಿ ವರ್ಮ, ಅಧ್ಯಕ್ಷತೆ : ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಅರಸ್, ಸ್ಥಳ: ಶಾಲಾ ಆವರಣ, ಸಂಜೆ 6ಕ್ಕೆ.

■ **ಮೈಸೂರಿನ ಶ್ರೀ ಸುತ್ತೂರು ಮಠ :** ಗುರುಪೂರ್ಣಿಮೆ ಹಾಗೂ ಬೆಳದಿಂಗಳ ಸಂಗೀತ–282ರ ಅಂಗವಾಗಿ ವಿದುಷಿ ಡಾ. ಶುಭಮಂಗಳ ರಘುನಂದನ್ ಅವರಿಂದ ಗಾಯನ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಜಿ. ವೆಂಕಟೇಶ್ ಜೋಸ್ಯರ್–ವಯೋಲಿನ್, ವಿದ್ವಾನ್ ಡಾ. ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಎನ್. ಗುರುಮೂರ್ತಿ–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು : ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30 ರಿಂದ.

■ **ಕಲಾಸುರುಚಿ, ಕುತೂಹಲಿ–ಕನ್ನಡ :** ವಿಜ್ಞಾನ ಸಂಜೆ ಕಾರ್ಯಕ್ರಮ, ಬೆಂಗಳೂರು ಅಪೋಲೋ ಆಸ್ಪತ್ರೆಯ ನರರೋಗ ತಜ್ಞ ಡಾ. ಸೂರ್ಯನಾರಾಯಣ ಅವರಿಂದ ಪಾರ್ಶ್ವವಾಯು ಕುರಿತು ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

■ **ಬೆಂಗಳೂರಿನ ರಂಗ ಸಂಪದ ಕಲಾ ತಂಡ :** ರಂಗ ಸಂಪದ ಕಲಾವಿದರಿಂದ ಶೇಷಗ್ರಸ್ಥರು ನಾಟಕ ಪ್ರದರ್ಶನ, ಸ್ಥಳ: ಕಿರು ರಂಗ ಮಂದಿರ, ರಂಗಾಯಣ, ಸಂಜೆ 7ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

■ **ಶನೇಶ್ವರ ದೇವಸ್ಥಾನ ಸಮಿತಿ :** 50ನೇ ವರ್ಷದ ಶ್ರೀ ಶನೇಶ್ವರ ಸ್ವಾಮಿಯ ಶ್ರಾವಣ ಮಾಸದ ವಾರ್ಷಿಕೋತ್ಸವ ಕಾರ್ಯಕ್ರಮ, ಬೆಳಿಗ್ಗೆ ಕಪಿಲಾ ನದಿಯಿಂದ ಕುಂಭಮೇಳ ಮೆರವಣಿಗೆ ತಂದು ದೇವಸ್ಥಾನ ಅವರಣದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ, ದೀಕ್ಷಾಲಂಕಾರ ಪೂಜೆ, ಶನಿ ದೇವರ ಪೂಜೆ, ಪಂಚಾಭಿಷೇಕ, ಹೋಮ ಅಭಿಷೇಕ, ಪೂರ್ಣಾಹುತಿ, ಮಹಾಮಂಗಳಾರತಿ ಇನ್ನಿತರ ಪೂಜಾ ಕೈಂಕರ್ಯ, ಸಾನ್ನಿಧ್ಯ : ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ–ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ.ವಿಶ್ವನಾಥ್ ಹಾಗೂ ಬಿ. ಶ್ರೀರಾಂ ಭಟ್, ವ್ಯಾಖ್ಯಾನ –ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ –ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ–ಅಪ್ಪಣೆ ಮಹಾಪ್ರಭು, ನಿರ್ದೇಶನ– ಶಂಕರ್ ಎಸ್. ಭಟ್, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ–ತರಕಾರಿ ಬೇಸಾಯ ಈ ಕುರಿತು ಸಂವಾದ, ಭಾಗವಹಿಸುತ್ತಾರೆ–ಟಿ. ನರಸೀಪುರ ತಾಲೂಕು ರಂಗಸಮುದ್ರದ ಕೃಷಿಕ ದಂಪತಿ ಬಸವರಾಜ್ ಮತ್ತು ಮಂಗಳ ಗೌರಮ್ಮ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಇಸ್ ಸಪ್ತಾಹ್ ಮೆ ಸಂಸದ್, 8.15 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮನೋಜ್ ಪಾಟಿದಾರ್ –ತಬಲ ವಾದನ, ವಿದ್ವಾನ್ ಸೋಮಶೇಖರ ಜೋಯಿಷ್–ಕೋನ್ನಕೋಲ್ ವಾದನ

ರಾತ್ರೋರಾತ್ರಿ ವಿಷ್ಣು ಸಮಾಧಿ ನೆಲಸಮ: ಅಭಿಮಾನಿಗಳಿಂದ ತೀವ್ರ ಆಕ್ರೋಶ



ಬೆಂಗಳೂರು, ಆ.8– ಅಭಿಮಾನಿಗಳ ವಿರೋಧದ ನಡುವೆಯೂ ಡಾ.ವಿಷ್ಣುವರ್ಧನ್ ಅವರ ಸಮಾಧಿಯನ್ನು ತೆರವುಗೊಳಿಸಿದ್ದು, ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಹೈಕೋರ್ಟ್ ಸೂಚನೆ ಮೇರೆಗೆ ಅಭಿಮಾನ್ ಸ್ಟುಡಿಯೋದಲ್ಲಿದ್ದ ಸಮಾಧಿಯನ್ನು ರಾತ್ರೋರಾತ್ರಿ ತೆರವುಗೊಳಿಸಲಾಗಿದೆ. ಇದರಿಂದ ಆಘಾತಕ್ಕೆ ಒಳಗಾಗಿರುವ ವಿಷ್ಣು ಅಭಿಮಾನಿಗಳು ಸರ್ಕಾರ, ಪೊಲೀಸ್ ಇಲಾಖೆ ಹಾಗೂ ವಾಣಿಜ್ಯ ಮಂಡಳಿ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

35 ವರ್ಷಗಳ ಕಲಾಸೇವೆ ಮತ್ತು 200 ಕನ್ನಡ ಚಲನಚಿತ್ರದಲ್ಲಿ ಅಭಿನಯಿಸಿ, ಕನ್ನಡಿಗರ ಮನಗೆದ್ದ ಡಾ.ವಿಷ್ಣುವರ್ಧನ್ ಅವರ ಅಂತ್ಯಕ್ರಿಯೆಯನ್ನು ಬೆಂಗಳೂರಿನ ಕೆಂಗೇರಿಯಲ್ಲಿರುವ ಅಭಿಮಾನ್ ಸ್ಟುಡಿಯೋ ಆವರಣದಲ್ಲಿ ನಡೆಸಲಾಗಿತ್ತು. ನಂತರದಲ್ಲಿ ವಿಷ್ಣು ಸಮಾಧಿಯನ್ನು ಸಂರಕ್ಷಿಸಿ, ಅದನ್ನು ಸ್ಮಾರಕವಾಗಿ ಘೋಷಿಸಬೇಕೆಂಬ ಹೋರಾಟ ನಡೆಯುತ್ತಲೇ ಇತ್ತು. ಆದರೆ ಹೈಕೋರ್ಟ್ ಸೂಚನೆ ಮೇರೆ ರಾತ್ರೋರಾತ್ರಿ ಸಮಾಧಿಯನ್ನು ತೆರವುಗೊಳಿಸಲಾಗಿದೆ.

ಸದ್ಯ ಮೈಸೂರಿನಲ್ಲಿ ಈಗಾಗಲೇ ಒಟ್ಟು 2.75 ಎಕರೆ ಪ್ರದೇಶದಲ್ಲಿ ವಿಷ್ಣು ಸ್ಮಾರಕ ನಿರ್ಮಾಣ ಆಗಿದೆ. ವಿಷ್ಣು ಸಿನಿಮಾದಲ್ಲಿನ ಪ್ರಶಸ್ತಿಗಳೂ ಸ್ಮಾರಕದ ಮ್ಯೂಸಿಯಂನಲ್ಲಿದೆ. ವಿಶೇಷವಾದ ವಿಷ್ಣು ಪುತ್ಥಳಿಯನ್ನೂ ನಿರ್ಮಿಸಲಾಗಿದೆ. ನಟನ ಚಲನಚಿತ್ರ ಪ್ರಯಾಣದ ಗ್ಯಾಲರಿ, ವಿಷ್ಣು ಅವರ ಅಪರೂಪದ 600ಕ್ಕೂ ಹೆಚ್ಚು ಫೋಟೋಗಳು, ವಿಷ್ಣು ಬಳಸುತ್ತಿದ್ದ ವಸ್ತುಗಳು, ಬಟ್ಟೆ ಇಲ್ಲಿ ನೋಡಬಹುದಾಗಿದೆ. ಮಾಜಿ ಸಿಎಂ ಬಿ ಎಸ್ ಯಡಿಯೂರಪ್ಪ ಅವರು ವಿಷ್ಣುವರ್ಧನ್ ಸ್ಮಾರಕಕ್ಕೆ ಸೆಪ್ಟೆಂಬರ್ 15, 2020 ರಂದು ಶಂಕುಸ್ಥಾಪನೆ ನೆರವೇರಿಸಿದ್ದರು. ವಿಷ್ಣು ಸ್ಮಾರಕದಲ್ಲಿ ಎರಡು ಕ್ಲಾಸ್ ರೂಮ್ ಕೂಡ ನಿರ್ಮಾಣ ಮಾಡಲಾಗಿದೆ. ಆಡಿಟೋರಿಯಂ ಕೂಡ ಇಲ್ಲಿ ನಿರ್ಮಿಸಲಾಗಿದೆ.

ಮೈಸೂರಲ್ಲಿ ವಿಷ್ಣು ಅಭಿಮಾನಿಗಳಿಗೆ ಕರಾಳ ದಿನ



ಮೈಸೂರು, ಆ.8– ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಡಾ.ವಿಷ್ಣುವರ್ಧನ್ ಉದ್ಯಾನವನದ ಮುಂಭಾಗ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟದ ವತಿಯಿಂದ ಬೆಂಗಳೂರಿನ ಅಭಿಮಾನಿ ಸ್ಟುಡಿಯೋದಲ್ಲಿರುವ ಸಾಹಸಸಿಂಹ ವಿಷ್ಣುವರ್ಧನ್ ಅವರ ಪುಣ್ಯಭೂಮಿ ಧ್ವಂಸ ಮಾಡಿರುವ ಹಿನ್ನೆಲೆಯಲ್ಲಿ ಅಭಿಮಾನಿಗರು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಭಿಮಾನಿ ಬಳಗದ ಅಧ್ಯಕ್ಷ ಎಂ ಡಿ ಪಾರ್ಥಸಾರಥಿ ಇಂದು ದೇಶಾದ್ಯಂತ ವರಮಹಾಲಕ್ಷ್ಮಿ ಹಬ್ಬವನ್ನು ಸಡಗರದಿಂದ ಆಚರಿಸುತ್ತಿದ್ದು, ಆದರೆ ವಿಷ್ಣು ಅಭಿಮಾನಿಗಳಿಗೆ ಇಂದು ಕರಾಳ ದಿನವಾಗಿದೆ. ವಿಷ್ಣು ಅಭಿಮಾನಿಗಳಿಗೆ ವಿಷ್ಣುವಿನ ಸಾವು ಮತ್ತೊಮ್ಮೆ ನೆನಪಾಗುತ್ತಿದೆ. ವಿಷ್ಣುವರ್ಧನ್‌ರವರ ಪುಣ್ಯಭೂಮಿಯನ್ನು ಧ್ವಂಸ ಮಾಡಿರುವುದು ಅಭಿಮಾನಿಗಳಿಗೆ ತೀವ್ರ ನೋವುಂಟು ಮಾಡಿದೆ. ಈ ಕೂಡಲೇ ಸರ್ಕಾರ ಮಧ್ಯಸ್ಥಿಕೆ ವಹಿಸಿ ಅಭಿಮಾನಿಗಳ ಸಭೆ ಕರೆದು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಅಭಿಮಾನಿಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷರಾದ ವಿನಯ್ ಕುಮಾರ್, ಎಸ್.ಎನ್.ರಾಜೇಶ್, ವಿನಯ್ ಕಣಗಾಲ್, ಬೈರತಿ ಲಿಂಗರಾಜು, ಲೋಕೇಶ್, ಮಹಾನ್ ಶ್ರೇಯಸ್, ಬಸವರಾಜ್, ಸಂತೋಷ್, ಚಿನ್ನ–ಬೆಳ್ಳಿ ಸಿದ್ದಪ್ಪ, ಮಹದೇವ್, ಸುಚೇಂದ್ರ, ಮಿರ್ಲೆ ಫಣೀಶ್, ಹೊಸಮಠ, ಅಭಿ ಹಾಗೂ ವಿಷ್ಣು ಅಭಿಮಾನಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಮೈಸೂರಲ್ಲಿ ಇಂದು ಶ್ರೀಮತಿ ಇಂದಿರಾ ಗಾಂಧಿ ಕಾಂಗ್ರೆಸ್ ಭವನಕ್ಕೆ ಭೂಮಿ ಪೂಜೆ

ಪಾರಂಪರಿಕ ಶೈಲಿಯಲ್ಲಿ ಅಂದಾಜು 10 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸುಸಜ್ಜಿತ ಭವನ



ಮೈಸೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಶ್ರೀಮತಿ ಇಂದಿರಾಗಾಂಧಿ ಕಾಂಗ್ರೆಸ್ ಭವನದ ನೀಲನಕ್ಷೆ

ಮೈಸೂರು, ಆ.8–ಮೈಸೂರಿನಲ್ಲಿ ಪಾರಂಪರಿಕ ಶೈಲಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಕಾಂಗ್ರೆಸ್ ಭವನ ನಿರ್ಮಿಸಲು ಕೆಪಿಸಿಸಿ ಮತ್ತು ಮೈಸೂರು ಜಿಲ್ಲಾ ಹಾಗೂ ನಗರ ಕಾಂಗ್ರೆಸ್ ನಿರ್ಧರಿಸಿದೆ.

ಅದಕ್ಕಾಗಿ ಪಾರಂಪರಿಕ ಶೈಲಿಯ ನೀಲ ನಕ್ಷೆಯನ್ನು ಸಿದ್ಧಪಡಿಸಲಾಗಿದೆ. ರೈಲ್ವೆ ನಿಲ್ದಾಣದ ಬಳಿ ಇರುವ ಕಾಂಗ್ರೆಸ್ ಭವನದಲ್ಲಿ ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀಮತಿ ಇಂದಿರಾ ಗಾಂಧಿ ಕಾಂಗ್ರೆಸ್ ಭವನಕ್ಕೆ ಭೂಮಿ ಪೂಜೆ ನೆರವೇರಿಸಲಿದ್ದಾರೆ.

ಈ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್ ಸೇರಿದಂತೆ ಪಕ್ಷದ ಹಲವು ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್ ಮತ್ತು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ತಿಳಿಸಿದ್ದಾರೆ.

ಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಭವನವನ್ನು ಒಂದು ವರ್ಷದೊಳಗೆ ಪೂರ್ಣ ಗೊಳಿಸಲು ಚಿಂತನೆ ನಡೆಸಲಾಗಿದೆ ಒಂದು ಸಾವಿರ ಮಂದಿ ಕೂರುವ ಸಭಾಂಗಣ ವಿವಿಧ ಸಮಿತಿಗಳಿಗೆ ಪ್ರತ್ಯೇಕ ಕೊಠಡಿಗಳು, ವಾರ್ ರೂಂ ಕೊಠಡಿ, ಮಾಧ್ಯಮದವರಿಗೆ ಪ್ರತ್ಯೇಕ ಸಭಾಂಗಣ ಬೋರ್ಡ್ ರೂಂ ಮುಂತಾದವುಗಳನ್ನೊಳಗೊಂಡ ಸುಸಜ್ಜಿತ ಭವನ ನಿರ್ಮಾಣಕ್ಕೆ ನೀಲ ನಕ್ಷೆ ತಯಾರಿಸಲಾಗಿದೆ.

ಗೃಹಲಕ್ಷ್ಮಿ ಹಣದಲ್ಲಿ ವರಮಹಾಲಕ್ಷ್ಮಿ ಹಬ್ಬ ಆಚರಣೆ!



ಮೈಸೂರು, ಆ. 8– ಮಹಿಳೆಯರಿಗಾಗಿ ನೀಡಿರುವ ಸರ್ಕಾರದ ಮಹತ್ವದ ಯೋಜನೆಯಲ್ಲಿ ಒಂದಾದ ಗೃಹಲಕ್ಷ್ಮಿ ಹಣದಲ್ಲಿ ವರಮಹಾಲಕ್ಷ್ಮಿ ಹಬ್ಬವನ್ನು ಭಕ್ತಿ ಭಾವದಿಂದ ಆಲನಹಳ್ಳಿ ನಿವಾಸಿ ಜ್ಯೋತಿ ಮಹದೇವ ಸ್ವಾಮಿ ಆಚರಿಸಿದರು. ಈ ವೇಳೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಚಿತ್ರ ಹಿಡಿದು, ವಿಶೇಷ ಪ್ರಾರ್ಥನೆ ಮೂಲಕ ಗಮನ ಸೆಳೆದರು.

ಈ ಸಂದರ್ಭದಲ್ಲಿ ಮಾತನಾಡಿದ ಗೃಹಿಣಿ ಜ್ಯೋತಿ ಮಹದೇವ, ಎರಡು ವರ್ಷದಿಂದ ನಮ್ಮ ಖಾತೆಗೆ ಗೃಹಲಕ್ಷ್ಮಿ ಹಣವನ್ನು ಸರ್ಕಾರ ಹಾಕುತ್ತಿದ್ದು ಮಧ್ಯಮ ವರ್ಗ ಹಾಗೂ ಬಡವರು ಈ ಹಣದಲ್ಲಿ ಹಬ್ಬ–ಹರಿದಿನಗಳ ಆಚರಿಸಲು ಅನುಕೂಲವಾಗುತ್ತಿದೆ. ಮೂರು ತಿಂಗಳಿಂದ ಖಾತೆಗೆ ಗೃಹಲಕ್ಷ್ಮಿ ಹಣ ಬಾರದಿರುವುದರಿಂದ ಸ್ವಲ್ಪ ಸರಳವಾಗಿ ಹಬ್ಬ ಆಚರಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಗೃಹಲಕ್ಷ್ಮಿ ಹಣ ಬರುವ ನಿರೀಕ್ಷೆ ಇದೆ. ಇದಕ್ಕೆ ಮುಖ್ಯ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳು ಎಂದು ಹೇಳಿದ್ದಾರೆ.

ಚಾಮುಂಡಿ ಬೆಟ್ಟದಲ್ಲಿ ವರಮಹಾಲಕ್ಷ್ಮಿ ಬಾಗಿನ ಸಮರ್ಪಣೆ



ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ವತಿಯಿಂದ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ದೇವಿ ದರ್ಶನಕ್ಕೆ ಬಂದ ಭಕ್ತಾದಿಗಳಿಗೆ ಮಡಲ ಅಕ್ಕಿ, ಬಾಳೆ ಅರಿಶಿಣ ಹಾಗೂ ಕುಂಕುಮ ವಿತರಣೆ ಮಾಡುವುದರ ಮೂಲಕ ಬಾಗಿನ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಡಾ.ಶಶಿಶೇಖರ್ ದೀಕ್ಷಿತ್, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜು, ನಾಗರಾಜು, ಸಿಬ್ಬಂದಿ ಉಮೇಶ್, ಸಮಾಜ ಸೇವಕ ಮಂಜುನಾಯಕ ಮತ್ತಿತರರು ಉಪಸ್ಥಿತರಿದ್ದರು.

ಟಿಪ್ಪು ಕೆಆರ್‌ಎಸ್ ಜಲಾಶಯಕ್ಕೆ ಅಡಿಗಲ್ಲು ಹಾಕಿದ್ದು ಎಂದಷ್ಟೇ ಸಚಿವ ಮಹದೇವಪ್ಪ ಹೇಳಿದ್ದಾರೆ

ಇದನ್ನೇ ಬಿಜೆಪಿಯವರು ವಿವಾದ ಮಾಡುತ್ತಿದ್ದಾರೆ: ರಾಜೇಶ್



ಮೈಸೂರು, ಆ.8(ಎಂಟಿವೈ)– ಕೆಆರ್‌ಎಸ್ ಜಲಾಶಯ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದು ಟಿಪ್ಪು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದ್ದಾರೆಯೇ ಹೊರತು ಅಣೆಕಟ್ಟು ನಿರ್ಮಿಸಿದ್ದಾರೆ ಎಂದು ಹೇಳಿಲ್ಲ. ಆದರೆ, ಬಿಜೆಪಿ ನಾಯಕರು ರಾಜಕೀಯ ಲಾಭಕ್ಕಾಗಿ ವಿವಾದ ಸೃಷ್ಟಿಸುತ್ತಿದ್ದಾರೆ ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದ ಬಗ್ಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಪಾರ ಗೌರವವಿದೆ. ಮೈಸೂರು ಅರಸರು ಕೆಆರ್‌ಎಸ್ ಜಲಾಶಯ ನಿರ್ಮಾಣಕ್ಕೆ ಮುಂದಾದ ವೇಳೆ ಸಿಕ್ಕಿದ ಅಡಿಗಲ್ಲನ್ನು ಈಗಲೂ ಸಂರಕ್ಷಿಸಲಾಗಿದೆ. ಡಾ.ಹೆಚ್.ಸಿ.ಮಹದೇವಪ್ಪ ಅವರು ಇತಿಹಾಸವನ್ನು ಎಲ್ಲಿಯೂ ತಿರುಚಿಲ್ಲ. ಟಿಪ್ಪುವಿನ ಸಾಮಾಜಿಕ ಕಳಕಳಿ ಕುರಿತು ಅವರು ಮಾತನಾಡಿದ್ದಾರೆ. ಟಿಪ್ಪು ಸುಲ್ತಾನ್ ಸಮ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದ್ದರು. ದಲಿತರಿಗೆ, ಭೂ ರಹಿತರಿಗೆ ಭೂಮಿ ನೀಡುವ ಮೂಲಕ ಉಳುವವನೆ ಒಡೆಯ ಎಂಬುದರ ಪಾಲನೆಗೆ ಮುಂದಾಗಿದ್ದ. ಶ್ರೀರಂಗಪಟ್ಟಣ, ಶೃಂಗೇರಿ ಮಠ, ಕೊಲ್ಲೂರು ದೇವಸ್ಥಾನ ಗಳಿಗೂ ಧಾರ್ಮಿಕ ದತ್ತಿ ನೀಡಿದ್ದಾನೆ. ಇದನ್ನು ಮರೆಮಾಚುವ ಕೆಲಸ ಮಾಜಿ ಸಂಸದ ಪ್ರತಾಪ್‌ಸಿಂಹ ಹಾಗೂ ಬಿಜೆಪಿಯವರು ಮಾಡುತ್ತಿದ್ದಾರೆ. ರಾಜಕೀಯ ದುರುದ್ದೇಶದಿಂದ ಸಚಿವರ ತೇಜೋವಧೆಗೆ ಯತ್ನ ನಡೆದಿದೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಒಬಿಸಿ ಕಾರ್ಯದರ್ಶಿ ಬಿ.ಜಿ. ಕೇಶವ, ಸುನೀಲ್ ನಾರಾಯಣ್, ಕುಕ್ಕರಹಳ್ಳಿ ನಂಜುಂಡಸ್ವಾಮಿ ಇದ್ದರು

ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೃಷ್ಣಭೈರೇಗೌಡ ನೇಮಕ



ಹಾಸನ, ಆ.8– ಇಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆ ವಿಚಾರವಾಗಿ ಕಳೆದ ಹಲವು ದಿನಗಳಿಂದ ಎದ್ದಿದ್ದ ಊಹಾಪೋಹಗಳಿಗೆ ಕೊನೆಗೂ ತೆರೆಬಿದ್ದಿದೆ. ಹಾಸನ ಜಿಲ್ಲಾ ನೂತನ ಉಸ್ತುವಾರಿ ಸಚಿವರನ್ನಾಗಿ ಕಂದಾಯ ಸಚಿವ ಕೃಷ್ಣಭೈರೇಗೌಡರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಉಸ್ತುವಾರಿ ಹೊಣೆಗಾರಿಕೆಯನ್ನು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೊತ್ತಿದ್ದರು. ಈಗ ಕೃಷ್ಣಭೈರೇಗೌಡ ಅವರನ್ನು ನೇಮಿಸಿ ಸ್ವತಃ ಸಿಎಂ ಆದೇಶ ಹೊರಡಿಸಿದ್ದಾರೆ. ಈ ಹಿಂದೆ ಸ್ವತಃ ಕೆ.ಎನ್.ರಾಜಣ್ಣ ಅವರು ನನಗೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದ ಜವಾಬ್ದಾರಿಯಿಂದ ಬಿಡುಗಡೆ ಮಾಡಿ ಎಂದು ಖುದ್ದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದರು. ಆದರೆ ಕೆ.ಎನ್. ರಾಜಣ್ಣ ಅವರನ್ನು ಬದಲಾವಣೆ ಮಾಡಿರಲಿಲ್ಲ ಕೃಷ್ಣಭೈರೇಗೌಡರನ್ನು ಹಾಸನ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡಿರುವುದಕ್ಕೆ ಜೆಡಿಎಸ್ ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಸ್ವಾಗತಿಸಿದ್ದಾರೆ. ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್.ರಾಜಣ್ಣ ಅವರು ನಮಗೆ ಸಹಕಾರ ಮಾಡಿದ್ದರು. ಇದೀಗ ಕೃಷ್ಣಭೈರೇಗೌಡರನ್ನು ನೇಮಿಸಲಾಗಿದೆ. ಕೃಷ್ಣಭೈರೇಗೌಡರು ಕಂದಾಯ ಸಚಿವರಾದ ಮೇಲೆ ಕಂದಾಯ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆ ತಂದಿದ್ದಾರೆ. ಆದ್ದರಿಂದ ಜಿಲ್ಲೆಯ ಜನತೆ ಹಾಗೂ ನಾವು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದು ಮುಂದಿನ ದಿನಗಳಲ್ಲಿ ಹಾಸನ ಜಿಲ್ಲೆಯ ಅಭಿವೃದ್ಧಿ ಜೊತೆಗೆ ಸಾರ್ವಜನಿಕರಿಗೂ ಉತ್ತಮವಾದ ಕೆಲಸಗಳಾಗುತ್ತವೆ ಎಂಬ ಭರವಸೆ ಮೂಡಿದೆ ಎಂದಿದ್ದಾರೆ.

ಆಂಧ್ರದಿಂದ ತಂದ 16 ಅಡಿಯ ಬೃಹತ್ ಗಣಪನ ಪ್ರತಿಷ್ಠಾಪನೆಗೆ ಗಂಗೋತ್ರಿ ಬಾಯ್ಸ್ ಸಿದ್ಧತೆ



ಮೈಸೂರು, ಆ.8(ವಿವಿಹೆಚ್)– ಇದೇ ಆ.27 ರಂದು ದೇಶಾದ್ಯಂತ ಅದ್ಧೂರಿಯಾಗಿ ಆಚರಣೆ ಮಾಡಲಿರುವ ಗಣೇಶ ಚತುರ್ಥಿಗೆ ದಿನಗಣನೇ ಆರಂಭವಾಗಿದೆ. ಒಂದೆಡೆ ಗಣೇಶ ಮೂರ್ತಿ ಮಾರಾಟ ಜೋರಾಗಿದೆ. ಮತ್ತೊಂದೆಡೆ ವಿವಿಧ ಬಗೆಯ ಗಣಪತಿಗಳನ್ನು ತಮ್ಮ ತಮ್ಮ ಏರಿಯಾದಲ್ಲಿ ಪ್ರತಿಷ್ಠಾಪಿಸಲು ಯುವ ಸಮೂಹ ತುದಿಗಾಲಲ್ಲಿ ನಿಂತಿದೆ.

ಮೈಸೂರಿನಾದ್ಯಂತ ಗಣಪನ ದರ್ಬಾರು ಜೋರಾಗಿಯೇ ಇದೆ. ಎಲ್ಲರೂ ಒಂದಾಗಿ ಗಣಪತಿಯನ್ನು ವಾರಗಟ್ಟಲೇ ಪೂಜಿಸಿ ಸಂಭ್ರಮಿಸುವ ಹಬ್ಬಕ್ಕೆ ಗಣೇಶ ಮೂರ್ತಿ ಖರೀದಿ ಪ್ರಾರಂಭವಾಗಿದೆ.

ಮೈಸೂರಿನ ಟಿ.ಕೆ.ಲೇಔಟ್‌ನ ಗಂಗೋತ್ರಿ ಬಾಯ್ಸ್ ಸಂಘವು, ಈ ಬಾರಿಯ ಗಣೇಶ ಚತುರ್ಥಿಗೆ ಬೃಹತ್ ಗಣಪನನ್ನು ಪ್ರತಿಷ್ಠಾಪಿಸಲು ಮುಂದಾಗಿ, ಆಂಧ್ರಪ್ರದೇಶದಿಂದ ಮೈಸೂರಿಗೆ ಲಾರಿಯಲ್ಲಿ ಸುಮಾರು 16 ಅಡಿ ಎತ್ತರದ ಬೃಹತ್ ಗಣಪನನ್ನು ಕರೆತರಲಾಗಿದ್ದು, ನೋಡುಗರಿಗೆ ಭವ್ಯ ದರ್ಶನವಾಗಿದೆ.

ಬರೋಬ್ಬರಿ 16 ಅಡಿ ಎತ್ತರದ 1.50 ಲಕ್ಷ ರೂ. ಬೆಲೆಯ ಗಣೇಶ ಮೂರ್ತಿಯನ್ನು ಗಂಗೋತ್ರಿ ಬಾಯ್ಸ್ ಬೆಂಗಳೂರು ರಸ್ತೆಯ ಮೂಲಕ ಬನ್ನಿಮಂಟಪ. ಮೆಟ್ರೋಪೋಲೋ ವೃತ್ತ, ಕುಕ್ಕರಹಳ್ಳಿ ಕೆರೆ ಮಾರ್ಗವಾಗಿ ಟಿ.ಕೆ.ಲೇಔಟ್‌ಗೆ ಬಹಳ ಸಡಗರ–ಸಂಭ್ರಮದಿಂದ ಬರಮಾಡಿಕೊಂಡರು.

ಸುತ್ತಮುತ್ತಲ ಏರಿಯಾಗಳಲ್ಲಿಯೇ ಪ್ರತಿಬಾರಿಯೂ ವಿಭಿನ್ನ ಹಾಗೂ ವಿಶಿಷ್ಟವಾದ ಗಣೇಶನ ಪ್ರತಿಷ್ಠಾಪನೆ ಮಾಡುತ್ತಾ ಬರುತ್ತಿದ್ದೇವೆ. ಈ ಬಾರಿ ಗಣೇಶನ ಕರೀಟದ ಮೇಲೆ ತಾಯಿ ಗೌರಿ ನೆಲೆಸಿರುವ ವಿಶೇಷ ಬೃಹತ್ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತಿದೆ ಎಂದು ಗಂಗೋತ್ರಿ ಬಾಯ್ಸ್ ಅಧ್ಯಕ್ಷ ಪೃಥ್ವಿ ತಿಳಿಸಿದರು.

ಗಣೇಶ ಮೂರ್ತಿಯನ್ನು ಟಿ.ಕೆ.ಲೇಔಟ್‌ಗೆ ಸಾಗಿಸುವ ವೇಳೆ ಕುಕ್ಕರಹಳ್ಳಿ ಕೆರೆ ಪೂರ್ವ ಗೇಟ್ ಬಳಿ ಆಲದಮರಕ್ಕೆ ಸಿಲುಕಿತ್ತು ತುಂಬಾ ಎತ್ತರವಾದ್ದರಿಂದ ಕ್ರೇನ್ ಸಹಾಯದಿಂದ ಆಲದ ಮರದ ಕೊಂಬೆಗಳನ್ನು ಸರಿಸಿ ಅಲ್ಲಿಂದ ಗಣಪನನ್ನು ಜೋಪಾನವಾಗಿ ಸಾಗಿಸಲಾಯಿತು. ಈ ವೇಳೆ ಸುಮಾರು ಅರ್ಧ ಗಂಟೆಗೂ ಹೆಚ್ಚುಕಾಲ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀಮತಿ. ಹೆಚ್. ಎಸ್. ಪ್ರೇಮಾವತಿ ಕೋಂ ಶ್ರೀ. ಬಿ. ವಿ. ವಿಜಯ, ಮನೆ ನಂಬರ್ 6, 8ನೇ ಬ್ಲಾಕ್, ಮಧುವನ, ಶ್ರೀರಾಂಪುರ, ಮೈಸೂರು ರವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಕೆಳಕಂಡ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷೀದಾರರಿಗೆ ದಿನಾಂಕ 05/03/2007 ರಂದು ನೋಂದಣಿ ಸಂಖ್ಯೆ 28910/2006–07 ರ ಪ್ರಕಾರ ಶ್ರೀ. ಎ. ಆರ್. ರಮೇಶ್ ಮತ್ತು ಕುಟುಂಬದವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಬಂದ ಸ್ವತ್ತಾಗಿರುತ್ತದೆ ಮತ್ತು ಸದರಿ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಕರ್ನಾಟಕ ಮಾನ್ಯ ಹೈಕೋರ್ಟಿನಲ್ಲಿ ಆರ್.ಎಫ್.ಎ ನಂಬರ್ 1268/2015, ಆರ್.ಎಫ್.ಎ ನಂಬರ್ 1078/2015 ಮತ್ತು ಆರ್.ಎಫ್.ಎ ಕ್ರಾಸ್ ಅಬ್‌ಜೆಕ್ಷನ್ ನಂಬರ್ 25/2017 ಪೆಂಡಿಂಗ್ ಇರುತ್ತದೆ ವಸ್ತುಸ್ಥಿತಿ ಹೀಗಿರುವಾಗ ಮೇಲ್ಕಂಡ ಶ್ರೀ. ಎ. ಆರ್. ರಮೇಶ್ ಮತ್ತು ಇತರರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಬೋಗಸ್ ವಿಭಾಗಪತ್ರಗಳನ್ನು ಸೃಷ್ಠಿ ಮಾಡಿಕೊಂಡು ಷೆಡ್ಯೂಲ್ ಸ್ವತ್ತನ್ನು ಮೆಸರ್ಸ್ ಎಸ್. ಎಂ. ಡೆವಲಪರ್ಸ್ ನ ಪಾರ್ಟನರ್ ಗಳಾದ ಶ್ರೀ. ಬಿ. ಟಿ. ಮಹೇಶ ಮತ್ತು ಶ್ರೀ. ಸುರೇಶ ರವರಿಗೆ ಬೋಗಸ್ ಕ್ರಯಪತ್ರಗಳನ್ನು ಸೃಷ್ಠಿ ಮಾಡಿರುತ್ತಾರೆ ಆದ–ರೆ ವಾಸ್ತವವಾಗಿ ಹೈಕೋರ್ಟಿನಲ್ಲಿ ಅಪೀಲುಗಳು ಪೆಂಡಿಂಗ್ ಇರುವ ಸಮಯದಲ್ಲಿ ಮೆಸರ್ಸ್ ಎಸ್. ಎಂ. ಡೆವಲಪರ್ಸ್ ನ ಪಾರ್ಟನರ್ ಗಳಾದ ಶ್ರೀ. ಬಿ. ಟಿ. ಮಹೇಶ ಮತ್ತು ಶ್ರೀ. ಸುರೇಶ ರವರು ಷೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುವುದು ಕಾನೂನು ಬಾಹಿರವಾಗಿರುತ್ತದೆ ಮತ್ತು ನಮ್ಮ ಕಕ್ಷೀದಾರರ ಹಕ್ಕುಗಳಿಗೆ ಭಾಧ್ಯಪಡಿಸುವುದಿಲ್ಲ ಈ ಕಾರಣಗಳಿಗಾಗಿ ನಮ್ಮ ಕಕ್ಷೀದಾರರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಮೆಸರ್ಸ್ ಎಸ್. ಎಂ. ಡೆವಲಪರ್ಸ್ ನ ಪಾರ್ಟನರ್ ಗಳಾದ ಶ್ರೀ. ಬಿ. ಟಿ. ಮಹೇಶ ಮತ್ತು ಶ್ರೀ. ಸುರೇಶ ರವರು ಮತ್ತು ಇತರರ ವಿರುದ್ದ ನ್ಯಾಯಾಲಯದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಿದ್ದಾರೆ ಈ ಕಾರಣಗಳಿಂದ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಸಾರ್ವಜನಿಕರು ಮೆಸರ್ಸ್ ಎಸ್. ಎಂ. ಡೆವಲಪರ್ಸ್ ನ ಪಾರ್ಟನರ್ ಗಳಾದ ಶ್ರೀ. ಬಿ. ಟಿ. ಮಹೇಶ ಮತ್ತು ಶ್ರೀ. ಸುರೇಶ ರವರೊಂದಿಗೆ ಯಾವುದೇ ರೀತಿಯ ಕ್ರಯದ ಕರಾರು, ಕ್ರಯಪತ್ರ, ಅಭಿವೃದ್ಧಿ ಕರಾರು ಇತರೆ ವ್ಯವಹಾರಗಳನ್ನು ಮಾಡಬಾರದು ಎಂದು ಈ ಮೂಲಕ ಎಚ್ಚರಿಸುತ್ತಿದ್ದೇವೆ ಇದರ ಹೊರತಾಗಿಯೂ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ವ್ಯವಹರಿಸಿದ್ದಲ್ಲಿ ಸದರಿಯವರ ವಿರುದ್ದವೂ ಸಹ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಈ ಮೂಲಕ ತಿಳಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್ 206 ರಲ್ಲಿ ಒಟ್ಟು ವಿಸ್ತೀರ್ಣ 02 ಎಕರೆ (ಹೊಸ ಸರ್ವೆ ನಂಬರ್ 206/1 ರಲ್ಲಿ 06½ ಗುಂಟೆ, ಸರ್ವೆ ನಂಬರ್ 206/3 ರಲ್ಲಿ 13¼ ಗುಂಟೆ, 206/4 ರಲ್ಲಿ 13¼ ಗುಂಟೆ, 206/5 ರಲ್ಲಿ 13¼ ಗುಂಟೆ, 206/6 ರಲ್ಲಿ 13½ ಗುಂಟೆ, 206/7 ರಲ್ಲಿ 13½ ಗುಂಟೆ, 206/8 ರಲ್ಲಿ 06¾ ಗುಂಟೆ) ಜಮೀನು ಷೆಡ್ಯೂಲ್ ಸ್ವತ್ತಾಗಿರುತ್ತದೆ.

ಶ್ರೀ. ಸೋಮಶೇಖರ, ವಕೀಲರು.
ಮನೆ ನಂಬರ್ 1497, 15ನೇ ಕ್ರಾಸ್, ಕೆ.ಎಂ.ಹಳ್ಳಿ,
ಮೈಸೂರು – 570019. **ಮೊಬೈಲ್ : 9379168635**

ಸ್ಥಳ : ಮೈಸೂರು
ದಿನಾಂಕ : 10/08/2025

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218

ದೂರವಾಣಿ ಸಂಖ್ಯೆ : –08274–257332 ಇ–ಮೇಲ್:– itstaff_ulb_virajpet@yahoo.com । ವೆಬ್‌ಸೈಟ್ :– www.virajpettown.mrc.gov.in

ಕ್ರ.ಸಂ.ನಂ.ಪು.ವಿ/15ನೇ.ಹ.ಸಾ.ಮೂ.ಅ.ಎಸ್.ಎಫ್.ಸಿ.ಅ.ಪು.ನಿ/ಟೆ–05/2025–26 ದಿನಾಂಕ : 07/08/2025

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2025–26ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2025–26 ನೇ ಸಾಲಿನ ಎಸ್.ಎಫ್.ಸಿ ಅನುದಾನ ಮತ್ತು 2025–26ನೇ ಸಾಲಿನ ಪುರಸಭೆ ನಿಧಿಯಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದು ಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 08/08/2025 ರಿಂದ 22/08/2025 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 22/08/2025 ಸಂಜೆ 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ : 25/08/2025 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್:– **www.virajpettown.mrc.gov.in**ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/–	ಸಹಿ/–
(ಶ್ರೀಮತಿ. ಎಂ.ಕೆ ದೇಚಮ್ಮನವರ)	(ಶ್ರೀಮತಿ, ಫಸಿಹಾ ತಬಸಮ್)
ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/–	ಸಹಿ/–
(ಶ್ರೀ ಎಂ.ಕೆ ಅಬ್ದುಲ್ ಜಲೀಲ್)	(ಶ್ರೀ ನಾಚಪ್ಪ ಪಿ.ಕೆ)
ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಸಂಸ್ಕೃತದಲ್ಲಿ ಹೆಂಡತಿಗೆ ಏನ್ ಅಂತಾರೆ?

ಗುಂಡ : ಸರ್, ಸಂಸ್ಕೃತದಲ್ಲಿ ಅಲ್ಲ ಪ್ರಪಂಚದ ಯಾವುದೇ ಭಾಷೆಯಲ್ಲೂ ಹೆಂಡತಿಗೆ ಏನೂ ಅನ್ನಂಗಿಲ್ಲ!

ಮೈಸೂರು ಮಿತ್ರ

ಶನಿವಾರ, 9 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವನವೆಂದರೆ ನಾವೇ ರಚಿಸಿಕೊಳ್ಳುವ ಆದರೆ ಅಳಿಸಲು ಅವಕಾಶವಿಲ್ಲದ ಚಿತ್ರಕಲೆ. ಹಾಗಾಗಿ, ಒಂದೊಂದು ಗೆರೆ ಎಳೆಯುವಾಗಲೂ ಎಚ್ಚರವಿರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.

ನಿಮ್ಮ ಪತ್ರಗಳು

■ ಒಳ ಮೀಸಲಾತಿ ಜಾರಿ ಮಾಡದಿದ್ದರೆ ನಿಮ್ಮ ಕಣ್ಣಲ್ಲಿ ನೀರು ಬರಿಸುತ್ತೇವೆ!

ಮಾನ್ಯರೆ,

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯದಂತೆ ಸಮಾಜದಲ್ಲಿ ಜೀವಿಸುತ್ತಿರುವ ಕಟ್ಟ ಕಡೆಯ ವ್ಯಕ್ತಿಯು ಕೂಡ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕಾದರೆ ಮೀಸಲಾತಿ ಎಂಬುದು ಬಹಳ ಮುಖ್ಯವಾಗುತ್ತದೆ. ಇದರಿಂದ ಪ್ರತಿಯೊಂದು ಸಮುದಾಯಕ್ಕೂ ಸಾಮಾಜಿಕ ನ್ಯಾಯ ದೊರಕುತ್ತದೆ. ಈ ಸಾಮಾಜಿಕ ನ್ಯಾಯ ದೊರೆಯಬೇಕಾದರೆ ರಾಜ್ಯದಲ್ಲಿ ಒಳ ಮೀಸಲಾತಿ ಯಥಾವತ್ತಾಗಿ ಜಾರಿಯಾಗಬೇಕು.

ರಾಜ್ಯದಲ್ಲಿ ಮಾದಿಗ ಸಮುದಾಯವೂ ಸುಮಾರು 35 ವರ್ಷಗಳಿಂದ ನಿರಂತರವಾಗಿಯೇ ಒಳ ಮೀಸಲಾತಿ ಹೋರಾಟ ಮಾಡುತ್ತಿದೆ. ಆದರೆ ನಮ್ಮನ್ನಾಳುವಂತಹ ಸರ್ಕಾರಗಳು ಒಳ ಮೀಸಲಾತಿಯನ್ನು ನಾವು ಜಾರಿಗೆ ತರುತ್ತೇವೆ ಎಂದು ಬೇಜವಾಬ್ದಾರಿ ತೋರಿದ್ದರಿಂದ ಸುಪ್ರೀಂಕೋರ್ಟ್ ಒಳ ಮೀಸಲಾತಿಯನ್ನು ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿ ಸುಮಾರು ಒಂದು ವರ್ಷ ಕಳೆದರೂ ಪ್ರಸ್ತುತ ಸರ್ಕಾರ ಒಳ ಮೀಸಲಾತಿಯನ್ನು ಜಾರಿ ಮಾಡಲು ಮೀನಾಮೇಷ ಎಣಿಸುತ್ತಿರುವುದು ದುರಂತವೇ ಸರಿ.

ಪ್ರಸಕ್ತ ದಿನಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು ತಾವೇ ಸ್ವತಃ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಸಮಿತಿಯನ್ನು ನೇಮಕ ಮಾಡಿ ಅವರು ವರದಿ ಕೊಟ್ಟ ನಂತರವು ಒಳ ಮೀಸಲಾತಿಯನ್ನು ಜಾರಿ ಮಾಡದೆ ಇಂದು, ನಾಳೆ, ನಾಳಿದ್ದು ಎಂದು ಹೇಳುವ ಮೂಲಕ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಸಚಿವ ಸಂಪುಟದ ಸಚಿವರು ಆಗಸ್ಟ್ 16ರಂದು ನಡೆಯುವ ಸಚಿವ ಸಂಪುಟದಲ್ಲಿ ಒಳ ಮೀಸಲಾತಿಯನ್ನು ಒಪ್ಪಿ ಅಂಗೀಕರಿಸಬೇಕು. ಒಂದು ವೇಳೆ ಸರ್ಕಾರ ತಾತ್ಸಾರ ಮಾಡಿದರೆ ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ವಿಧಾನಸಭಾ ಚುನಾವಣೆಯಲ್ಲಿ ನಿಮ್ಮನ್ನು ಅತಂತ್ರ ಸ್ಥಿತಿಗೆ ತಂದು ನಿಮ್ಮ ಕಣ್ಣಲ್ಲಿ ನೀರು ಬರಿಸುವ ಶಕ್ತಿ ಈ ಮಾದಿಗ ಸಮುದಾಯಕ್ಕೆ ಇದೆ ಎಂಬುದನ್ನು ತಿಳಿಸುತ್ತೇವೆ.

–ತಿಮ್ಮರಾಜು, ಭೋಗೇಶ್ವರ ಕಾಲೋನಿ, ಹೆಚ್.ಡಿ. ಕೋಟೆ ತಾಲೂಕು

■ ವ್ರತಗಳು ಕೌಟುಂಬಿಕ ಹಬ್ಬಗಳಾಗದಿರಲಿ

ಮಾನ್ಯರೆ,

ಇತ್ತೀಚೆಗೆ ಹೊಸ ಹೊಸ ಹಬ್ಬಗಳು ಹಾಗೂ ವ್ರತಗಳು ಹುಟ್ಟಿಕೊಂಡು ಅವುಗಳು ಕ್ರಮೇಣ ಕೌಟುಂಬಿಕ ಹಬ್ಬಗಳಾಗಿ ಮಾರ್ಪಾಡಾಗುತ್ತಿರುವುದು ಚಿಂತಿಸಬೇಕಾದ ಸಂಗತಿ. ಕುಟುಂಬದೊಂದಿಗೆ ಆಚರಿಸುವ ಹಬ್ಬಗಳು ನಮ್ಮ ಸಂಸ್ಕೃತಿಯ ಭಾಗ ಎಂಬುದನ್ನು ಒಪ್ಪೋಣ. ಏಕೆಂದರೆ ಅವು ನಮ್ಮ ಜೀವನದಲ್ಲಿ ಸಂತೋಷ ಮತ್ತು ಸಂಭ್ರಮವನ್ನು ತರುತ್ತವೆ. ಜನರು ಒಟ್ಟಾಗಿ ಸೇರಿ ಹಬ್ಬಗಳನ್ನು ಆಚರಿಸುವುದರಿಂದ ಸಂಬಂಧಗಳು ಗಟ್ಟಿಯಾಗುತ್ತವೆ. ಹೀಗಾಗಿ ಹಬ್ಬಗಳು ನಮ್ಮ ಜೀವನದಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸುತ್ತವೆ.

ಆದರೆ ಇತ್ತೀಚೆಗೆ ಕೆಲ ಹಬ್ಬಗಳು ಕೇವಲ ಪ್ರತಿಷ್ಠೆಗಾಗಿಯೇ ಆಚರಿಸುವ ಆಚರಣೆಗಳಾಗುತ್ತಿವೆ. ಗಂಡು ಮತ್ತು ಹೆಣ್ಣು ಇಬ್ಬರೂ ಪಾಲುಗೊಳ್ಳದ ಕೇವಲ ಮಹಿಳೆಯರ ವ್ರತಗಳಿಗಾಗಿಯೇ ಸೀಮಿತವಾಗಿರುವ ಕೆಲ ಹಬ್ಬಗಳು ಇಂದು ಕೌಟುಂಬಿಕ ಹಬ್ಬಗಳಾಗಿ ಮಾರ್ಪಟ್ಟು, ಆರ್ಥಿಕವಾಗಿ ಹೊರೆಯಾಗಿ ಪರಿಣಮಿಸುತ್ತಿರುವುದು ಯೋಚಿಸಬೇಕಾದ ಸಂಗತಿಯಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಅಪೂರ್ಣ ಕಾಮಗಾರಿ ಪೂರ್ಣಗೊಳಿಸಿ



ಮಾನ್ಯರೆ,

ಮೈಸೂರಿನ ಕ್ಯಾತಮಾರನಹಳ್ಳಿ ಜೈ ಭೀಮ್ ಗೆಳೆಯರ ಬಳಗದ ಸರ್ಕಲ್‌ನಿಂದ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಲು ಅಗೆದು ಜಲ್ಲಿ ಕಲ್ಲನ್ನು ಹಾಕಿ ಎರಡು ತಿಂಗಳಾಗಿದೆ. ಹಾಕಿದ ಜಲ್ಲಿ ಕಲ್ಲುಗಳ ಮೇಲೆ ದಿನನಿತ್ಯ ನೂರಾರು ವಾಹನಗಳ ಚಲಿಸುತ್ತವೆ. ವಿಶೇಷವಾಗಿ ಶಾಲಾ ವಾಹನಗಳು ಓಡಾಡುತ್ತವೆ. ಮತ್ತೆ ವಾಹನಗಳು ಓಡಾಡಿದರೆ ಕಲ್ಲುಗಳು ನಡೆದು ಹೋಗುವ ದಾರಿಹೋಕರಿಗೆ ಮತ್ತು ಬೇರೆ ವಾಹನಗಳಿಗೂ ಸಿಡಿಯುತ್ತದೆ. ಮಕ್ಕಳು ವಯೋವೃದ್ಧರು ನಡೆದು ಹೋಗಲು ತುಂಬಾ ಕಷ್ಟಕರವಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಅಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸಿ ಜನಸಾಮಾನ್ಯರಿಗೆ ಹಾಗೂ ವಾಹನಗಳಿಗೆ ಅನುಕೂಲವಾಗುವಂತೆ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

■ ನೀರಿನ ಸೋರಿಕೆ ತಡೆಗಟ್ಟಿ



ಮಾನ್ಯರೆ,

ಮೈಸೂರಿನ ಜೆಎಲ್‌ಬಿ ರಸ್ತೆಯ ಪಂಚವಟಿ ಹೋಟೆಲ್ ಎದುರು ಹಾಗೂ ಲಕ್ಷ್ಮಿಪುರಂ ಪೊಲೀಸ್ ಸ್ಟೇಷನ್, ಆರ್‌ಟಿಓ ಸರ್ಕಲ್ ಸಮೀಪ ಸುಮಾರು ಒಂದು ತಿಂಗಳಿಂದ ಶುದ್ಧ ಕುಡಿಯುವ ನೀರು ಸೋರಿಕೆಯಾಗುತ್ತಿದೆ.

ಈ ನೀರಿನ ಸೋರಿಕೆ ಜನನಿಬಿಡ ಸ್ಥಳದಲ್ಲಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಂಡು ಕಾಣದಂತೆ ಕುಳಿತಿರುವುದು ವಿಪರ್ಯಾಸ. ಕೂಡಲೇ ನೀರು ಸೋರಿಕೆಯನ್ನು ತಡೆಗಟ್ಟಬೇಕೆಂದು ಈ ಮೂಲಕ ಮನವಿ.

– ಮಂಜುನಾಥ್ ಹೆಗ್ಡೆ, ಮೈಸೂರು.




ಬನ್ನೂರು ಕೆ. ರಾಜು

ಸಾಹಿತಿ, ಪತ್ರಕರ್ತ

ಮೊ: 94815 33167

ಬಹುಮುಖಿ

ಕನ್ನಡ ವಿಶ್ವಮಾನ್ಯಗೊಳಿಸಿದ ಗೋಕಾಕ್!



ಆಗಸ್ಟ್ 9, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ವಿ.ಕೃ.ಗೋಕಾಕ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

> **"ಕನ್ನಡದ ಕೀರ್ತಿಯನ್ನು ಸಾಹಿತ್ಯದ ಮೂಲಕ ಜಗದಗಲ ಬೆಳಗಿದ ಇಂಥಾ ಕನ್ನಡದ ಸಾಹಿತ್ಯ ಸೂರ್ಯ ಡಾ. ವಿನಾಯಕ ಕೃಷ್ಣ ಗೋಕಾಕರು 1992ರ ಏಪ್ರಿಲ್ 28ರಂದು ಬೆಳಗಿನ ಜಾವ ಮುಂಬೈಯಲ್ಲಿ ಅಸ್ತಮಿಸಿದರು. ಅವರು ಭೌತಿಕವಾಗಿ ನಮ್ಮೊಡನೆ ಇಲ್ಲವಾದರೂ ಕೂಡ ಅವರು ಕೊಟ್ಟಿರುವ ಸಾಹಿತ್ಯದ ಬೆಳಕು ಯಾವತ್ತೂ ನಾಡಿನಲ್ಲಿ ಶಾಶ್ವತವಾಗಿ ಬೆಳಗುತ್ತಲೇ ಇರುತ್ತದೆ.**

ವಿ.ಕೃ.ಗೋಕಾಕ್ ಎಂದರೆ ಅಥವಾ ವಿನಾಯಕ ಕೃಷ್ಣ ಗೋಕಾಕ್ ಎಂದು ಹೇಳಿದರೆ ಸುಲಭಕ್ಕೆ ಎಲ್ಲರಿಗೂ ಗೊತ್ತಾಗದೇ ಇರಬಹುದು. ಆದರೆ 'ಗೋಕಾಕ್ ವರದಿ ಎಂದರೆ ಅಥವಾ 'ಗೋಕಾಕ್ ಚಳವಳಿ ಎಂದರೆ ಇಡೀ ನಾಡಿಗೆ ಅವರು ತಿಳಿಯುತ್ತಾರೆ. ಏಕೆಂದರೆ ಗೋಕಾಕ್ ವರದಿಯ ರೂವಾರಿಯೇ ವಿನಾಯಕ ಕೃಷ್ಣ ಗೋಕಾಕರು. ಅವರು ವಿ.ಕೃ. ಗೋಕಾಕ್ ಎಂದೇ ಪ್ರಸಿದ್ಧರು. ಅಂದ ಹಾಗೆ 'ವಿನಾಯಕ' ಎಂಬುದು ಅವರ ಕಾವ್ಯನಾಮ. ಕರ್ನಾಟಕ ಸರ್ಕಾರ 1980ರಲ್ಲಿ ಪ್ರೌಢಶಾಲಾ ವ್ಯಾಸಂಗದಲ್ಲಿ ಭಾಷೆಗಳ ಸ್ಥಾನಮಾನ ಕುರಿತು ವರದಿ ನೀಡಲು ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತ್ತು.

ಆಗ ಗೋಕಾಕರ ಕನ್ನಡ ಭಾಷಾಭಿಮಾನದ ಪ್ರತೀಕವಾಗಿ ಈ ಸಮಿತಿ ನೀಡಿದ ವರದಿ ಕನ್ನಡ ಭಾಷೆ ಮತ್ತು ಶಿಕ್ಷಣದ ಪರವಾಗಿತ್ತು. ಈ ವರದಿಯನ್ನು ಅಂಗೀಕರಿಸಲು ಸರ್ಕಾರ ಹಿಂದೆ–ಮುಂದೆ ನೋಡಿ ಮೀನಾಮೇಷ ಎಣಿಸುತ್ತಾ ಕನ್ನಡ ಭಾಷಾ ಶಿಕ್ಷಣಕ್ಕೆ ಪೂರಕವಾದ ಗೋಕಾಕ್ ವರದಿಯನ್ನು ಜಾರಿಗೊಳಿಸದೇ ಹೋದಾಗ ಈ ವರದಿಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಸಮಸ್ತ ಕನ್ನಡ ಜನತೆ ಒಕ್ಕೊರಲಿನಿಂದ ಬೀದಿಗಿಳಿದು ಚಳವಳಿ ನಡೆಸಿತ್ತು. ಕನ್ನಡನಾಡಿನ ಇತಿಹಾಸದಲ್ಲಿದು 'ಗೋಕಾಕ್ ಚಳವಳಿ' ಎಂದೇ ದಾಖಲಾಗಿದೆ.

ವರನಟ, ನಟಸಾರ್ವಭೌಮ ಡಾ. ರಾಜಕುಮಾರ್ ಅವರಂತಹ ಮೇರು ವ್ಯಕ್ತಿಗಳ ನೇತೃತ್ವದಲ್ಲಿ ನಡೆದ ಗೋಕಾಕ್ ಚಳವಳಿಯನ್ನು ಕನ್ನಡ ನಾಡು ಯಾವತ್ತೂ ಮರೆಯುವಂತೆಯೇ ಇಲ್ಲ. ಕನ್ನಡಿಗರನ್ನು ಬಡಿದೆಬ್ಬಿಸಿದ ಅಂಥಾ ಶಕ್ತಿಯುತ ಚಳವಳಿ ಇದು. ಇದಕ್ಕೆ ಧೀಶಕ್ತಿಯೇ ಗೋಕಾಕರು. ಗೋಕಾಕ್ ಚಳವಳಿ ಕನ್ನಡಿಗರಲ್ಲಿ ಭಾಷಾಭಿಮಾನದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಕನ್ನಡದ ಕಿಚ್ಚನ್ನು, ಕೆಚ್ಚನ್ನು ಹೆಚ್ಚಿಸಿತು. ಹಾಗೆಯೇ ಗೋಕಾಕರು ಸ್ವತಃ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿ ಕನ್ನಡದ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ.

ಅವರು ತಮ್ಮ ಕನ್ನಡಪರ ಹೋರಾಟ ಹಾಗೂ ಬರಹ ಮತ್ತು ಬೋಧನೆಗಳಿಂದ ಕನ್ನಡದ ಘನತೆಯನ್ನು ಹೆಚ್ಚಿಸಿದವರು. ಹಾಗೆಯೇ ಗೋಕಾಕ್ ವರದಿಯಲ್ಲಿ ಕನ್ನಡಕ್ಕೆ ಶಾಲಾ ಶಿಕ್ಷಣದಲ್ಲಿ ಸಲ್ಲಬೇಕಾದ ಸ್ಥಾನವನ್ನು ಮತ್ತು ಗೌರವವನ್ನು ಹಾಗೂ ಘನತೆಯನ್ನು ತಂದುಕೊಟ್ಟವರು. ಇದು ಅವರಿಗಿದ್ದ ಕನ್ನಡದ ಮೇಲಿನ ಎಣೆಯಿಲ್ಲದ ಪ್ರೀತಿಗೆ ಒಂದು ಸಣ್ಣ ಸಾಕ್ಷಿಯಷ್ಟೇ. ಇಂಥಾ ಅದೆಷ್ಟೋ ಬೆಟ್ಟದಂತಹ ಕನ್ನಡದ ಕೆಲಸಗಳಿಗಾಗಿ ನಾಡಿನ ಉದ್ದಗಲಕ್ಕೂ ಹೆಸರಾದವರು ಗೋಕಾಕರು.

ಹೋರಾಟಕ್ಕೂ ಸೈ, ಬರಹಕ್ಕೂ ಸೈ, ಭಾಷಣಕ್ಕೂ ಸೈ, ಬೋಧನೆಗೂ ಸೈ, ಸಂಶೋಧನೆಗೂ ಸೈ ಎನ್ನುವಂತಿದ್ದ ಸಾಹಿತ್ಯದ ಮೇರುಗಿರಿ ವಿನಾಯಕ ಕೃಷ್ಣ ಗೋಕಾಕರು ಕನ್ನಡಕ್ಕೆ ಐದನೆಯ ಜ್ಞಾನಪೀಠ ಪ್ರಶಸ್ತಿಯನ್ನು 1996ರಲ್ಲಿ ತಂದುಕೊಟ್ಟವರು. ತನ್ಮೂಲಕ ಕನ್ನಡದ ಹಿರಿಮೆಯನ್ನು ರಾಷ್ಟ್ರಮಟ್ಟದಲ್ಲಿ ಮೆರೆಸಿದವರು. ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಪಡೆದಿದ್ದ ಅವರು ತಮ್ಮ ಜೀವಿತ ಕಾಲದಲ್ಲೇ ಒಬ್ಬ ಪ್ರತಿಭಾವಂತ ಸಾಹಿತಿಗೆ ದೊರಕಬೇಕಾದ ಎಲ್ಲ ಸಿದ್ಧಿ ಪ್ರಸಿದ್ಧಿಗಳನ್ನು ಪಡೆದು ಎಲ್ಲಾ ರೀತಿಯ ಕೀರ್ತಿ–ಕಳಸಗಳಿಂದ ಕನ್ನಡಮ್ಮನ ಮಡಿಲನ್ನು ತುಂಬಿದವರು ಗೋಕಾಕರು. ಇದಕ್ಕೂ ಮೊದಲು ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿದ್ದ ಅವರು ಅಲ್ಲೂ ಕೂಡ ತಮ್ಮ ಛಾಪನ್ನು ಮೂಡಿಸಿದ್ದರು.

ಬದುಕಿನುದ್ದಕ್ಕೂ ಕನ್ನಡದ ತೇರನ್ನೆಳೆದು ತಮ್ಮ ಹಲವು ಹತ್ತು ಸಾಧನೆ–ಸಿದ್ಧಿಗಳ ಮೂಲಕ ಕನ್ನಡಕ್ಕೆ ವಿಶ್ವಖ್ಯಾತಿಯನ್ನು, ಮಹತ್ತರ ಗೌರವವನ್ನು ತಂದುಕೊಟ್ಟ ಕನ್ನಡ ಸಾರಸ್ವತ ಲೋಕದ ಈ ಮೇರು ಶಿಖರ ವಿನಾಯಕ ಕೃಷ್ಣ ಗೋಕಾಕರು 1909 ಆಗಸ್ಟ್ 9ರಂದು ಅವಿಭಜಿತ ಧಾರವಾಡ ಜಿಲ್ಲೆಯ (ಇಂದಿನ ಹಾವೇರಿ ಜಿಲ್ಲೆ) ಸವಣೂರಿನಲ್ಲಿ ಜನಿಸಿದರು. ಅವತ್ತಿನ ಕಾಲಕ್ಕೆ ಅವರ ತಂದೆ ಕೃಷ್ಣರಾಯರು ಆ ಭಾಗದಲ್ಲಿ ಖ್ಯಾತ ವಕೀಲರಾಗಿದ್ದರು. ವಿನಾಯಕ ಗೋಕಾಕರು ಹುಟ್ಟಿದ ಕಾಲಕ್ಕೆ ಸವಣೂರು ಒಂದು ಸಣ್ಣ ಸಂಸ್ಥಾನವಾಗಿದ್ದು ಓರ್ವ ನವಾಬನ ಆಡಳಿತಕ್ಕೆ ಒಳಪಟ್ಟಿತ್ತು.

ವಿದ್ಯಾಭ್ಯಾಸದ ಸಲುವಾಗಿ ಧಾರವಾಡದಲ್ಲಿದ್ದಾಗಲೇ ಅವರಿಗೆ ಸುಕೃತವೆಂಬಂತೆ ಕನ್ನಡದ ವರಕವಿ ಬೇಂದ್ರೆಯವರ ಸಂಪರ್ಕ ಒದಗಿ ಬಂದಿತ್ತು. ಹಾಗಾಗಿ ಸಾಹಿತ್ಯಾಸಕ್ತರಾಗಿದ್ದ ಗೋಕಾಕರ ಸಾಹಿತ್ಯ ಕೃಷಿಗೆ ವಿದ್ಯಾರ್ಥಿ ದೆಸೆಯಲ್ಲೇ ಬೇಂದ್ರೆಯವರ ಮಾರ್ಗದರ್ಶನ ಹೆಚ್ಚಿನ ರೀತಿಯಲ್ಲಿ ದೊರೆತು ವರಕವಿಯ ಪ್ರೋತ್ಸಾಹದಿಂದ ವಿನಾಯಕರ ಸಾಹಿತ್ಯ ಕೃಷಿ ವಿದ್ಯಾರ್ಥಿ ಜೀವನದಲ್ಲೆ ಚಿಗುರಿ, ಅರಳಿ, ಬೆಳೆಯುತ್ತಾ ಹೋಯಿತು. ಕಾವ್ಯ ಗಾರುಡಿಗ ಬೇಂದ್ರೆ ಅವರು ತಮ್ಮ ಕಾವ್ಯ ಗುರುವೂ, ಮಾರ್ಗದರ್ಶಕರೂ, ಪ್ರೋತ್ಸಾಹಕರೂ ಆಗಿದ್ದರೆಂದು ಬಹಳಷ್ಟು ಕಡೆ ಗೋಕಾಕರೇ ಹೇಳಿಕೊಂಡಿದ್ದಾರೆ. ಈ ವಿಚಾರದಲ್ಲಿ ಅವರ ಗುರುಪ್ರೇಮ, ಗುರುಭಕ್ತಿ ಬಹುದೊಡ್ಡದು. ಇಂಗ್ಲಿಷ್ ವಿಷಯದ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದ ಗೋಕಾಕರು ಕೂಡಲೇ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಉಪನ್ಯಾಸಕ ಹುದ್ದೆಗೆ ಆಯ್ಕೆಯಾಗಿದ್ದರು. ವೃತ್ತಿಯ ಜೊತೆಜೊತೆಯಲ್ಲೇ ಸಾಹಿತ್ಯ ಕೃಷಿಯನ್ನೂ ಅಷ್ಟೇ ಪ್ರೀತಿಯಿಂದ ಅಪ್ಪಿಕೊಂಡಿದ್ದರು. ಅವರು ಮೌಲಿಕ ಬೋಧಕರು ಹಾಗೂ ಬರಹಗಾರರೂ ಆಗಿದ್ದರ ಫಲವಾಗಿ ಕನ್ನಡದ ಗಂಡುಮೆಟ್ಟಿನ ನೆಲದಲ್ಲಿದ್ದ ಯುವ ಮರಾಠಿಗರನ್ನೂ ಕೂಡ ತಮ್ಮ ಕಡೆ ಸೆಳೆದುಕೊಂಡಿದ್ದರು. ವಿನಾಯಕ ಗೋಕಾಕರನ್ನು ಉಪನ್ಯಾಸಕರಾಗಿ ತಮ್ಮ ಕಾಲೇಜಿಗೆ ನೇಮಿಸಿಕೊಂಡಿದ್ದ ಫರ್ಗ್ಯೂಸನ್ ಕಾಲೇಜಿನ ಆಡಳಿತ ಮಂಡಳಿಯೇ ಅವರ ಮೇಧಾಶಕ್ತಿಗೆ ಮೆಚ್ಚಿ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಅವರನ್ನು ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಟ್ಟಿತು.

ವಿನಾಯಕ ಗೋಕಾಕರು ಇಂಗ್ಲೆಂಡಿನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯ ವ್ಯಾಸಂಗ ಮಾಡಿದರು. ಇಂಗ್ಲೆಂಡ್‌ನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಕಲಿತು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದ ಮೊಟ್ಟ ಮೊದಲ ಭಾರತೀಯ ಎಂಬ ಕೀರ್ತಿಗೂ ಭಾಜನರಾದರು. ತಾವು ಅಂದುಕೊಂಡಿದ್ದ ಗುರಿಯನ್ನು ಸಾಧಿಸಿ ಇಂಗ್ಲೆಂಡಿನಿಂದ ಹಿಂತಿರುಗಿ ಬಂದ ಗೋಕಾಕರಿಗೆ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರ ಹುದ್ದೆಗೇರಿದರು. ಅದನ್ನು ಅವರು ಬಹಳ ಖುಷಿಯಿಂದಲೇ ಅಲಂಕರಿಸಿದರು. ಕಾಲೇಜಿನ ಆಡಳಿತ ಮಂಡಳಿ ಸಹ ಅವರನ್ನು ಬಹಳ ಅದ್ದೂರಿಯಾಗಿ ಸ್ವಾಗತಿಸಿತು. ಕ್ರಮೇಣ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಾಪಕನಾದವನೊಬ್ಬನು ಏರಬಹುದಾದ ಅತ್ಯುನ್ನತ ಹುದ್ದೆಯಾದ ಕುಲಪತಿ ಸ್ಥಾನಕ್ಕೂ ಏರಿದರು. ಅವರು ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜು, ಪುಣೆಯ ಫರ್ಗ್ಯೂಸನ್ ಕಾಲೇಜು, ಕೊಲ್ಲಾಪುರದ ರಾಜಾರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ಕೇಂದ್ರ ಸಂಸ್ಥೆ, ಸಿಮ್ಲಾದಲ್ಲಿನ ಉನ್ನತ ಅಧ್ಯಯನ ಸಂಸ್ಥೆ ಇನ್ನೂ ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಶ್ರೀಸತ್ಯಸಾಯಿ ಉನ್ನತ ಅಧ್ಯಯನ ಸಂಸ್ಥೆಯ ಕುಲಪತಿಗಳಾಗಿದ್ದರು. ಜಪಾನ್, ಅಮೆರಿಕ, ಇಂಗ್ಲೆಂಡ್, ಬೆಲ್ಜಿಯಂ, ಗ್ರೀಸ್, ಪೂರ್ವ ಆಫ್ರಿಕ ಮೊದಲಾದ ದೇಶಗಳಿಗೆ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಹೋಗಿ ಬಂದ ಹೆಗ್ಗಳಿಕೆ ಇವರದ್ದು. ಶೈಕ್ಷಣಿಕ ಸೇವೆ ಮತ್ತು ಸಾಧನೆಯ ಜೊತೆಜೊತೆಯಲ್ಲೇ ಸಾಹಿತ್ಯ ಸೇವೆ ಮತ್ತು ಸಾಧನೆಯನ್ನು ಮಾಡುತ್ತಾ ಬಂದವರು ಅವರು. ಆದ್ದರಿಂದಾಗಿ ಅವರ ಮೌಲಿಕ ಸಾಹಿತ್ಯ ಕೃತಿಗಳು ಕೂಡ ವೇಗವಾಗಿ ಹರಿದುಬಂದವು.

ಕನ್ನಡನಾಡು ಕಂಡಂತಹ ಅಗ್ರಗಣ್ಯ ಲೇಖಕರಲ್ಲೊಬ್ಬರಾಗಿರುವ ವಿ.ಕೃ.ಗೋಕಾಕರ ಬದುಕು–ಬರಹ, ಸಾಧನೆ–ಸಿದ್ಧಿ, ಬಹಳ ವಿಪುಲವೂ, ವ್ಯಾಪಕವೂ, ವಿಶಿಷ್ಟವೂ ಆದದ್ದು. ಕನ್ನಡ, ಇಂಗ್ಲಿಷ್ ಉಭಯ ಭಾಷೆಗಳಲ್ಲೂ ಗೋಕಾಕರು ಹಲವಾರು ಮಹತ್ತರ ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲೀಷ್ ಭಾಷೆಯಲ್ಲಿ ಅವರು ಬರೆದಿರುವ ಕೃತಿಗಳ ಸಂಖ್ಯೆ ಮೂವತ್ತಕ್ಕೂ ಹೆಚ್ಚು. ಇವು ಒಂದೊಂದು ಕೃತಿಗಳು ಸಾಹಿತ್ಯಾಭಿಮಾನಿಗಳ ಅಚ್ಚುಮೆಚ್ಚು. ವಿನಾಯಕ ಗೋಕಾಕರ ಮೊದಲ ಪ್ರಕಟಿತ ಕೃತಿ ಅಪರೂಪ ಎನಿಸುವ 'ಕಲೋಪಾಸಕರು'. ಅವರು ಸಮುದ್ರದ ಮೂಲಕ ಇಂಗ್ಲೆಂಡಿಗೆ ಹೋಗಿ ಬಂದ ಅನುಭವಗಳನ್ನು ಆಧರಿಸಿ ದಾಖಲಿಸಿದ ಕಾವ್ಯ ಕೃತಿ 'ಸಮುದ್ರಗೀತೆಗಳು' ಮತ್ತು 'ಸಮುದ್ರದಾಚೆಯಿಂದ ಇವು ಮಹತ್ವಪೂರ್ಣ ಕೃತಿಗಳಾಗಿವೆ. 'ಸಮುದ್ರ ಗೀತೆಗಳು' ಕವನ ಸಂಕಲನದಲ್ಲಿರುವ 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಈ ಸಾಲು ಕನ್ನಡ ಕಾವ್ಯಲೋಕದಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ಕನ್ನಡ ಕಾವ್ಯಲೋಕದಲ್ಲಿ 'ನವ್ಯ' ಎಂಬ ಹೊಸಮಾರ್ಗವು ಗೋಕಾಕರಿಂದಲೇ ಪ್ರಾರಂಭಗೊಂಡಿತೆಂಬ ಮಾತೂ ಉಂಟು.

ಗೋಕಾಕರು ಕಾವ್ಯ, ನಾಟಕ, ಪ್ರಬಂಧ, ಪ್ರವಾಸ ಕಥನ, ವಿಮರ್ಶೆ, ಮಹಾಕಾವ್ಯ ಸೇರಿದಂತೆ ಬಹುತೇಕ ಸಾಹಿತ್ಯ ಪ್ರಕಾರಗಳಲ್ಲಿ ಹಲವಾರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಮಹತ್ ಮತ್ತು ಬೃಹತ್ ಕಾದಂಬರಿಗಳಲ್ಲೊಂದಾದ 'ಸಮರಸವೇ ಜೀವನ' ಗೋಕಾಕರ ಬಹು ಮೌಲಿಕ ಕೃತಿ. 'ಜನನಾಯಕ' ಕೂಡ ಅವರ ಸುಪ್ರಸಿದ್ಧ ನಾಟಕ. 'ಭಾರತ ಸಿಂಧು ರಶ್ಮಿ, ವಿನಾಯಕರು ಸೃಷ್ಟಿಸಿದ ಮಹತ್ವಪೂರ್ಣವಾದ ಮಹಾಕಾವ್ಯ. ಹನ್ನೆರಡು ಖಂಡಗಳು, ಮೂವತ್ತೈದು ಸಾವಿರ ಸಾಲುಗಳ ಈ ಬೃಹತ್ ಮಹಾಕಾವ್ಯ ಋಗ್ವೇದ ಕಾಲದ ಜನಜೀವನದ ಚಿತ್ರಣವನ್ನು ಕುರಿತದ್ದು. ವಿಶ್ವಾಮಿತ್ರ ಈ ಮಹಾಕಾವ್ಯದ ನಾಯಕ. ಗೋಕಾಕರ ಈ ಮಹಾಕಾವ್ಯಕ್ಕೇ ಪ್ರತಿಷ್ಠಿತ 'ಜ್ಞಾನಪೀಠ ಪ್ರಶಸ್ತಿ ಬಂದಿದೆ ಎಂದು ಬಹಳಷ್ಟು ಮಂದಿ ಭಾವಿಸಿದ್ದಾರೆ. ಆದರೆ ವಿನಾ ಯಕ ಗೋಕಾಕರ ಸಾಹಿತ್ಯದ ಜೀವಮಾನ ಸಾಧನೆಗಾಗಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ನೀಡುವಾಗ ಪ್ರಶಸ್ತಿ ಆಯ್ಕೆ ಸಮಿತಿಯು ಗೋಕಾಕರ ಯಾವುದೇ ಕೃತಿಯನ್ನು ಹೆಸರಿಸಲಿಲ್ಲ. ಬದಲಿಗೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು 1969ರಿಂದ 1984ರ ಅವಧಿಯಲ್ಲಿ ನೀಡಿದ ಅಮೋಘ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಹೇಳಿದೆ. ಯಾವುದೇ ಕೃತಿಯನ್ನು ಹೆಸರಿಸದೆ ಜ್ಞಾನಪೀಠ ಪ್ರಶಸ್ತಿಯನ್ನು ಕೊಟ್ಟಿದ್ದು ಅದೇ ಮೊದಲು. ಸಾಮಾನ್ಯವಾಗಿ ಜ್ಞಾನಪೀಠ ಪ್ರಶಸ್ತಿಯನ್ನು ಆ ಸಂಸ್ಥೆಯ ಕೇಂದ್ರ ಸ್ಥಾನ ದೆಹಲಿಯಲ್ಲಿ ನೀಡಲಾಗುತ್ತದೆ. ಆದರೆ ಗೋಕಾಕರಿಗೆ ಈ ಪ್ರಶಸ್ತಿಯನ್ನು ನೀಡಲು ಸ್ವತಃ ದೇಶದ ಪ್ರಧಾನ ಮಂತ್ರಿಗಳೇ ಗೋಕಾಕರು ಇದ್ದ ಮುಂಬಯಿಗೆ ಆಗಮಿಸಿದ್ದರು. ಇದು ಗೋಕಾಕರು ಎಷ್ಟು ಮಹತ್ವದ ಮಹಾಕವಿ, ಮಹಾಸಾಹಿತಿ ಎಂಬುದನ್ನು ತೋರಿಸುತ್ತದೆ.

ವಿನಾಯಕ ಕೃಷ್ಣ ಗೋಕಾಕರ ಸಾಹಿತ್ಯ ಮತ್ತು ಶಿಕ್ಷಣ ಹಾಗೂ ನಾಡಿನ ಸಂಸ್ಕೃತಿಗೆ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ ನಾಡ ಜನತೆ ಮತ್ತು ಸಂಘ ಸಂಸ್ಥೆಗಳು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರಿಗೆ ಅನೇಕ ಪ್ರಶಸ್ತಿ, ಪುರಸ್ಕಾರ, ಗೌರವಗಳನ್ನು ನೀಡಿ ಸನ್ಮಾನಿಸಿವೆ. 1958ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಅವರು ಭಾಜನರಾಗಿದ್ದಾರೆ.1960ರಲ್ಲಿ 'ದ್ಯಾವಾ ಪೃಥಿವೀ ಕವನಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು 1979 ರಲ್ಲಿ ಪೆಸಿಫಿಕ್ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಕೇಂದ್ರ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ, ಭಾರತ ಸಿಂಧೂ ರಶ್ಮಿ ಮಹಾಕಾವ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ವಿದ್ಯಾಭವನದ ರಾಜಾಜಿ ಪ್ರಶಸ್ತಿ, ಐಬಿಎಚ್ ಪ್ರಶಸ್ತಿಗಳು ಒಳಗೊಂಡಂತೆ ನೂರಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಗೋಕಾಕರು ಭಾಜನರಾಗಿದ್ದಾರೆ. ಇಷ್ಟೇ ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಮತ್ತು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಪದವಿ ಇವರಿಗೆ ಸಂದಿದ್ದು, ಗೋಕಾಕರ ಮೂಲಕ ಇವೆರಡೂ ಕನ್ನಡಿಗರೊಬ್ಬರಿಗೆ ಮೊದಲ ಬಾರಿಗೆ ಸಂದ ಮಹತ್ವಪೂರ್ಣ ಮಹಾ ಗೌರವಗಳಾಗಿವೆ.

ಕನ್ನಡದ ಕೀರ್ತಿಯನ್ನು ಸಾಹಿತ್ಯದ ಮೂಲಕ ಜಗದಗಲ ಬೆಳಗಿದ ಇಂಥಾ ಕನ್ನಡದ ಸಾಹಿತ್ಯ ಸೂರ್ಯ ಡಾ. ವಿನಾಯಕ ಕೃಷ್ಣ ಗೋಕಾಕರು 1992ರ ಏಪ್ರಿಲ್ 28ರಂದು ಬೆಳಗಿನ ಜಾವ ಮುಂಬೈಯಲ್ಲಿ ಅಸ್ತಮಿಸಿದರು. ಅವರು ಭೌತಿಕವಾಗಿ ನಮ್ಮೊಡನೆ ಇಲ್ಲವಾದರೂ ಕೂಡ ಅವರು ಕೊಟ್ಟಿರುವ ಸಾಹಿತ್ಯದ ಬೆಳಕು ಯಾವತ್ತೂ ನಾಡಿನಲ್ಲಿ ಶಾಶ್ವತವಾಗಿ ಬೆಳಗುತ್ತಲೇ ಇರುತ್ತದೆ.

'ಸೀತಾದೇವಿ ಜನ್ಮಸ್ಥಳ'ದ ಪುನರಾಭಿವೃದ್ಧಿಗೆ ಕೇಂದ್ರ ಸಚಿವ ಅಮಿತ್ ಶಾ ಶಂಕುಸ್ಥಾಪನೆ

ಸೀತಾಮರ್ಹಿ: ಸೀತಾದೇವಿಯ ಜನ್ಮಸ್ಥಳವೆಂದು ಪರಿಗಣಿಸಲಾದ ಬಿಹಾರದ ಸೀತಾಮರ್ಹಿ ಜಿಲ್ಲೆಯ ಪುನೌರಾಧಂನಲ್ಲಿರುವ ಜಾನಕಿ ಮಂದಿರದ ಪುನರಾಭಿವೃದ್ಧಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಶಂಕುಸ್ಥಾಪನೆ ನೆರವೇರಿಸಿದರು.



882.87 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಈ ಯೋಜನೆಯ ಶಿಲಾನ್ಯಾಸ ಸಮಾರಂಭದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, ಹಲವಾರು ಕೇಂದ್ರ ಸಚಿವರು ಮತ್ತು ಇತರ ಗಣ್ಯರು ಭಾಗವಹಿಸಿದ್ದರು. ಅಮಿತ್ ಶಾ ಅವರು 'ಭೂಮಿ ಪೂಜೆ' ನೆರವೇರಿಸಿದರು ಮತ್ತು ಜಾನಕಿ ಮಂದಿರದ ಪುನರಾಭಿವೃದ್ಧಿಗಾಗಿ ಅದರ ವಿನ್ಯಾಸವನ್ನು ಅನಾವರಣಗೊಳಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೀತಾಮರ್ಹಿ–ದೆಹಲಿ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಅವರು ವರ್ಚುವಲ್ ಆಗಿ ಹಸಿರು ನಿಶಾನೆ ತೋರಿದರು. ಜುಲೈ 1 ರಂದು ದೇವಾಲಯ ಸಂಕೀರ್ಣದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸಚಿವ ಸಂಪುಟವು 882.87 ಕೋಟಿ ರೂ.ಗಳನ್ನು ಮಂಜೂರು ಮಾಡಿತ್ತು.

ಒಟ್ಟು ಮೊತ್ತದಲ್ಲಿ 137 ಕೋಟಿ ರೂ.ಗಳನ್ನು ಹಳೆಯ ದೇವಾಲಯ ಮತ್ತು ಅದರ ಆವರಣದ ಅಭಿವೃದ್ಧಿಗೆ ಖರ್ಚು ಮಾಡಲಾಗುವುದು, 728 ಕೋಟಿ ರೂ.ಗಳನ್ನು ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳಿಗೆ ಬಳಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದಲ್ಲದೆ, 10 ವರ್ಷಗಳ ಕಾಲ ಸಮಗ್ರ ನಿರ್ವಹಣೆಗೆ 16 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು ಎಂದು ಅಮಿತ್ ಶಾ ಹೇಳಿದರು.

ಬಿಹಾರ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಈ ಯೋಜನೆಯನ್ನು ಕಾರ್ಯಗತಗೊಳಿಸಲಿದೆ. ರಾಜ್ಯ ಸರ್ಕಾರವು ಇತ್ತೀಚೆಗೆ ದೇವಾಲಯದ ನಿರ್ಮಾಣ ಮತ್ತು ಪುನರಾಭಿವೃದ್ಧಿಗಾಗಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಒಂಬತ್ತು ಸದಸ್ಯರ ಟ್ರಸ್ಟ್ ಅನ್ನು ರಚಿಸಿತು.

'ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಮಾದರಿಯಲ್ಲಿ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು' ಎಂದು ಬಿಹಾರ ಬಿಜೆಪಿ ವಕ್ತಾರ ನೀರಜ್ ಕುಮಾರ್ ಈ ಹಿಂದೆ ಪಿಟಿಐಗೆ ತಿಳಿಸಿದ್ದರು, ಹೆಚ್ಚಿನ ಸಂಖ್ಯೆಯ ಯಾತ್ರಿಕರು ಪುನೌರಾಧಂಗೆ ಭೇಟಿ ನೀಡುತ್ತಾರೆ ಎಂದು ಹೇಳಿದರು.

ಈ ಯೋಜನೆಗೆ ವಿನ್ಯಾಸ ಸಲಹೆಗಾರರಾಗಿ ನೋಯ್ಡಾ ಮೂಲದ ಕಂಪನಿಯನ್ನು ನೇಮಿಸಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಸಂಸ್ಥೆಯು ರಾಮ ಜನ್ಮಭೂಮಿ ನ್ಯಾಸ್‌ಗಾಗಿ ಮಾಸ್ಟರ್ ಪ್ಲಾನಿಂಗ್ ಮತ್ತು ವಾಸ್ತುಶಿಲ್ಪ ಸೇವೆಗಳಲ್ಲಿ ತೊಡಗಿಸಿಕೊಂಡಿತ್ತು.

ಆಂಜನೇಯ ದೇಗುಲ ನಿರ್ಮಾಣಕ್ಕೆ 1.83 ಲಕ್ಷ ದೇಣಿಗೆ ನೀಡಿದ ಭಿಕ್ಷುಕಿ

ರಾಯಚೂರು, ಆ.8– ಆಂಜನೇಯ ದೇಗುಲ ನಿರ್ಮಾಣಕ್ಕಾಗಿ ವಯಸ್ಸಾದ ಭಿಕ್ಷುಕಿಯೊಬ್ಬರು 1.83 ಲಕ್ಷ ರೂ. ದೇಣಿಗೆ ನೀಡುವ ಮೂಲಕ ಅಚ್ಚರಿ ಮೂಡಿಸಿರುವ ಘಟನೆ ರಾಯಚೂರು ತಾಲೂಕಿನ ಬಿಜನಗೇರಾ ಗ್ರಾಮದಲ್ಲಿ ನಡೆದಿದೆ.



60 ವರ್ಷದ ರಂಗಮ್ಮ ಎಂಬುವವರು ಭಿಕ್ಷೆಯಿಂದ ಬಂದ ಹಣದಲ್ಲೇ ಲಕ್ಷಾಂತರ ರೂಪಾಯಿ ದೇಣಿಗೆ ನೀಡಿದವರಾಗಿದ್ದು, ಸುಮಾರು 30 ವರ್ಷಗಳ ಹಿಂದೆ ಆಂಧ್ರಪ್ರದೇಶದಿಂದ ಬಂದು ಬಿಜನಗೇರಾ ಗ್ರಾಮದಲ್ಲಿ ಏಕಾಂಗಿಯಾಗಿ ವಾಸಿಸುತ್ತಿರುವ ರಂಗಮ್ಮ ಯಾರ ಬಳಿಯೂ ಮಾತನಾಡದ ವೃದ್ಧೆ. ಡಬ್ಬಿ, ಗಂಟುಗಳಲ್ಲಿ ಕೂಡಿಟ್ಟಿದ್ದ ಹಣ ಆಕಸ್ಮಿಕವಾಗಿ ಗ್ರಾಮಸ್ಥರ ಕಣ್ಣಿಗೆ ಬಿದ್ದಿದೆ. ಗ್ರಾಮಸ್ಥರೇ ಹಣವನ್ನು ಎಣಿಸಿ, ಈ ಹಣ ಏನು ಮಾಡುತ್ತೀಯಾ ಎಂದು ವೃದ್ಧೆಯನ್ನು ಕೇಳಿದ್ದಾರೆ. ಆಗ ಅವರು ದೇವಸ್ಥಾನ ನಿರ್ಮಾಣಕ್ಕೆ ದೇಣಿಗೆಯಾಗಿ ನೀಡುವುದಾಗಿ ತಿಳಿಸಿದ್ದಾರೆ.

ರಂಗಮ್ಮಳಿಗೆ ಜನ ಇದ್ದಲ್ಲಿಗೆ ಬಂದು ಭಿಕ್ಷೆ ಕೊಟ್ಟು ಹೋಗುತ್ತಾರೆ. ಊರಿನವರೇ ಸೀರೆ, ಊಟ ಕೊಡುತ್ತಿದ್ದಾರೆ. ದಾರಿಹೋಕರು, ಆಟೋ ರಿಕ್ಷಾ ಚಾಲಕರು, ಟಂಟಂ ಚಾಲಕರು ವೃದ್ಧೆಗೆ ಹಣ ನೀಡಿದರೆ ತಮ್ಮ ವ್ಯಾಪಾರ ಜೋರಾಗಿ ನಡೆಯುತ್ತದೆ ಎಂದು ನಿತ್ಯ ಹತ್ತು, ಇಪ್ಪತ್ತು, ನೂರು ರೂಪಾಯಿ ಸೇರಿ ತಿಳಿದಷ್ಟು ಕೊಡುತ್ತಾರೆ. ಈ ಭಿಕ್ಷೆಯ ಹಣವನ್ನೇ ವೃದ್ಧೆ ದೇವಸ್ಥಾನದ ನಿರ್ಮಾಣಕ್ಕೆ ತನ್ನ ಸೇವೆಯೂ ಇರಲಿ ಎಂದು ನೀಡಿದ್ದಾರೆ. ದೇವಸ್ಥಾನಗಳ ಮುಂದೆ ಸಾಮಾನ್ಯವಾಗಿ ಭಿಕ್ಷುಕರು ಕಾಣುತ್ತಾರೆ ಆದ್ರೆ ಇಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಭಿಕ್ಷುಕಿಯೊಬ್ಬರು ದೇಣಿಗೆ ನೀಡಿದ್ದಾರೆ. ಇತ್ತೀಚಿಗೆ ದೇವಸ್ಥಾನ ಲೋಕಾರ್ಪಣೆಯಾಗಿದ್ದು, ರಂಗಮ್ಮ ಗ್ರಾಮದ ದೈವದ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ. ಗ್ರಾಮಸ್ಥರು ರಂಗಮ್ಮನ ಬಗ್ಗೆ ಈಗ ಹೆಮ್ಮೆ ವ್ಯಕ್ತಪಡಿಸುತ್ತಿದ್ದು, ಸನ್ಮಾನಿಸಿ ಗೌರವಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಒಳಮೀಸಲಾತಿಯಿಂದ ಎಲ್ಲರಿಗೂ ನ್ಯಾಯ ಸಿಗಲಿದೆ

• ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ವಿಶ್ವಾಸ • ನ್ಯಾ. ನಾಗಮೋಹನ್‌ದಾಸ್ ವೈಜ್ಞಾನಿಕ ನೆಲೆಗಟ್ಟಿನಲ್ಲಿ ವರದಿ • ಪರಿಶಿಷ್ಟ ಜಾತಿಯ ಎಲ್ಲಾ ಜನಪ್ರತಿನಿಧಿಗಳು ಒಟ್ಟಾಗಿ ಸೂಕ್ತ ನಿರ್ಧಾರ • ಮೈಸೂರಲ್ಲಿ ಪ್ರಬುದ್ಧ ಸಂಸದೀಯಪಟು ದಿ.ವೈ.ರಾಮಕೃಷ್ಣರ ಸ್ಮರಣೆ

ಮೈಸೂರು, ಆ.8(ಎಸ್‌ಬಿಡಿ)– ಒಳಮೀಸಲಾತಿ ವಿಚಾರವಾಗಿ ಪರಿಶಿಷ್ಟ ಜಾತಿಯ ಎಲ್ಲಾ ಜನಪ್ರತಿನಿಧಿಗಳೂ ಒಟ್ಟಾಗಿದ್ದು, ಎಲ್ಲರಿಗೂ ನ್ಯಾಯ ಸಿಗುವ ವಿಶ್ವಾಸವಿದೆ ಎಂದು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಹೇಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಮಾನಸ ಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣ ದಲ್ಲಿ ಶುಕ್ರವಾರ ಆಯೋಜಿಸಿದ್ದ 'ವಿವೇಕಯುತ ಸಂಸದೀಯ ಪಟು ದಿ.ವೈ.ರಾಮಕೃಷ್ಣ ಅವರ ಬದುಕು, ಸಂಘಟನೆ ಮತ್ತು ರಾಜಕಾರಣ ಸಾಧನೆಗಳು' ಕುರಿತ ಒಂದು ದಿನದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಮಾಡುವ ಕುರಿತ ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನ್‌ದಾಸ್ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ವರದಿಯನ್ನು ಸಚಿವ ಸಂಪುಟದಲ್ಲಿ ಮಂಡನೆ ಮಾಡಿದ್ದು, ಈ ಕುರಿತು ಅಂತಿಮ ನಿರ್ಧಾರ ಮಾಡಲು ಆ.16 ಶನಿವಾರ ವಿಶೇಷ ಸಚಿವ ಸಂಪುಟ ಸಭೆ ಕರೆಯಲಾಗಿದೆ. ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅತ್ಯುತ್ತಮ ವರದಿ ನೀಡಿರುವುದಕ್ಕೆ ನ್ಯಾ.ನಾಗಮೋಹನ್‌ದಾಸ್ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ನಾಗಮೋಹನ್‌ದಾಸ್ ಆಯೋಗದ ವರದಿ ಹಾಗೂ ಈ ಹಿಂದಿನ ಹಾವನೂರು, ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ನಡುವೆ ಅರ್ಧ ಪರ್ಸೆಂಟ್ ವ್ಯತ್ಯಾಸಗಳಿರಬಹುದು. ನಾಗಮೋಹನ್‌ದಾಸ್ ಅವರು 1300 ಪುಟಗಳ ವರದಿಯಲ್ಲಿ ಭಾಗಗಳು, ಜನಸಂಖ್ಯೆ, ಶೇಕಡವಾರು, ಹೀಗೆ ಎಲ್ಲಾ ಅಂಶಗಳನ್ನೂ ಸರಿಯಾಗಿ ನಮೂದಿಸಿದ್ದಾರೆ. ಆ.16ಕ್ಕೆ ಅಂತಿಮ ತೀರ್ಮಾನಕ್ಕೆ ದಿನಾಂಕ ನಿಗದಿಯಾಗಿದೆ. ಯಾರಿಗೂ ಅನ್ಯಾಯವಾಗಬಾರದು ಎಂಬುದರಲ್ಲಿ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಬದ್ಧರಾಗಿದ್ದಾರೆ. ಸುಪ್ರೀಂಕೋರ್ಟ್ ಆದೇಶ ಹಾಗೂ 35 ವರ್ಷಗಳ ಸಮುದಾಯದ ಹೋರಾಟಕ್ಕೆ ಮನ್ನಣೆ ನೀಡಬೇಕು. ನೂರೊಂದು ಜಾತಿಯಲ್ಲಿ ಯಾರಿಗೂ ಅನ್ಯಾಯವಾಗಬಾರದು ಎಂಬ ಕಾರಣಕ್ಕೆ ಚರ್ಚೆ ಮಾಡಿ, ತೀರ್ಮಾನಕ್ಕೆ ಬರೋಣ ಎಂದಿದ್ದಾರೆ. ಇದರಲ್ಲಿ ಸಂಶಯ ಬೇಡ, ಆಶಾಭಾವನೆಯಿಂದ ಇರೋಣ ಎಂದು ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಮಾನಸಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿವೇಕಯುತ ಸಂಸದೀಯಪಟು ದಿ.ವೈ.ರಾಮಕೃಷ್ಣ ಅವರ ಸಾಧನೆಗಳು ಕುರಿತ ವಿಚಾರ ಸಂಕಿರಣದಲ್ಲಿ ಸಚಿವ ಕೆ.ಹೆಚ್.ಮುನಿಯಪ್ಪ ಮಾತನಾಡಿದರು.

2–3 ದಿನದಲ್ಲಿ ಚರ್ಚೆ: ಸ್ಲೋ ಅಂಡ್ ಸ್ಟೆಡಿ ವಿನ್ಸ್ ದ ರೇಸ್(ನಿಧಾನ ಮತ್ತು ಸ್ಥಿರ ಓಟ ಗೆಲ್ಲುತ್ತದೆ) ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಒಳಮೀಸಲಾತಿ ಬಗ್ಗೆ ಮಾಧ್ಯಮದಲ್ಲಿ ಪ್ರಕಟವಾಗಿರುವುದರ ಹೊರತಾಗಿ ಲೆಫ್ಟ್–ರೈಟ್ ಎಲ್ಲರೂ ಒಂದಾಗಿದ್ದೇವೆ. ಗೃಹಸಚಿವ ಡಾ.ಜಿ.ಪರಮೇಶ್ವರ್ ಮನೆಯಲ್ಲಿ ಸಭೆ ನಡೆಸಿ, ವರದಿ ಸಲ್ಲಿಕೆಯಾದರೆ ಮುಂದೆ ಏನನ್ನು ಎದುರಿಸಬೇಕಾಗಬಹುದು ಎಂಬುದರ ಬಗ್ಗೆ ಚರ್ಚೆ ಮಾಡಿದ್ದೇವೆ. ಡಾ.ಹೆಚ್.ಸಿ. ಮಹದೇವಪ್ಪ, ಶಿವರಾಜ್ ತಂಗಡಗಿ, ಪ್ರಿಯಾಂಕ್ ಖರ್ಗೆ, ತಿಮ್ಮಾಪುರ್ ಸೇರಿದಂತೆ ಎಲ್ಲರೂ ಒಟ್ಟಿಗೆ ಚರ್ಚೆ ಮಾಡಿದ್ದೇವೆ. ಸುಪ್ರೀಂಕೋರ್ಟ್ ಅತ್ಯುತ್ತಮವಾದ ತೀರ್ಮಾನ ನೀಡಿದೆ. ಅದರಲ್ಲಿ ಭಿನ್ನಾಭಿಪ್ರಾಯಗಳು ಬೇಡ. ವರದಿಯಲ್ಲೇನಾದರೂ ಏರುಪೇರುಗಳಿದ್ದರೆ ಮತ್ತೆ ಚರ್ಚೆ ಮಾಡಿ, ಯಾವುದೇ ಗೊಂದಲವಾಗದಂತೆ ತೀರ್ಮಾನಿಸಲು ಒಪ್ಪಿದ್ದೇವೆ. ಅದರಂತೆ ಎರಡ್ಮೂರು ದಿನಗಳಲ್ಲಿ ನೂರೊಂದು ಜಾತಿಯ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು ಸಭೆ ನಡೆಸಿ, ಸೂಕ್ತ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದರು.

ವೈ.ರಾಮಕೃಷ್ಣ ಮಾದರಿಯಾಗಿದ್ದರು: ನಾನು ರಾಜಕೀಯದಲ್ಲಿ ಈ ಮಟ್ಟಕ್ಕೆ ಬರಲು ನನ್ನ ರಾಜಕೀಯ ಗುರುಗಳಾದ ಎನ್.ರಾಚಯ್ಯ ಹಾಗೂ ವೈ.ರಾಮಕೃಷ್ಣ ಅವರು ಕಾರಣ. ಈ ಇಬ್ಬರ ಸಹಕಾರವನ್ನು ನಾನು ಎಂದಿಗೂ ಮರೆಯುವುದಿಲ್ಲ. ಎನ್.ರಾಚಯ್ಯ ಹಾಗೂ ವೈ.ರಾಮಕೃಷ್ಣ ಅವರ ಸಹಕಾರವನ್ನು ಎಂದಿಗೂ ಮರೆಯಲಾಗದು. ವೈ.ರಾಮಕೃಷ್ಣ ಅವರು ವಿಧಾನ ಸಭೆಯಲ್ಲಿ ಮಾತನಾಡುವಂತಹ ಶೈಲಿಯೇ ಆಕರ್ಷಣೆಯಾಗಿತ್ತು ಇವರ ನಡವಳಿಕೆ, ಭಾಷಣಗಳು, ಬದ್ಧತೆ ಮಾದರಿಯಾಗಿತ್ತು. ಇವರು ಯಾರ ಜೊತೆ ಇದ್ದರೂ ನಿಷ್ಠಾವಂತರಾಗಿರುತ್ತಿದ್ದರು. ಅವರು ಬಿಟ್ಟುಹೋದ ದಾರಿಗೆ ಕಾಂಗ್ರೆಸ್ ನನ್ನನ್ನು ನೇಮಿಸಿದೆ. ವೈ.ರಾಮಕೃಷ್ಣ ಅವರ ಸ್ಮರಿಸುವ ಯಾವುದೇ ಕಾರ್ಯಗಳಿಗೆ ನಾನು ಹಾಗೂ ನಮ್ಮ ಸರ್ಕಾರದ ಸಹಕಾರ ಇರಲಿದೆ ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರಾದ ಎಂ.ಶಿವಣ್ಣ, ಬಿ.ಸೋಮಶೇಖರ್, ಮಾಜಿ ಎಂಎಲ್‌ಸಿ ಆರ್.ಧರ್ಮಸೇನಾ, ವಿಧಾನಸಭಾ ಸಚಿವಾಲಯದ ಕಾರ್ಯದರ್ಶಿ ಎಸ್.ಮೂರ್ತಿ, ವೈ.ರಾಮಕೃಷ್ಣರ ಪುತ್ರ ಆರ್.ಲೋಕೇಶ್, ಡಾ.ಬಾಬೂ ಜಗಜೀವನ ರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವ ಉಳಿಯಲು ಮತಪತ್ರ ಪದ್ಧತಿ ಬರಬೇಕು

ಮೈಸೂರು, ಆ.8– ಪ್ರಜಾಪ್ರಭುತ್ವ ಉಳಿಯಬೇಕಾದರೆ ಚುನಾವಣೆಯಲ್ಲಿ ಮತಪತ್ರ ಪದ್ಧತಿ ಜಾರಿಗೆ ಬರಬೇಕು ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಹೇಳಿದರು.

ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತಯಂತ್ರ, ಮತಕಳ್ಳತನ ಮಾಡಿಯೇ ಅಧಿಕಾರಕ್ಕೆ ಬಂದಿದೆ ಎನ್ನುವುದು ಸತ್ಯ. ಮೂರು ಬಾರಿ ಪ್ರಧಾನಿ ಅಗಿರುವ ನರೇಂದ್ರಮೋದಿ ಅವರಿಗೆ ಶೇ.30ರಷ್ಟು ಮಾತ್ರ ಬೆಂಬಲ ನೀಡಿದ್ದು, ಶೇ.70ರಷ್ಟು ಜನ ಅವರ ವಿರುದ್ಧವಾಗಿ ಮತ ನೀಡಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ವಿರುದ್ಧ ಅಲೆ ಇದ್ದಿದ್ದರಿಂದ ಕಾಂಗ್ರೆಸ್ 180 ಸ್ಥಾನ ಪಡೆಯಬೇಕಿತ್ತು. ಆದರೆ ಮತಕಳ್ಳತನ ಹಾಗೂ ಮತಯಂತ್ರದ ಟ್ಯಾಂಪರಿಂಗ್‌ನಿಂದಾಗಿ 135 ಸ್ಥಾನ ಬಂದಿದೆ ಎಂದರು.

ಮತಯಂತ್ರಗಳ ಟ್ಯಾಂಪರಿಂಗ್ ನಡೆಯುತ್ತಿದೆ ಎಂದು ನಾನು 11 ವರ್ಷಗಳ ಹಿಂದೆಯೇ ಹೇಳಿದ್ದೆ. ಆದರೆ ಆಗ ನನ್ನ ಮಾತನ್ನು ಯಾರು ನಂಬಿರಲಿಲ್ಲ. ಈಗ ರಾಹುಲ್ ಗಾಂಧಿಯೇ ಹೋರಾಟಕ್ಕೆ ಇಳಿದಿದ್ದಾರೆ. ಮತಪತ್ರ ಬಾರದ ಹೊರತು ಮತಯಂತ್ರ ಇರುವವರೆವಿಗೂ ಬಿಜೆಪಿಯೇ ಗೆಲ್ಲುತ್ತದೆ. ಆದ್ದರಿಂದ ಪ್ರಜಾಪ್ರಭುತ್ವ ಉಳಿಯಬೇಕಾದರೆ ಮತಪತ್ರ ಪದ್ಧತಿ ಜಾರಿಗೆ ಬರಬೇಕು ಎಂದು ಪ್ರತಿಪಾದಿಸಿದರು.

ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಿ

ನಿವೃತ್ತ ನ್ಯಾ.ನಾಗಮೋಹನ್‌ದಾಸ್ ಆಯೋಗ ಒಳಮೀಸಲಾತಿ ವರದಿ ಸಲ್ಲಿಸಿದೆ. ಅದು ಸಾರ್ವಜನಿಕ ಆಸ್ತಿ. ಆದ್ದರಿಂದ ಅದನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲಿ. ಈಗಿನ ಮಂತ್ರಿಗಳು ಯಾರೂ ವರದಿಯನ್ನು ಓದುವುದಿಲ್ಲ. ಕೇವಲ ದುಡ್ಡು ತಗೊಂಡು ಬಾ ಅಂತ ಅಷ್ಟೇ ಹೇಳೋದು. ಕಾಂತರಾಜು ವರದಿ ಸರ್ಕಾರದ ಕೈ ಸೇರಿ 10 ವರ್ಷವಾಯಿತು. ಏನಾಯಿತು ಆ ವರದಿ?. ನೀವು ಸುಮ್ಮನಿದ್ದರೆ ನಾಗಮೋಹನ ದಾಸ್ ವರದಿಯೂ ಅದೇ ಹಾದಿ ಹಿಡಿಯುತ್ತದೆ. ಚಿತ್ರದುರ್ಗದಲ್ಲಿ ನೂರಾರು ವಕೀಲರು ಕಪ್ಪು ಕೋಟು ಧರಿಸಿ, ಬೀದಿಗಿಳಿದು 'ಜೈ ಮಾದಿಗ' ಎಂದಿದ್ದು, ಒಂದು ಚೇತನವಾಯಿತು. ವರದಿ ಜಾರಿಯಾಗುವವರೆಗೂ ಸುಮ್ಮನಿರಬೇಡಿ.

-ಎ.ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಸಿದ್ದರಾಮಯ್ಯರ ಕರೆತಂದದ್ದು ವಿಶ್ವನಾಥ್–ರೇವಣ್ಣ

ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ಬರಲು ಎ.ಹೆಚ್.ವಿಶ್ವನಾಥ್ ಹಾಗೂ ಹೆಚ್.ಎಂ.ರೇವಣ್ಣ ಅವರೇ ಮೂಲ ಕಾರಣಕರ್ತರು. ಕಾಂಗ್ರೆಸ್ ಅವರ ಕೈಹಿಡಿದಿದ್ದರಿಂದ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಹಿಂದಿನ ಇತಿಹಾಸ ಮರೆತರೆ ತಪ್ಪಾಗುತ್ತದೆ. ಸಿದ್ಧಾಂತದ ಮೇಲೆ ನಿಲ್ಲುವವರಿಗೆ ಅಧಿಕಾರ ದಾಹ ಇರುವುದಿಲ್ಲ ಎನ್ನುವುದಕ್ಕೆ ವಿಶ್ವನಾಥ್ ಹಾಗೂ ಸಿ.ಎಂ.ಇಬ್ರಾಹಿಂ ವೇದಿಕೆಯಲ್ಲಿ ಸಾಕ್ಷೀಭೂತರಾಗಿದ್ದಾರೆ. ಇವರು ಸಿದ್ಧಾಂತದ ಮೇಲೆ ನಿಲ್ಲುವವರು. 2019ರ ಚುನಾವಣೆ ವೇಳೆ ಇಬ್ರಾಹಿಂ ಒಬ್ಬರೇ ಬಂದು ಪ್ರಚಾರ ಮಾಡಿದ್ದರು. ಜೆಡಿಎಸ್–ಬಿಜೆಪಿ ಮೈತ್ರಿಯಿಂದ ನನಗೆ ಸೋಲಾದರೂ ಹಿಂದಿಗಿಂತ ಒಂದು ಲಕ್ಷ ಹೆಚ್ಚು ಮತ ಬಂದಿದ್ದವು. ಬದ್ಧತೆಯ ಸಹಕಾರವನ್ನು ನಾವು ನೆನೆಯಬೇಕು ಎಂದು ಸಚಿವ ಕೆ.ಹೆಚ್.ಮುನಿಯಪ್ಪ ತಿಳಿಸಿದರು.

ಮೈಸೂರಲ್ಲಿ ಸಡಗರ ಸಂಭ್ರಮದ ವರಮಹಾಲಕ್ಷ್ಮೀ ಹಬ್ಬ ಆಚರಣೆ


ಮೈಸೂರಿನ ಸಿದ್ಧಾರ್ಥನಗರದ ಮನೆಯೊಂದರಲ್ಲಿ ಪುರಿ ಜಗನ್ನಾಥ ರಥಯಾತ್ರೆ ಅಲಂಕಾರದೊಂದಿಗೆ ವಿಶೇಷ ರೀತಿಯಲ್ಲಿ ವರಮಹಾಲಕ್ಷ್ಮೀ ಹಬ್ಬವನ್ನು ಆಚರಿಸಲಾಯಿತು.

ಮೈಸೂರು, ಆ.8– ಸಾಂಸ್ಕೃತಿಕ ನಗರಿ, ಮೈಸೂರಿನಲ್ಲಿ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಶ್ರಾವಣ ಮಾಸದಲ್ಲಿ ಆಚರಿಸುವಂತಹ ವರಮಹಾಲಕ್ಷ್ಮೀ ಹಬ್ಬಕ್ಕೆ ವಿಶೇಷವಾದ ಮಹತ್ವವಿದೆ. ಅಷ್ಟೈಶ್ವರ್ಯ ಸಿದ್ಧಿಗಾಗಿ ಪ್ರಾರ್ಥಿಸಿ, ವರಮಹಾಲಕ್ಷ್ಮೀಯನ್ನು ಪೂಜಿಸುವ ಪದ್ಧತಿ ರೂಡಿಯಲ್ಲಿದೆ. ಅಲ್ಲದೆ ಇದು ಮಹಿಳೆಯರ ಅತ್ಯಂತ ಸಂಭ್ರಮದ ಹಬ್ಬವೂ ಆಗಿದೆ. ಅದರಂತೆ ಇಂದು ಎಲ್ಲೆಡೆ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು.

ಸಂಪ್ರದಾಯದಂತೆ ಕಳಸ ಪ್ರತಿಷ್ಠಾಪಿಸಿ ಲಕ್ಷ್ಮೀ ಮುಖವಾಡವನ್ನು ಧರಿಸಿ, ಹೊಸ ವಸ್ತ್ರ ಹಾಗೂ ಆಭರಣ ಧರಿಸಿ ಪೂಜಿಸುವ, ಹಣ್ಣುಗಳು ಹಾಗೂ ಬಗೆ ಬಗೆಯ ತಿನಿಸುಗಳನ್ನು ನೈವೇದ್ಯಕ್ಕಿಟ್ಟು ವರಮಹಾಲಕ್ಷ್ಮೀ ಹಬ್ಬವನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಐಶ್ವರ್ಯ–ಸಂಪತ್ತು ವೃದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಮನೆಮನೆಗೆ ಹೋಗಿ ಮುತ್ತೈದೆಯರನ್ನು ಅರಿಶಿನ–ಕುಂಕುಮ ಸ್ವೀಕಾರಕ್ಕೆ ಆಹ್ವಾನಿಸುವುದು, ಪರಿಚಿತರು ಹಾಗೂ ಸಂಬಂಧಿಕರ ಮನೆಗಳಿಗೆ ಹೋಗಿ ಕುಂಕುಮ ತೆಗೆದುಕೊಂಡು ಬರುತ್ತಿದ್ದ ದೃಶ್ಯ ಎಲ್ಲೆಡೆ ಕಂಡುಬಂದಿತು. ಹಬ್ಬದ ಅಂಗವಾಗಿ ಮೈಸೂರಿನ ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆ ನೆರವೇರಿಸಲಾಯಿತು.

ಸಂಗೊಳ್ಳಿ ರಾಯಣ್ಣ ಸ್ಮಾರಕಕ್ಕೆ 110 ಎಕರೆ ಭೂಮಿ ಮೀಸಲು

ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ



ಬೆಂಗಳೂರು, ಆ.8– ಸಂಗೊಳ್ಳಿ ರಾಯಣ್ಣ ಸ್ಮಾರಕ ನಿರ್ಮಾಣಕ್ಕ 110 ಎಕರೆ ಭೂಮಿ ಮೀಸಲಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಘೋಷಿಸಿದರು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿ 218ನೇ ವಾರ್ಷಿಕ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಿದ ನಂತರ ಮಾಧ್ಯಮ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಎರಡು ಯುದ್ಧಗಳನ್ನು ನಡೆಸಿದ್ದರು. ಮೊದಲನೆಯ ಯುದ್ಧದಲ್ಲಿ ಗೆದ್ದರು. ಎರಡನೆಯ ಯುದ್ಧದಲ್ಲಿ ಬ್ರಿಟಿಷರಿಂದ ಸೆರೆಹಿಡಿಯಲ್ಪಟ್ಟರು. ಎಲ್ಲಾ ಜಾತಿ ವಿಭಾಗಗಳಿಗೆ ಸೇರಿದ ಜನರು ರಾಣಿ ಚೆನ್ನಮ್ಮ ಅವರ ಸೈನ್ಯದಲ್ಲಿದ್ದರು. ರಾಯಣ್ಣ ಅವರ ಆಪ್ತರಾಗಿದ್ದರು. ತುಂಬಾ ಧೈರ್ಯಶಾಲಿಯಾಗಿದ್ದರು. 1931 ರಲ್ಲಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟರು. ಅವರನ್ನು ಬ್ರಿಟಿಷರು ಗಲ್ಲಿಗೇರಿಸಿದ ಸ್ಥಳದಲ್ಲಿಯೇ ರಾಜ್ಯ ಸರ್ಕಾರ 110 ಎಕರೆ ಭೂಮಿಯನ್ನು ಮಂಜೂರು ಮಾಡುತ್ತಿದ್ದು, ಸ್ಮಾರಕ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ಆರ್. ರಾಮಲಿಂಗಾ ರೆಡ್ಡಿ ಸೇರಿದಂತೆ ಇತರರಿದ್ದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ಗೆ ಯುಪಿಐ ಅಳವಡಿಕೆಗೆ ಪ್ರಯತ್ನ


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ಗೆ ಯುಪಿಐ ಅಳವಡಿಸುವ ಪ್ರಯತ್ನವಾಗಿ ಬ್ಯಾಂಕ್ ಅಧ್ಯಕ್ಷ ಜಿ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಆರ್.ಸೋಮಣ್ಣ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಅವರು ಬೆಂಗಳೂರಿನ ಇಂಡಿಯಾ, ಪೇಸಿಸ್ ಸಂಸ್ಥೆಗೆ ಭೇಟಿ ನೀಡಿ, ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ ಕುರಿತು ಪೇಸಿಸ್ ಸಿಇಓ ರಾಜೀವ್, ದೀಪಕ್, ರಘುರಾಂ ಮತ್ತು ವೀರಣ್ಣ ಅವರಿಂದ ಮಾಹಿತಿ ಪಡೆದರು.

ನ್ಯಾ.ಎಚ್.ಎನ್.ನಾಗಮೋಹನ ದಾಸ್ ಆಯೋಗದ ಒಳ ಮೀಸಲಾತಿ ವರದಿ

ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಅನ್ಯಾಯದ ಅನುಮಾನ; ಸಂಪುಟ ಉಪಸಮಿತಿ ರಚನೆಗೆ ಆಗ್ರಹ

• ಲೋಪದೋಷ ಸರಿಪಡಿಸಲು ಆಗ್ರಹಿಸಿ ಇಂದು ಮೈಸೂರಲ್ಲಿ ಪ್ರತಿಭಟನಾ ಸಭೆ • ಇಂದು ಮೈಸೂರಿಗೆ ಆಗಮಿಸಲಿರುವ ಸಿಎಂ ಸಿದ್ದರಾಮಯ್ಯರನ್ನು ಭೇಟಿಯಾಗಿ ವಿವರಿಸಲು ನಿರ್ಧಾರ • ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಮುಖಂಡರ ಸಭೆ ತೀರ್ಮಾನ

ಮೈಸೂರು,ಆ.8(ಎಸ್‌ಪಿಎನ್)– ನ್ಯಾ.ಎಚ್.ಎನ್. ನಾಗಮೋಹನ ದಾಸ್ ಆಯೋಗದ ಒಳಮೀಸಲಾತಿ ವರದಿ ಅಪೂರ್ಣವಾಗಿದ್ದು, ಇದನ್ನು ಸರಿಪಡಿಸಲು ಸಚಿವ ಸಂಪುಟ ಉಪ ಸಮಿತಿ ರಚಿಸುವಂತೆ ಒತ್ತಾಯಿಸಿ ಪರಿಶಿಷ್ಟ ಜಾತಿ(ಬಲಗೈ) ಮುಖಂಡರು ನಾಳೆ(ಆ.9)ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮೈಸೂರು ಪುರಭವನದ ಬಳಿ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ.

ಈ ಸಂಬಂಧ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಮುದಾಯದ ಮುಖಂಡರು ಸಭೆ ನಡೆಸಿ, ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಭೆಯ ನೇತೃತ್ವವಹಿಸಿದ್ದ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ನ್ಯಾ.ನಾಗಮೋಹನ ದಾಸ್ ನೇತೃತ್ವದ ಆಯೋಗ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ 300 ಪುಟಗಳ ವರದಿ ಮಾಹಿತಿ ದೊರೆತಿದ್ದು, ಇದನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿ(ಬಲಗೈ) ಪಟ್ಟಿಯಲ್ಲಿ 48ಕ್ಕೂ ಹೆಚ್ಚು ಉಪ ಪಂಗಡಗಳಿವೆ. ಎಲ್ಲಾ ಉಪಪಂಗಡಗಳು ಸೇರಿದರೆ ಒಟ್ಟು 50 ಲಕ್ಷ ಜನಸಂಖ್ಯೆಯಿದೆ. ಈ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಮರುಹಂಚಿಕೆ ಆಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ನ್ಯಾ.ನಾಗಮೋಹನ ದಾಸ್ ವರದಿಯನ್ನು ಅಲ್ಲಗೆಳೆಯುತ್ತಿಲ್ಲ. ಆದರೆ, ಈ ವರದಿಯನ್ನು ಸಂಪೂರ್ಣವಾಗಿ ಒಪ್ಪಲು ಸಿದ್ಧವಿಲ್ಲ. ಈ ವರದಿಯಲ್ಲಿ ಬಲಗೈ ಸಮುದಾಯದಲ್ಲಿ ಬರುವ ಕೆಲವು ಉಪಪಂಗಡಗಳನ್ನು ಪ್ರತ್ಯೇಕಿಸಿ, ಅಂಕಿ–ಅಂಶಗಳನ್ನು ತೋರಿಸಿದ್ದಾರೆ. ಇದರಿಂದ ಬಲಗೈ ಸಮುದಾಯದ ಸಂಖ್ಯೆ ಕಡಿಮೆಯಾಗಿದೆ. ಇವೆಲ್ಲವನ್ನೂ ಒಟ್ಟುಗೂಡಿಸಿದರೆ, 35ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಆಗಲಿದೆ. ಈ ಅಸ್ಪಷ್ಟತೆಯನ್ನು ಸರಿದೂಗಿಸಲು ಸಚಿವ ಸಂಪುಟ ಉಪಸಮಿತಿ ರಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಲಾಗುವುದು ಎಂದು ಹೇಳಿದರು.


ನ್ಯಾ.ನಾಗಮೋಹನದಾಸ್ ಆಯೋಗದ ವರದಿ ಸಂಬಂಧ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಮುಖಂಡರ ಸಭೆ ನಡೆಯಿತು.

ನ್ಯಾ.ಎಚ್‌ಎನ್. ನಾಗಮೋಹನ ದಾಸ್ ಆಯೋಗದ ಒಳ ಮೀಸಲಾತಿ ವರದಿ ಅವೈಜ್ಞಾನಿಕವಾಗಿದೆ. ವರ್ಗೀಕರಣ ಮಾಡುವಾಗ ಹಲವಾರು ತಪ್ಪುಗಳನ್ನು ಮಾಡಿದ್ದಾರೆ. ಜತೆಗೆ ಜಾತಿ, ಪ್ರವರ್ಗ ಮಾಡುವ ಸಂದರ್ಭದಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಹಾಗೂ ಆದಿಆಂಧ್ರ ಎಂದು ವಿಂಗಡಿಸಿ ಬೇಕಂತಲೇ ಬಲಗೈ ಸಮುದಾಯದ ಅಂಕಿ ಅಂಶಗಳು ಕಡಿಮೆಯಾಗಬೇಕೆಂಬ ಷಡ್ಯಂತ್ರ ರೂಪಿಸಿದ್ದಾರೆ ಎಂಬ ಅನುಮಾನ ಮೂಡಿದೆ ಎಂದು ಆರೋಪಿಸಿದರು.

ಆಂಧ್ರದ ಗಡಿಭಾಗದಲ್ಲಿರುವ ಬರ್ಯನ್, ಮಾಲ ಅವರು ಗೆಜೆಟ್ ನೋಟಿಫಿಕೇಷನ್ ಪ್ರಕಾರ ಬಲಗೈ ಎಂಬುದು ಸ್ಪಷ್ಟವಾಗಿದೆ ಅವರನ್ನೂ ಮಾದಿಗ ಸಂಬಂಧಿತ ಜಾತಿಗಳಿಗೆ ಸೇರಿಸಿದ್ದಾರೆ. ಬೇಕಂತಲೇ ಷಡ್ಯಂತ್ರ ಮಾಡಿ ದ್ದಾರೆ. 2011ರ ಗಣತಿ ಪ್ರಕಾರ ನಮ್ಮ ಸಮುದಾಯ ಹೆಚ್ಚಿದೆ. ಆದರೆ 2025ರ ಸಮೀಕ್ಷೆಯಲ್ಲಿ ಹೇಗೆ ಕಡಿಮೆಯಾಯಿತು?. ಪರಾರ್ ಹಾಗೂ ಪರ್ಯಾತ್, ಛಲವಾದಿ ಎಲ್ಲವೂ ವಿಂಗಡಣೆಯಾಗಿದೆ. ಇವೆಲ್ಲವೂ ಸೇರಿದಂತೆ ಮಾದಿಗ ಸಮುದಾಯಕ್ಕಿಂತ ಹೆಚ್ಚು ಬರುತ್ತೇವೆ. ಆದಿ ಕರ್ನಾಟಕ, ಆದಿಆಂಧ್ರ, ಆದಿದ್ರಾವಿಡ ಪದಗಳು ಜಾತಿಸೂಚಕ ಅಲ್ಲ ಎನ್ನುತ್ತಾರೆ. ಆ ವರ್ಗಕ್ಕೂ ಶೇ.1ರಷ್ಟು ಮೀಸಲಾತಿ ನೀಡಿದ್ದಾರೆ. ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಈ ವರದಿ ಸಂವಿಧಾನದ ಆಶಯಗಳನ್ನು ಉಲ್ಲಂಘನೆ ಮಾಡಿದೆ. ಯಾವ ಸಿಬ್ಬಂದಿಗೂ ತರಬೇತಿ ನೀಡಿಲ್ಲ, ಸಭೆ ಮಾಡಿಲ್ಲ. ಸಮೀಕ್ಷೆಯಲ್ಲಿ ಪಾಲ್ಗೊಂಡ ಎಲ್ಲಾ ಸಿಬ್ಬಂದಿಗೂ ಟ್ಯಾಬ್ ಕೊಡಲಿಲ್ಲ, ಟ್ಯಾಬ್ ಕೊಟ್ಟಿದ್ದರೂ ಸಹ ನೆಟ್‌ವರ್ಕ್ ಸಮಸ್ಯೆ ಉಂಟಾಗಿದೆ. ಬೆಂಗಳೂರು, ಬಳ್ಳಾರಿ, ರಾಯಚೂರು ಹಾಗೂ ದಕ್ಷಿಣ ಕನ್ನಡ ಭಾಗದಲ್ಲಿ ಯಾರೂ ಸಹ ಅಪ್‌ಲೋಡ್ ಮಾಡಿಲ್ಲ. ಹೀಗಾಗಿ ಸಾಮಾಜಿಕ ನ್ಯಾಯಕ್ಕೆ ಈ ವರದಿ ವಿರುದ್ಧವಾಗಿದೆ ಎಂದು ಟೀಕಿಸಿದರು.

ಪ್ರತಿಭಟನಾ ಸಭೆ: ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಕಾರ್ಯಕ್ರಮ ನಿಮಿತ್ತ ನಾಳೆ(ಆ.9) ಮೈಸೂರಿಗೆ ಆಗಮಿಸುತ್ತಿರುವ ಹಿನ್ನಲೆಯಲ್ಲಿ ಪ್ರತಿಭಟನಾ ಸಭೆ ಹಮ್ಮಿಕೊಂಡಿದ್ದು, ಅವರನ್ನು ಭೇಟಿಯಾಗಿ, ನ್ಯಾ.ನಾಗಮೋಹನ ದಾಸ್ ವರದಿಯಲ್ಲಿನ ಅಪೂರ್ಣ ಮಾಹಿತಿಯನ್ನು ಎಳೆಎಳೆಯಾಗಿ ವಿವರಿಸಿ, ಲೋಪಗಳನ್ನು ಸರಿಪಡಿಸಲು ಸಚಿವ ಸಂಪುಟ ಉಪ ಸಮಿತಿ ರಚಿಸುವುದು ಅವಶ್ಯ ಎಂದು ಕೋರಲಾಗುವುದು ಎಂದು ತಿಳಿಸಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮಾತನಾಡಿ, ಬಲಗೈ ಸಮುದಾಯದ ಉಪಪಂಗಡಗಳ ಜನಸಂಖ್ಯೆಯನ್ನು ಪ್ರತ್ಯೇಕ್ಷಿಸಿ, ವರದಿ ನೀಡಿದ್ದಾರೆ. ಹಾಗಾಗಿ ಬಲಗೈ ಸಮುದಾಯದ ಕಡಿಮೆ ಜನಸಂಖ್ಯೆ ತೋರಿಸಿದ್ದಾರೆ. ಇಂತಹ ಅಪೂರ್ಣ ವರದಿಯನ್ನು ಒಪ್ಪಲು ಸಾಧ್ಯವೇ ಇಲ್ಲ. ಈ ಹೋರಾಟ ನಮ್ಮ ಮುಂದಿನ ಪೀಳಿಗೆಯ ಭವಿಷ್ಯವಾಗಿರುವುದರಿಂದ ರಾಜ್ಯಾದ್ಯಂತ ಬಲಗೈ ಸಮುದಾಯ ನಾಳೆ(ಆ.9) ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಂಡಿದೆ. ಅದೇ ರೀತಿ ಮೈಸೂರಿನಲ್ಲೂ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಈ ಅನ್ಯಾಯವನ್ನು ಖಂಡಿಸಿ, ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಶ್ರೀ ಸಿದ್ದರಾಮ ಶಿವಯೋಗಿ ಸ್ವಾಮೀಜಿ, ಹಿರಿಯ ವಕೀಲರಾದ ಉಮೇಶ್, ಕೆ.ಗಂಗಾಧರ್, ಎಂ.ಗುರುದೇವ್, ಅರ್ಜುನ್ ಬೆಳಗುಂದ, ಲೋಹಿತ್ ಹುಣಸೂರು, ನಾಗೇಂದ್ರ ಕಗ್ಗಹಳ್ಳಿ, ಮಂಜುನಾಥ್, ಎಲ್.ಸದಾನಂದ, ಎನ್.ರವಿಕುಮಾರ್, ಎಂ.ಕಿರಣ್ ಕುಮಾರ್, ತಿಮ್ಮಯ್ಯ, ರಾಜೇಶ್ ಚಿಕ್ಕಳ್ಳಿ, ಡಿ.ಎನ್.ಮಂಜುಳ, ಎಂ.ಮಾದೇಶ, ಕೃಷ್ಣ, ಸಾಹಿತಿ ಸಿದ್ದಲಿಂಗಸ್ವಾಮಿ, ಶಿವಕುಮಾರ್, ಸೇರಿದಂತೆ ಇನ್ನಿತರರಿದ್ದರು.

ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಚುನಾವಣಾ ವೀಕ್ಷಕ ಪೀಟರ್‌ನಿಂದ ಗೆದ್ದಿರುವುದನ್ನು ಸಿದ್ದರಾಮಯ್ಯ ಮರೆತಿದ್ದಾರೆ!

• ಮತಗಳ್ಳತನ ಆರೋಪಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ತಿರುಗೇಟು • ಗಾಂಧಿ ಹೆಸರು ದುರ್ಬಳಕೆ • ಫಿರೋಜ್ ಗಾಂಡಿ ಹೆಸರನ್ನು ಫಿರೋಜ್ ಗಾಂಧಿಯಾಗಿ ಬದಲಾವಣೆ • ಗಾಂಧಿ ಹೆಸರು ಬಳಸಿಯೇ ದೇಶದ ಜನರಿಗೆ ಮೋಸ

ಮೈಸೂರು, ಆ.8(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನದಿಂದ ಬಿಜೆಪಿ ಗೆದ್ದಿದೆ ಎಂದು ಆರೋಪ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತ್ಯಾತೀತ ಜನತಾ ದಳ ತೊರೆದು ಕಾಂಗ್ರೆಸ್‌ಗೆ ಬಂದು, ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಚುನಾವಣಾ ವೀಕ್ಷಕ ಪೀಟರ್ ಬೆಂಬಲದಿಂದ ಗೆದ್ದಿರುವುದನ್ನು ಮರೆತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ನೆನಪಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಮತಗಳ್ಳತನ ನಡೆದಿದೆ ಎಂಬ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಕ್ಕೆ ತಿರುಗೇಟು ನೀಡಿದರು.

ತಿ.ನರಸೀಪುರದಲ್ಲಿ ಚುನಾವಣಾ ಫಲಿತಾಂಶ ಪ್ರಕಟವಾಗುವ ವೇಳೆಗೆ ಉಲ್ಟಾ ಹೊಡೆದು ಡಾ.ಮಹದೇವಪ್ಪ ಗೆಲುವು ಸಾಧಿಸಿರುವುದನ್ನು ಸಿದ್ದರಾಮಯ್ಯ ಮರೆತಿದ್ದಾರೆ ಎಂದರು.



ಹಾಗಾದರೆ ಚನ್ನಪಟ್ಟಣ, ಸಂಡೂರು, ರಾಮನಗರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿರುವುದು ನ್ಯಾಯ ಸಮ್ಮತವಾಗಿದೆಯೇ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ ಅವರು, ರಾಹುಲ್ ಗಾಂಧಿ ತರಹ ಸಿದ್ದರಾಮಯ್ಯ ಕೂಡ ಮಾತನಾಡಿದರೆ ಏನು ಹೇಳಬೇಕು ಎಂದು ತಿಳಿಯುತ್ತಿಲ್ಲ ಎಂದು ಹೇಳಿದರು.

ಮತಗಳ್ಳತನದ ಬಗ್ಗೆ ಮಾತನಾಡುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಲಿಲ್ಲ. ಈಗ ತಮ್ಮ ಕ್ಷೇತ್ರದ ಮಕ್ಕಳಾದರೂ ಕಾಲೇಜಿನಲ್ಲಿ ಓದಲು ಕಾಲೇಜ್ ನಿರ್ಮಿಸಲಿ ಎಂದು ಸಲಹೆ ನೀಡಿದರು.

ಚುನಾವಣೆಯಲ್ಲಿ ಸೋತು ಕಂಗೆಟ್ಟಿರುವ ರಾಹುಲ್ ಗಾಂಧಿ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಮತಗಳ್ಳತನವಾಗಿದೆ ಎಂಬುದಕ್ಕೆ ಅವರ ಬಳಿ ಸರಿಯಾದ ಸಾಕ್ಷಿ ಇಲ್ಲ. ಜನರಿಗಿಂತ ಮತದಾರರು ಇದ್ದಾರೆ ಎಂಬುದಕ್ಕೆ ಸಾಕ್ಷಿ ಇಲ್ಲ. ಒಂದಕ್ಕೊಂದು ಸಂಬಂಧ ಇಲ್ಲದೆ ಆರೋಪ ಮಾಡಿದ್ದಾರೆ ಎಂದು ಪ್ರತಾಪ್ ಸಿಂಹ ದೂರಿದರು.

ಫಿರೋಜ್ ಗಾಂಡಿ ಎಂಬ ಹೆಸರನ್ನು ಫಿರೋಜ್ ಗಾಂಧಿ ಎಂದು ಬದಲಾಯಿಸಿಕೊಂಡ ವಂಶ ಇವರದು. ಗಾಂಧಿ ಸರ್‌ನೇಮ್ ಇಟ್ಟುಕೊಂಡು ಮೋಸ ಮಾಡುತ್ತಿರುವ ವಂಶ ಇವರದು. ಇವರು ಈಗ ಪ್ರಮಾಣಿಕತೆಯ ಮಾತನಾಡುತ್ತಿದ್ದಾರೆ ಎಂದು ಗೇಲಿ ಮಾಡಿದರು.

ಜನರು ಎಲ್ಲಾ ಚುನಾವಣೆಯಲ್ಲಿ ಒಂದೇ ರೀತಿ ಮತ ಹಾಕುವುದಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ಒಂದು ರೀತಿ ಮತ ಚಲಾಯಿಸಿದರೆ, ಲೋಕಸಭಾ ಚುನಾವಣೆಯಲ್ಲಿ ಮತ್ತೊಂದು ರೀತಿಯ ಮತ ಹಾಕುತ್ತಾರೆ. ಎರಡನ್ನು ಒಂದೇ ರೀತಿಯಲ್ಲಿ ಹೋಲಿಕೆ ಮಾಡುವುದು ಸರಿಯಲ್ಲ. ಇದರ ಕನಿಷ್ಟ ಜ್ಞಾನ ರಾಹುಲ್ ಗಾಂಧಿಗೆ ತಿಳಿದಿಲ್ಲ ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಕ್ಕೆ ಕಿಡಿಕಾರಿದ ಪ್ರತಾಪ್ ಸಿಂಹ ಅವರು, ಲಕ್ಷ್ಮಣ್ ಒಬ್ಬ ಮುಠಾಳ. ಆತನ ಬಳಿ ಏನಾದರೂ ಸಾಕ್ಷಿ ಇದ್ದರೆ ನ್ಯಾಯಾಲಯಕ್ಕೆ ನೀಡಲಿ, ಅದು ಬಿಟ್ಟು ಜೇಬಿನಲ್ಲಿ ಇಟ್ಟುಕೊಂಡು ಏಕೆ ಓಡಾಡಬೇಕು. ಲಕ್ಷ್ಮಣ್, ಪುಷ್ಪಾ ಅಮರನಾಥ್ ಹಾಗೂ ಚಿಕ್ಕಬಳ್ಳಾಪುರದ ಕೂಗುಮಾರಿ ವಿರುದ್ಧ ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದು, ಈಗ ಇವರ ಬಗ್ಗೆ ಮಾತನಾಡಿದರೆ ನ್ಯಾಯಾಂಗ ನಿಂದನೆ ಆಗುತ್ತದೆ ಎಂದು ಸ್ಪಷ್ಟಪಡಿಸಿದರು.

ಒಕ್ಕಲಿಗರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕಾಂಗ್ರೆಸ್ ವಕ್ತಾರ ಸೀತಾರಾಮ್ ವಿರುದ್ಧ ಇನ್ನು ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಒಕ್ಕಲಿಗರನ್ನು ಬೈಯಲು ಸೀತಾರಾಮ್ ಹಾಗೂ ನಾಲ್ವಡಿ ಅವರನ್ನು ಬೈಯ್ಯಲು ತಮ್ಮ ಮಗನನ್ನು ಸಿದ್ದರಾಮಯ್ಯ ಇಟ್ಟುಕೊಂಡಿದ್ದಾರೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಮೈಸೂರು ಮಿತ್ರ ಶನಿವಾರ 9 ಆಗಸ್ಟ್ 2025

ಆರೈಕೆ ಮಾಡಲು ಶಕ್ತಿ ಇಲ್ಲ ಎಂಬ ಕಾರಣಕ್ಕೆ

ಹುಟ್ಟಿದ ಒಂದೇ ದಿನಕ್ಕೆ ಮಗುವನ್ನು ಸಾಂತ್ವಾನ ಕೇಂದ್ರಕ್ಕೆ ನೀಡಿದ ದಂಪತಿ

ಮಳವಳ್ಳಿ, ಆ.8– ಆರೈಕೆ ಮಾಡಲು ಶಕ್ತಿ ಇಲ್ಲ ಎಂಬ ಕಾರಣ ನೀಡಿ ದಂಪತಿ ಹುಟ್ಟಿದ ಒಂದೇ ದಿನಕ್ಕೆ ಮಗುವನ್ನು ಸಾಂತ್ವಾನ ಕೇಂದ್ರಕ್ಕೆ ನೀಡಿರುವ ಅಪರೂಪದ ಘಟನೆ ಪಟ್ಟಣದಲ್ಲಿ ನಡೆದಿದೆ.



ಮಹಿಳೆಗೆ ಹೆರಿಗೆ ನೋವು ಕಾಣಿಸಿಕೊಂಡ ಕೂಡಲೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬುಧವಾರ ಬೆಳಗ್ಗೆ ಮಹಿಳೆ ಗಂಡು ಮಗುವಿಗೆ ಜನ್ಮ ನೀಡಿದ್ದು, ಮಗುವಿನ ತಂದೆ– ತಾಯಿ ನಮಗೆ ಮಗುವಿನ ಆರೈಕೆ ಮಾಡಲು ಶಕ್ತಿ ಇಲ್ಲ. ನಮಗೆ ಈಗಾಗಲೇ ನಾಲ್ಕೂವರೆ ವರ್ಷದ ಗಂಡು ಮಗುವಿದೆ. ಹೀಗಾಗಿ ಈ ಮಗುವನ್ನು ಬೇರೆಯವರಿಗೆ ದತ್ತು ನೀಡುವುದಾಗಿ ವೈದ್ಯರಿಗೆ ತಿಳಿಸಿದ್ದರು. ಕೂಡಲೇ ಎಚ್ಚೆತ್ತ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಎಂ.ಡಿ.ಸಂಜಯ್ ಅವರು ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಕ್ಕಳ ಜಿಲ್ಲಾ ರಕ್ಷಣಾ ಘಟದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕು ವೈದ್ಯಾಧಿಕಾರಿ ಡಾ.ಪಿ.ವೀರಭದ್ರಪ್ಪ, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಎಂ.ಡಿ.ಸಂಜಯ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸಿ.ಬಿ.ರಾಜು, ಆಪ್ತ ಸಮಾಲೋಚನಾಧಿಕಾರಿ ವಿನುತಾ ಕುಮಾರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಂಜಮಣಿ ದಂಪತಿಯೊಂದಿಗೆ ಮಾತುಕತೆ ನಡೆಸಿ ಮಗುವಿನ ಆರೈಕೆಗೆ ಬೇಕಾದ ಎಲ್ಲಾ ನೆರವು ನೀಡುವುದಾಗಿ ಮನವೊಲಿಸಿದರು. ಆದರೆ ಮಗು ಸಾಕಲು ನಮಗೆ ಸಾಧ್ಯವಿಲ್ಲ ಎಂದು ಹಠ ಹಿಡಿದ ದಂಪತಿ ಕೊನೆಗೂ ಹುಟ್ಟಿದ ಒಂದೇ ದಿನಕ್ಕೆ ಮಗುವನ್ನು ಸಾಂತ್ವಾನ ಕೇಂದ್ರಕ್ಕೆ ನೀಡಿದ್ದಾರೆ. ಇಲಾಖೆ ನಿಯಮಾನುಸಾರವಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಗುವನ್ನು ತಮ್ಮ ವಶಕ್ಕೆ ಪಡೆದು ಮಂಡ್ಯದ ಸಾಂತ್ವಾನ ಕೇಂದ್ರಕ್ಕೆ ರವಾನಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಂಜಮಣಿ, ದಂಪತಿಗೆ ಮಗುವಿನ ಆರೈಕೆಗೆ ಬೇಕಾದ ನೆರವು ನೀಡುವ ಭರವಸೆಗೆ ಅವರು ಒಪ್ಪಲಿಲ್ಲ. ಹೀಗಾಗಿ ಮಗುವಿನ ಸಂಪೂರ್ಣ ಜವಾಬ್ದಾರಿ ನಮ್ಮ ಇಲಾಖೆ ಮೇಲಿದೆ. ಮಗುವನ್ನು ಸಾಂತ್ವಾನ ಕೇಂದ್ರಕ್ಕೆ ರವಾನಿಸಲಾಗಿದೆ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸಿ.ಬಿ.ರಾಜು ಮಾತನಾಡಿ, ಇದೊಂದು ಅಪರೂಪದ ಪ್ರಕರಣ. ನಮ್ಮ ಸಾಂತ್ವಾನ ಕೇಂದ್ರದಲ್ಲಿ ಮಗುವಿನ ಆರೈಕೆ ನಡೆಸಲಾಗುತ್ತದೆ. 60 ದಿನದೊಳಗೆ ಪೋಷಕರು ಬಯಸಿದರೆ ಮಗುವನ್ನು ವಾಪಸ್ ನೀಡಲಾಗುವುದು. ಇಲ್ಲದಿದ್ದರೆ ಮಗುವನ್ನು ಕಾನೂನಿನ ಪ್ರಕಾರ ದತ್ತು ಸ್ವೀಕರಿಸಿ ಆರೈಕೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತ

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪ

ಮಳವಳ್ಳಿ, ಆ.8– ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಆಡಳಿತದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಪಟ್ಟಣದ ಭಗವಾನ್ ಬುದ್ಧ ಶಿಕ್ಷಣ ಸಂಸ್ಥೆ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಬುದ್ಧ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾತನಾಡಿ, ಸರ್ಕಾರದ ಆಡಳಿತದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಮತ್ತೊಂದೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದರು.

ಬೆಂಗಳೂರು ಸುತ್ತಮುತ್ತ ಆಸ್ತಿ ಮೌಲ್ಯದ ಆಧಾರದ ಮೇಲೆ ಲಂಚ ವಸೂಲಿ ನಡೆಯುತ್ತಿದೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪೈಪೋಟಿಯಂತೆ ಜನರಿಂದ ಸುಲಿಗೆ ಮಾಡುತ್ತಿದ್ದಾರೆ. ಮತ್ತೊಂದೆಡೆ



ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿ, ರಾಜು ಕಾಗೆ ಅವರು ಭ್ರಷ್ಟಾಚಾರದಲ್ಲಿ ದೇಶದಲ್ಲೇ ಕರ್ನಾಟಕ ನಂಬರ್‌ಒನ್ ಸ್ಥಾನದಲ್ಲಿದೆ ಎಂದು ಆರೋಪಿಸುತ್ತಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಆಡಳಿತದ ವೈಫಲ್ಯ ಮುಚ್ಚಿಕೊಳ್ಳಲು ಜಾತಿ ಸಮೀಕ್ಷೆ, ಒಳ ಮೀಸಲಾತಿ ವಿಚಾರವನ್ನು ಮುನ್ನೆಲೆಗೆ ತಂದು ಜನರ ಗಮನ ಬೇರೆಡೆಗೆ ಸೆಳೆಯುವ ತಂತ್ರ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪ.ಜಾತಿ, ವರ್ಗದವರ ಅಭಿವೃದ್ಧಿಗೆ 42 ಸಾವಿರ ಕೋಟಿ ರೂ. ನೀಡಿದ್ದೇವೆ ಎನ್ನುವ ಸಿಎಂ ಮೂರು ಕಾಸು ಸಹ ನೀಡಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ 147 ಕೋಟಿ ರೂ. ಲೂಟಿ ಮಾಡಿದ ಈ ಸರ್ಕಾರದ ನಡೆ ನಾಚಿಕೆಗೇಡಿನ ಸಂಗತಿ. ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯ ಸರ್ಕಾರ ಒಂದೇ ಸಂಪನ್ಮೂಲದ ಖಜಾನೆಯಾಗಿದೆ. ಕಪ್ಪ ಕಾಣಿಕೆ ಅರ್ಪಿಸಿ ಹೈಕಮಾಂಡ್‌ನ ಒಲವು ಗಿಟ್ಟಿಸಿಕೊಳ್ಳಲು ಸಿಎಂ, ಡಿಸಿಎಂ ಪೈಪೋಟಿಗೆ ಬಿದ್ದಂತೆ ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ತಾವೇ ಮತಗಳ್ಳತನ ನಡೆಸುತ್ತಿದ್ದ ಆರೋಪಕ್ಕೆ ಗುರಿಯಾಗಿ ಕಾನೂನು ಕ್ರಮದಿಂದ ಪಾರಾಗಲು ದೇಶವನ್ನು ತುರ್ತು ಪರಿಸ್ಥಿತಿಗೆ ತಳ್ಳಿದ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ನಾಯಕರೇ ಈಗ ನಮ್ಮ ಮೇಲೆ ಮತಗಳ್ಳತನ ಆರೋಪ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ವ್ಯಂಗ್ಯವಾಡಿದರು.

ಈ ವೇಳೆ ಬಿಜೆಪಿ ರಾಜ್ಯ ಸಮಿತಿ ಸದಸ್ಯ ರುದ್ರಯ್ಯ, ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ಯಮದೂರು ಸಿದ್ದರಾಜು, ಮುಖಂಡರಾದ ಅಪ್ಪಾಜಿಗೌಡ, ಹೆಚ್.ಬಸವರಾಜು, ಚಿಕ್ಕಣ್ಣ, ದೇವರಾಜು ಇದ್ದರು.

ಮಹಾಲಕ್ಷ್ಮಿಗೆ ವಿಶೇಷ ಪೂಜೆ



ವರ ಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮಂಡ್ಯದ ಲಕ್ಷ್ಮಿ ಜನಾರ್ಧನ ದೇಗುಲದ ಬಳಿಯ ಮಹಾಲಕ್ಷ್ಮಿ ದೇಗುಲದಲ್ಲಿ ದೇವಿಗೆ ವಿಶೇಷ ಅಲಂಕಾರ ಮಾಡಿ, ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ನೂರಾರು ಭಕ್ತರು ದೇವಿ ದರ್ಶನ ಪಡೆದರು.

ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಪಂ ವತಿಯಿಂದ ಆ.12 ರಿಂದ 21 ರವರೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಆ.12 ರಂದು ಕೆ.ಆರ್.ಪೇಟೆ ತಾಲೂಕು ಆಸ್ಪತ್ರೆ, ಆ.13ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆ, ಆ.14 ರಂದು ಮದ್ದೂರು ತಾಲೂಕು ಆಸ್ಪತ್ರೆ, ಆ.19ರಂದು ಶ್ರೀರಂಗಪಟ್ಟಣ ತಾಲೂಕು ಆಸ್ಪತ್ರೆ ಆ.20 ನಾಗಮಂಗಲ ಸಾರ್ವಜನಿಕ ಆಸ್ಪತ್ರೆ ಆ.21ರಂದು ಮದ್ದೂರು ತಾಲೂಕು ಆಸ್ಪತ್ರೆ ಹಾಗೂ ಪ್ರತಿ ಮಂಗಳವಾರ ಮಳವಳ್ಳಿ ಸರ್ಕಾರಿ ಆಸ್ಪತ್ರೆಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ.

ಬನ್ನಾರಮ್ಮ ದೇವಿ ಮೆರವಣಿಗೆ



ಪಾಂಡವಪುರದಲ್ಲಿ ವರ ಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ, ಬನ್ನಾರಮ್ಮ ದೇವಿಯ 12ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಿ ಮೆರವಣಿಗೆ ನಡೆಯಿತು. ಈ ವೇಳೆ ಸಮಿತಿ ಅಧ್ಯಕ್ಷ ಅನಿಲ್, ಪ್ರಧಾನ ಕಾರ್ಯದರ್ಶಿ ಆಲೆಮನೆ ಬಲರಾಮು, ಸಹ ಕಾರ್ಯದರ್ಶಿ ಎಸ್.ರಾಜಕುಮಾರ್ ಸೇರಿದಂತೆ ಹಲವರಿದ್ದರು.

ರಸಗೊಬ್ಬರ ಮಾರಾಟ ಮಳಿಗೆಗಳಿಗೆ ತಹಸೀಲ್ದಾರ್ ಭೇಟಿ, ಪರಿಶೀಲನೆ



ಮದ್ದೂರು, ಆ.8– ಪಟ್ಟಣದ ವಿವಿಧ ರಸಗೊಬ್ಬರಗಳ ಮಾರಾಟ ಮಳಿಗೆಗಳಿಗೆ ತಹಸೀಲ್ದಾರ್ ಪರಶುರಾಮ್ ಸತ್ತೀಗೇರಿ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಟ್ಟಣದ ವ್ಯವಸಾಯೋತ್ಪನ ಮಾರಾಟ ಸಹಕಾರ ಸಂಘದ ರಸಗೊಬ್ಬರ ಮಾರಾಟ ಮಳಿಗೆ, ಕೋಟಿಲಿಂಗೇಶ್ವರ ಟ್ರೇಡರ್ಸ್ ಹಾಗೂ ಗ್ರೋಮರ್ ಗೊಬ್ಬರ ಮಾರಾಟ ಮಳಿಗೆಗಳಿಗೆ ಸಹಾಯಕ ಕೃಷಿ ನಿರ್ದೇಶಕಿ ಹೆಚ್.ಜಿ.ಪ್ರತಿಭಾ ಹಾಗೂ ಕಂದಾಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ರಸಗೊಬ್ಬರ ದಾಸ್ತಾನು ಪ್ರಮಾಣ, ದರಪಟ್ಟಿ, ಮಾರಾಟ ರಶೀದಿ ಹಾಗೂ ದಾಸ್ತಾನು ಮಳಿಗೆ ಮುಂಭಾಗದ ಫಲಕದಲ್ಲಿ ಅಳವಡಿಸದ ಬಗ್ಗೆ ಮಾರಾಟಗಾರರ ವಿರುದ್ಧ ತರಾಟೆಗೆ ತೆಗೆದುಕೊಂಡರು.

ಟಿಎಪಿಸಿಎಂಎಸ್ ಚಿಲ್ಲರೆ ಮಾರಾಟ ಮಳಿಗೆಯಲ್ಲಿ ರಸಗೊಬ್ಬರದ ಮಾರಾಟ ದರ, ಪ್ರಮಾಣ ಪ್ರದರ್ಶನ ಮಾಡದಿರುವ ಬಗ್ಗೆ ಸಂಘದ ಸಿಇಓ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಸಹಾಯಕ ಕೃಷಿ ನಿರ್ದೇಶಕಿ ಪ್ರತಿಭಾ ಅವರಿಗೆ ಸ್ಥಳದಲ್ಲೇ ಸೂಚಿಸಿದರು.

ಕೋಟಿಲಿಂಗೇಶ್ವರ ಟ್ರೇಡರ್ಸ್‌ನಲ್ಲೂ ರಸಗೊಬ್ಬರ ದರ ಪಟ್ಟಿ, ವಿತರಣಾ ಪ್ರಮಾಣ ಹಾಗೂ ನಿಖರವಾದ ಲೆಕ್ಕ ಪತ್ರ ಇಲ್ಲದ ಹಿನ್ನಲೆಯಲ್ಲಿ ಟ್ರೇಡರ್ಸ್‌ನ ಲೈಸನ್ಸ್ ರದ್ದಪಡಿಸುವಂತೆ ತಹಸೀಲ್ದಾರ್ ಸೂಚಿಸಿದರು.

ನಂತರ ಗ್ರೋಮರ್ ಮಾರಾಟ ಮಳಿಗೆಗೆ ಭೇಟಿ ನೀಡಿದ ಅವರು ರಸಗೊಬ್ಬರ ಖರೀದಿಗೆ ಬಂದಿದ್ದ ರೈತರಿಗೆ ನ್ಯಾನೋ ಯೂರಿಯಾ ಬಳಸುವುದು ಹಾಗೂ ಬೆಳೆಗಳಿಗೆ ಕಾಂಪ್ಲೆಕ್ಸ್ ಯೂರಿಯಾ ಬಳಸುವಂತೆ ತಹಸೀಲ್ದಾರ್ ಮನವಿ ಮಾಡಿದರು. ಸಹಾಯಕ ಕೃಷಿ ಅಧಿಕಾರಿ ರೂಪಶ್ರೀ, ರಾಜಸ್ವ ನಿರೀಕ್ಷಕ ಮೋಹನ್, ಗ್ರಾಮ ಆಡಳಿತಾಧಿಕಾರಿ ಹರೀಶ್ ಷಣ್ಮುಖ ಇದ್ದರು.

ರಸಗೊಬ್ಬರದ ಕೃತಕ ಅಭಾವ ಸೃಷ್ಟಿಸಿದರೆ ಕ್ರಮ

ನಾಗಮಂಗಲ: ತಾಲೂಕಿನಲ್ಲಿ ಯೂರಿಯಾ ಸೇರಿದಂತೆ ಯಾವುದೇ ರಸಗೊಬ್ಬರದ ಕೊರತೆ ಇಲ್ಲ. ಗೊಬ್ಬರದ ಕೃತಕ ಅಭಾವ ಸೃಷ್ಟಿಸಿದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಹಸೀಲ್ದಾರ್ ಜಿ.ಆದರ್ಶ ಮಾರಾಟಗಾರರಿಗೆ ಎಚ್ಚರಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಕೃಷಿ ಇಲಾಖೆಯಿಂದ ರಸಗೊಬ್ಬರಗಳ ಸಮರ್ಪಕ ನಿರ್ವಹಣೆ ಹಾಗೂ ಯೂರಿಯಾ ರಸಗೊಬ್ಬರವನ್ನು ಕೃಷಿಯೇತರ ಚಟುವಟಿಕೆಗಳ ಬಳಕೆ ತಡೆಗಟ್ಟುವ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಾದ್ಯಂತ ಉತ್ತಮ ಮಳೆಯಾಗುತ್ತಿದೆ. ರೈತರು ಕೃಷಿ ಚಟುವಟಿಕೆ ಆರಂಭಿಸಿದ್ದಾರೆ. ಹಾಗಾಗಿ ಮಾರಾಟಗಾರರು ರೈತರಿಗೆ ತೊಂದರೆಯಾಗದಂತೆ ರಸಗೊಬ್ಬರಗಳ ಸಮರ್ಪಕ ನಿರ್ವಹಣೆ ಮಾಡಬೇಕೆಂದರು.

ಕೃಷಿ ಭೂಮಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಯೂರಿಯಾ ಮತ್ತು ರಾಸಾಯನಿಕ ಬಳಕೆ ಮಾಡುವುದರಿಂದ ಆಗಬಹುದಾದ ದುಷ್ಪರಿಣಾಮ ಕುರಿತು ರೈತರಿಗೆ ಅರಿವು ಮೂಡಿಸಬೇಕು. ಹಸಿರೆಲೆ, ಕೊಟ್ಟಿಗೆ ಗೊಬ್ಬರ ಮತ್ತು ಸಾವಯವ ಗೊಬ್ಬರ ಬಳಸುವುದರಿಂದ ಭೂಮಿ ಫಲವತ್ತತೆ ಹೆಚ್ಚಿಸಬಹುದು. ರಸಗೊಬ್ಬರ ಮಾರಾಟಗಾರರು ಈ ಬಗ್ಗೆಯೂ ರೈತರಿಗೆ ಮನವೊಲಿಸುವ ಕೆಲಸ ಮಾಡಬೇಕೆಂದು ಸೂಚಿಸಿದರು.

ಜಂಟಿ ಕೃಷಿ ನಿರ್ದೇಶಕ ಅಶೋಕ್ ಮಾತನಾಡಿ, ಜಿಲ್ಲೆಯಲ್ಲಿ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದಾಸ್ತಾನಿದೆ. ರೈತರು ತಾವು ಬೆಳೆಯುವ ಯಾವುದೇ ಬೆಳೆಗೆ ಅಗತ್ಯಕ್ಕಿಂತ ಹೆಚ್ಚಾಗಿ ಯೂರಿಯಾ ಬಳಸುತ್ತಿದ್ದಾರೆ. ಯೂರಿಯಾ ಗೊಬ್ಬರಕ್ಕೆ ಪರ್ಯಾಯವಾಗಿ ಪೊಟ್ಯಾಷ್ ಯುಕ್ತ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಬಳಸಿದರೆ ಅಧಿಕ ಇಳುವರಿ ಜೊತೆಗೆ ಹೆಚ್ಚು ಲಾಭ ಸಿಗಲಿದೆ ಎಂದರು.

ಸಹಾಯಕ ಕೃಷಿ ನಿರ್ದೇಶಕ ಆರ್.ಹರೀಶ್ ಮಾತನಾಡಿ, ಎಲ್ಲಾ ಪಿಓಎಸ್ ಯಂತ್ರದಲ್ಲಿರುವ ದಾಸ್ತಾನಿಗೂ ಮತ್ತು ಭೌತಿಕವಾಗಿರುವ ದಾಸ್ತಾನಿಗೂ ತಾಳೆಯಾಗಬೇಕು. ಸಣ್ಣಪುಟ್ಟ ವ್ಯತ್ಯಾಸವಿದ್ದರೂ ಕೂಡ ಅಂತಹ ಮಾರಾಟಗಾರರಿಗೆ ಯಾವುದೇ ರಸಗೊಬ್ಬರಗಳನ್ನು ಪೂರೈಕೆ ಮಾಡುವುದಿಲ್ಲ ಮತ್ತು ಸದರಿ ಮಾರಾಟಗಾರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಹಾಗಾಗಿ ರಸಗೊಬ್ಬರ ಮಾರಾಟದಲ್ಲಿ ಯಾವುದೇ ಲೋಪದೋಷವಾಗದಂತೆ ಎಚ್ಚರಿಕೆ ವಹಿಸಿ ಎಂದರು.

ಪಾಂಡವಪುರ ಉಪವಿಭಾಗದ ಕೃಷಿ ನಿರ್ದೇಶಕ ಭಾನುಪ್ರಕಾಶ್ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಉಪಯುಕ್ತತೆಗಳ ಕುರಿತು ಮಾಹಿತಿ ನೀಡಿದರು. ರಸಗೊಬ್ಬರ ಮತ್ತು ಕೀಟನಾಶಕಗಳ ಕಾಯ್ದೆ ಕಾನೂನುಗಳ ಕುರಿತು ಜಾಗೃತ ದಳದ ಸಹಾಯಕ ಕೃಷಿ ನಿರ್ದೇಶಕ ಚನ್ನಕೇಶವಮೂರ್ತಿ ವಿವರಿಸಿದರು.

ಒಂದನೇ ಪುಟದಿಂದ

ಖಾಸಗಿ ಬಡಾವಣೆ ಅಭಿವೃದ್ಧಿಗೆ ಅನುಮೋದನೆ

ಹಿಂದೆ ಮಂಜೂರಾಗಿದ್ದ ಮನೆಗಳ ಹಲವು ಮಾಲೀಕರು ಬಾಕಿ ಹಣವನ್ನು ಕಟ್ಟದ ಕಾರಣ ಅವರಿಗೆ ಈವರೆವಿಗೂ ಕ್ರಯಪತ್ರ ನೀಡಿಲ್ಲ. ಹೀಗಾಗಿ ಅಂತಹವರಿಗೆ ಬಾಕಿ ಹಣ ಪಾವತಿಸಿ ಕ್ರಯಪತ್ರ ಪಡೆಯಲು ಗಡುವು ನಿಗದಿಗೊಳಿಸಲು ಸಭೆ ನಿರ್ಣಯಿಸಿತು.

ಸಿಎ ನಿವೇಶನ ಮಂಜೂರು ನಿರ್ಣಯ: ಪ್ರಾಧಿಕಾರದ ವ್ಯಾಪ್ತಿಯಲ್ಲಿ ಖಾಲಿ ಇರುವ ನಾಗರಿಕ ಸೌಕರ್ಯ (ಸಿಎ) ನಿವೇಶನಗಳನ್ನು ವಿವಿಧ ಸರ್ಕಾರಿ ಹಾಗೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳಿಗೆ ಮಂಜೂರು ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಹಿಂದಿನ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳ ಕುರಿತು ಸಮರ್ಪಕವಾಗಿ ಗಣಕೀಕೃತಗೊಳಿಸಲು ಸಭೆ ನಿರ್ಣಯಿಸಿದೆ. 2025–26ನೇ ಸಾಲಿನಲ್ಲಿ ತಾಂತ್ರಿಕ ಶಾಖೆಗೆ ಸಂಬಂಧಿಸಿದ 24426.88 ಲಕ್ಷ ರೂ.ಗಳ ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಭೆಯಲ್ಲಿ ಮಂಡಿಸಿದ್ದು, ಅದಕ್ಕೆ ಅನುಮೋದನೆ ನೀಡಲಾಯಿತು.

ಮಹಾ ಯೋಜನೆ ಪರಿಷ್ಕರಣೆ: ಮೈಸೂರು–ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶದ ವಿಸ್ತರಿತ ಪ್ರದೇಶಕ್ಕೆ ಗಡಿ ಎಲ್ಲೆಯ ವಿವರಗಳನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವ ಬಗ್ಗೆ ಹಾಗೂ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ್ ಯೋಜನೆಯಡಿ ಜಿಐಎಸ್ ಅಡಿಯಲ್ಲಿ ಮಹಾ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆಯೂ ನಿರ್ಣಯ ಕೈಗೊಳ್ಳಲಾಗಿದೆ. ಪ್ರಾಧಿಕಾರದ ಅಭಿಲೇಖಾಲಯದಲ್ಲಿರುವ ಎಲ್ಲಾ ದಾಖಲೆಗಳನ್ನು ಗಣಕೀಕೃತಗೊಳಿಸಲು ಸಭೆ ಸಮ್ಮತಿ ಸೂಚಿಸಿತು. ಬಹು ಮುಖ್ಯವಾಗಿ ಪ್ರಾಧಿಕಾರದ ಆಸ್ತಿಯನ್ನು ಸಂರಕ್ಷಿಸುವ ಸಂಬಂಧ ಮೊಬೈಲ್ ಆ್ಯಪ್ ಸಿದ್ಧಪಡಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

ಸಾಧಕರಿಗೆ ನಿವೇಶನ; ಉಪ ಸಮಿತಿ ರಚನೆ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಅನೇಕ ಸಾಧಕರು ನಿವೇಶನಕ್ಕಾಗಿ ಹಿಂದಿನ ಮುಡಾಗೆ ಅರ್ಜಿ ಸಲ್ಲಿಸಿ ಹಲವು ವರ್ಷಗಳಿಂದ ಕಾಯುತ್ತಿದ್ದರು. ಮುಡಾದಿಂದ ನಿವೇಶನಗಳ ಹಂಚಿಕೆಯಾದ ಸಂದರ್ಭದಲ್ಲೂ ಅರ್ಜಿ ಸಲ್ಲಿಸಿರುವ ಬಹುತೇಕ ಸಾಧಕರಿಗೆ ನಿವೇಶನ ಭಾಗ್ಯ ದೊರೆತಿರಲಿಲ್ಲ. ಈ ಸಂಬಂಧ ಸಾಧಕರು ತಮ್ಮ ಅಳಲು ತೋಡಿಕೊಂಡಿದ್ದಲ್ಲದೇ, ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದರು. ಈ ಹಿನ್ನೆಲೆಯಲ್ಲಿ 2023ರ ಫೆ.8ರಂದು ಪ್ರವರ್ಗ–ಬಿ, ಸಿ, ಇ, ಎಫ್ ಅಡಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲು ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ಆ ಸಂದರ್ಭದಲ್ಲಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಸಂಬಂಧ ಉಪ ಸಮಿತಿ ರಚಿಸಲು ಇಂದು ನಡೆದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಇಂದಿನ ಸಭೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್, ನಗರ ಪಾಲಿಕೆ ಆಯುಕ್ತ ಶೇಖ್ ಆಸಿಫ್ ತನ್ವೀರ್, ನಗರಾಭಿವೃದ್ಧಿ ಇಲಾಖೆಯ ಅಭಿವೃದ್ಧಿ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ ಕೃಷ್ಣಮೂರ್ತಿ, ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಮುಖ್ಯ ಅಭಿಯಂತರ ವಿ.ವಿ.ಚಂದ್ರಪ್ಪ, ಚೆಸ್ಕಾಂ ಮುಖ್ಯ ಅಭಿಯಂತರ ಮೃತ್ಯುಂಜಯ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಯೋಜನಾ ಸದಸ್ಯ ಶಿವರಾಮಯ್ಯ, ಅಭಿಯಂತರ ಸದಸ್ಯ ಮುರಳೀಧರ್, ಕಾರ್ಯದರ್ಶಿ ಜಾನ್ಸನ್ ಹಾಜರಿದ್ದರು.

ಹುತಾತ್ಮ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಕುಟುಂಬಕ್ಕೆ ಉಚಿತ ನಿವೇಶನ

ಜಮ್ಮು–ಕಾಶ್ಮೀರದಲ್ಲಿ ಉಗ್ರವಾದಿಗಳ ದಾಳಿಗೆ 2023ರಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರ ಪತ್ನಿ ಅದಿತಿ ಜಿ.ಮುದ್ದೆಬಿಹಾಳ್ ಅವರಿಗೆ 40X60 ಅಡಿ ವಿಸ್ತೀರ್ಣದ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಲು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆ ನಿರ್ಣಯ ಕೈಗೊಂಡಿದೆ. ಕ್ಯಾಪ್ಟನ್ ಪ್ರಾಂಜಲ್ ಅವರ ಪತ್ನಿ ಅದಿತಿ ಜಿ.ಮುದ್ದೆಬಿಹಾಳ್ ಅವರು ನಿವೇಶನಕ್ಕಾಗಿ ಹಿಂದಿನ ಮುಡಾಗೆ ಅರ್ಜಿ ಸಲ್ಲಿಸಿ ಹಲವು ಬಾರಿ ಬೆಂಗಳೂರಿನಿಂದ ಮೈಸೂರಿಗೆ ಅಲೆದಾಡಿದರೂ ಅವರಿಗೆ ನಿವೇಶನ ಮಂಜೂರಾಗಿರಲಿಲ್ಲ. ಈ ಸಂಬಂಧ ಅವರು ಮಾಧ್ಯಮಗಳ ಮುಂದೆ ತಮ್ಮ ಅಳಲನ್ನು ತೋಡಿಕೊಂಡಿದ್ದರು. ಈ ಮಧ್ಯೆ ಕ್ಯಾಪ್ಟನ್ ವಿ.ಪ್ರಾಂಜಲ್ ಅವರ ಅವಲಂಬಿತರಿಗೆ ಉಚಿತವಾಗಿ ನಿವೇಶನ ನೀಡಬೇಕೆಂದು ಬೆಂಗಳೂರಿನ ಸೈನಿಕ ಕಲ್ಯಾಣ ಸಮಿತಿ ಮತ್ತು ಪುನರ್ ವಸತಿ ಇಲಾಖೆ ಪ್ರಸ್ತಾವನೆ ಸಲ್ಲಿಸಿತ್ತು. ಈ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿ, ಪ್ರಾಂಜಲ್ ಅವರ ಪತ್ನಿಗೆ ಉಚಿತ ನಿವೇಶನ ನೀಡಲು ನಿರ್ಣಯ ಕೈಗೊಳ್ಳಲಾಗಿದೆ. ನಿಯಮದಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕೈಗೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ರವಾನಿಸಿ ಅನುಮೋದನೆ ಪಡೆಯಬೇಕಾಗಿದೆ.

ಮತ ಕದ್ದು ಮೋದಿ ಪ್ರಧಾನಿಯಾಗಿದ್ದಾರೆ!

ನಂತರ ನಮಗೆ ಮತಗಳವು ಅನುಮಾನ ಕಾಡಿತು. ನಂತರ ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರ ಆಯ್ಕೆ ಮಾಡಿ ಪರಿಶೀಲಿಸಿದಾಗ ಮತಗಳ್ಳತನ ಸಾಬೀತಾಯಿತು. ಇದು ಕೇವಲ ಒಂದು ಲೋಕಸಭಾ ಕ್ಷೇತ್ರವಲ್ಲ, ರಾಷ್ಟ್ರದ ವಿವಿಧೆಡೆ ಚುನಾವಣಾ ಆಯೋಗ ಬಿಜೆಪಿ ಜೊತೆ ಕೈಜೋಡಿಸಿ ಮತಗಳ್ಳತನ ಮಾಡಿ ಕೇಂದ್ರದಲ್ಲಿ ಅಧಿಕಾರದಲ್ಲಿದೆ ಎಂದರು.

ಮತಗಳ್ಳತನ ಆರೋಪ ಸಂಬಂಧ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಸಿಸಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ಸಿದ್ಧಾಂತ ಸಂವಿಧಾನ ವಿರೋಧಿಯಾಗಿದೆ ಎಂದರು. ಸಂವಿಧಾನ ಪುಸ್ತಕ ಕೈಯಲ್ಲಿ ಹಿಡಿದು ಮಾತನಾಡಿದ ರಾಹುಲ್, ಭಾಷಣದ ಉದ್ದಕ್ಕೂ ಚುನಾವಣಾ ಆಯೋಗ ಮತ್ತು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡರು. ಕಳೆದ 10 ವರ್ಷಗಳ ಚುನಾವಣೆಯ ಮತದಾರರ ಪಟ್ಟಿ ಹಾಗೂ ವಿಡಿಯೋಗ್ರಾಫಿ ಬಿಡುಗಡೆ ಮಾಡುವಂತೆ ಆಯೋಗಕ್ಕೆ ರಾಹುಲ್ ಸವಾಲು ಹಾಕಿದರು. ಎಲೆಕ್ಟ್ರಾನಿಕ್ಸ್ ಮತಯಂತ್ರ ಅಂಕಿ–ಅಂಶಗಳನ್ನು ಚುನಾವಣಾ ಆಯೋಗ ಏಕೆ ನೀಡುತ್ತಿಲ್ಲ ಎಂಬುದನ್ನು ಇಡೀ ದೇಶ ಅರಿತುಕೊಳ್ಳಬೇಕು. ನಾನು ವಿರೋಧ ಪಕ್ಷದ ನಾಯಕನಾಗಿರಬಹುದು. ನನ್ನ ಈ ಹೋರಾಟದಲ್ಲಿ ನಾನು ಒಬ್ಬಂಟಿಯಲ್ಲ, ಇಂಡಿಯಾ ಒಕ್ಕೂಟದ ಎಲ್ಲಾ ಪಕ್ಷಗಳು ನನ್ನೊಂದಿಗಿವೆ. ಒಂದು ವೇಳೆ ಆಯೋಗ ನಮಗೆ ದಾಖಲೆ ನೀಡದಿದ್ದರೆ, ಒಂದು ಕ್ಷೇತ್ರವಲ್ಲ, 5, 10, 15, 25 ಕ್ಷೇತ್ರಗಳ ಮಾಹಿತಿಯನ್ನು ಬಹಿರಂಗ ಮಾಡಲಿದ್ದೇವೆ. ಇದಕ್ಕೆ ನಮ್ಮ ಬಳಿ ದಾಖಲೆ ಇವೆ ಎಂದು ಅವರು ಹೇಳಿದರು.

ಆಯೋಗ ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ, ಒಂದಲ್ಲಾ ಒಂದು ದಿನ ವಿರೋಧ ಪಕ್ಷಗಳ ಸವಾಲನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ 15 ರಿಂದ 16 ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತವಾಗಿತ್ತು, ಆದರೆ, ಕೇವಲ 9 ಕ್ಷೇತ್ರಗಳಲ್ಲಷ್ಟೇ ಗೆದ್ದೆವು. ಅಂದೇ ನಮಗೆ ಅನುಮಾನಗಳು ಕಾಡಲು ಆರಂಭಿಸಿದವು, ಬೆಂಗಳೂರು ಮಹದೇವಪುರ ಕ್ಷೇತ್ರದ ಫಲಿತಾಂಶ ಸಮೀಕ್ಷೆ ಮಾಡಿದ್ದಾಗಿ ಚುನಾವಣಾ ಆಯೋಗ ಮತ್ತು ಬಿಜೆಪಿ ಒಟ್ಟಾಗಿ ವಂಚಿಸಿವೆ.

ಆರು ಮತಗಳ ಪೈಕಿ ಒಂದು ಮತ ಕಳ್ಳತನ ಮಾಡಿ ಬಿಜೆಪಿ ಗೆದ್ದಿರುವುದನ್ನು ನಾನು ಪುರಾವೆಗಳ ಸಮೇತ ಈಗಾಗಲೇ ಬಿಡುಗಡೆ ಮಾಡಿದ್ದೇನೆ.

ಈ ಮತಗಳವು ಕರ್ನಾಟಕದಲ್ಲಿ ಮಾತ್ರವಲ್ಲ ದೇಶಾದ್ಯಂತ ನಡೆದಿದೆ. ಬಿಜೆಪಿ ಪರವಾಗಿ ಆಯೋಗ ಕೆಲಸ ಮಾಡುತ್ತಿರುವುದು ಸಾಬೀತಾಗಿದೆ ಎಂದು ದೂರಿದರು.

ಸಿದ್ದರಾಮಯ್ಯ ಆಗ್ರಹ

ದೇಶದ ಜನರ ಮುಂದೆ ಇಟ್ಟಿದ್ದಾರೆ. ಚುನಾವಣಾ ಆಯೋಗ ಸಂವಿಧಾನದಡಿ ನ್ಯಾಯಬದ್ಧವಾಗಿ ನಡೆದುಕೊಳ್ಳಬೇಕು. ಮತದಾನದ ಮೂಲಭೂತ ಹಕ್ಕು ಕಿತ್ತುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಇಂತಹ ಕೃತ್ಯಗಳಿಗೆ ದೇಶದ ಜನತೆ ಅವಕಾಶ ಕೊಡುವುದಿಲ್ಲ.

ಮನುವಾದಿಗಳು ಸಂವಿಧಾನ ವಿರೋಧಿಗಳು, ಸಂವಿಧಾನದ ಪ್ರಕ್ರಿಯೆಯನ್ನೇ ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ವಂಚನೆಯಿಂದ ಸೆಂಟ್ರಲ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋತಿದೆ ಜನಾಭಿಪ್ರಾಯ ಕಾಂಗ್ರೆಸ್ ಪರವಾಗಿಯೇ ಇತ್ತು. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ 14 ಸೀಟುಗಳಲ್ಲಿ ಗೆಲ್ಲಬೇಕಿತ್ತು, ಮತಕಳ್ಳತನದಿಂದ ಸೋತಿದ್ದೇವೆ. ಎಲೆಕ್ಟ್ರಾನಿಕ್ ಮತಯಂತ್ರ ಜಾರಿಗೆ ಬಂದ ಮೇಲೆ ದುರುಯೋಗ ಆಗುತ್ತಿರುವುದು ದಾಖಲೆ ಸಮೇತ ಸಾಬೀತಾಗಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನ ರಕ್ಷಣೆ ಚಳವಳಿಯನ್ನು ರಾಹುಲ್ ಗಾಂಧಿ ಆರಂಭಿಸಿದ್ದು ರಾಜ್ಯದ ಜನತೆ ಬೆಂಬಲಕ್ಕೆ ನಿಲ್ಲಲಿದ್ದಾರೆ ಎಂದರು.

ಖರೀದಿಸಿದ ಮತಗಳಿಂದ!

ಅವರು ಎರಡೂ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದರು. ಬಾದಾಮಿಯಲ್ಲಿ ನಾನು ಮತ್ತು ಚಿಮ್ಮನಕಟ್ಟಿ ಸೇರಿ 3 ಸಾವಿರ ಮತ ಖರೀದಿ ಮಾಡಿದ್ದರಿಂದಲೇ ಸಿದ್ದರಾಮಯ್ಯ ಅಲ್ಪ ಮತಗಳಿಂದ ಗೆದ್ದರು. ಆದರೆ ಬೆನ್ನಿಗೆ ನಿಂತ ನನ್ನನ್ನು ಮೇಲ್ಮನೆಯಲ್ಲಿ ಗೌರವದಿಂದ ಕಾಣಲಿಲ್ಲ. ಆದ್ದರಿಂದಲೇ ಇನ್ನೂ ನಾಲ್ಕು ವರ್ಷ ಅವಧಿ ಇದ್ದರೂ ರಾಜೀನಾಮೆ ಬಿಸಾಕಿ ಹೊರ ಬಂದೆ ಎಂದರು.

ದೇಶಾದ್ಯಂತ ಮತದಾನದ ಹಕ್ಕು ದುರ್ಬಳಕೆ ಆಗಿದೆ

ಅಕ್ರಮ ಬಹಿರಂಗಪಡಿಸಿ ಜನರಿಂದ ಛೀಮಾರಿ ಹಾಕಿಸುತ್ತೇವೆ. ಜನ ಬೆಂಬಲ ಇಲ್ಲದ ಪ್ರಧಾನಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸುವುದಲ್ಲದೆ ಬುದ್ಧಿ ಕಲಿಸಬೇಕಿದೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮಹದೇವಪುರ ವಿಧಾನಸಭಾ ಕ್ಷೇತ್ರದ 6.60 ಲಕ್ಷ ಮತದಾರರ ಮಾಹಿತಿಯನ್ನು ರಾಹುಲ್ ಗಾಂಧಿ ಸತತ ಆರು ತಿಂಗಳು ಪರಿಶೀಲಿಸಿ ಮತದಾನದ ಅಕ್ರಮ ಬಯಲಿಗೆಳೆದಿದ್ದಾರೆ. ಸಂವಿಧಾನ ಉಳಿಸಿ, ಮತದಾನದ ಹಕ್ಕು ಹಾಗೂ ಪ್ರಜಾಪ್ರಭುತ್ವ ರಕ್ಷಣೆ ಕಾಂಗ್ರೆಸ್ ಪ್ರಯತ್ನವಾಗಿದೆ. ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಜನ ಮತ ನೀಡದಿದ್ದರೂ ಮತಗಳ್ಳತನದ ಮೂಲಕ ಚುನಾವಣೆ ಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಮತಗಳ್ಳತನಕ್ಕೆ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದಲ್ಲಿ ಮುಂದುವರಿಯಲು ನೈತಿಕ ಹಕ್ಕಿಲ್ಲ. ಎಲ್ಲಾ ರಾಜ್ಯಗಳಲ್ಲಿ ಇಂತಹ ಚುನಾವಣಾ ಅಕ್ರಮ ಹುಡುಕಿ ತೆಗೆಯುತ್ತಿದ್ದೇವೆ ಎಂದರು.

2019ರಲ್ಲಿ ಮೊದಲ ಬಾರಿಗೆ ನಾನು ಚುನಾವಣೆ ಸೋತಾಗಲೇ ಹೇಳಿದ್ದೆ. ಆಗಲೂ ಇದೇ ರೀತಿ ಅಕ್ರಮ ಮಾಡಿದ್ದರು. ಆಗ ನಮಗೆ ಇದರ ಅರಿವಾಗಿರಲಿಲ್ಲ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನಕಲಿ ಮತದಾನ ಮಾಡಿ ಟಾರ್ಗೆಟ್ ಮಾಡಿದ್ದರು, ಈಗ ಎಲ್ಲವೂ ಬಯಲಾಗಿದೆ. ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಬಹಳ ಸೂಕ್ಷ್ಮವಾಗಿ ಎಲ್ಲಾ ಅಕ್ರಮವನ್ನು ಹೊರಗೆ ತಂದಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಪಕ್ಷದ ನಾಯಕರು ಮತದಾನದ ಬಗ್ಗೆ ಗಮನಹರಿಸಬೇಕು, ಇದು ನಿಮ್ಮ ಜವಾಬ್ದಾರಿ ಎಂದರು.

ವಿರೋಧ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ಇಡಿ, ಸಿಬಿಐ, ಐಟಿ ಮೂಲಕ ಬೆದರಿಸಿ ಕೇಂದ್ರದಲ್ಲಿ ಸರ್ಕಾರ ರಚಿಸಿದ್ದಾರೆ. ಅನೇಕ ರಾಜ್ಯಗಳಲ್ಲಿ ಬಹುಮತ ಇಲ್ಲದಿದ್ದರೂ ಪಕ್ಷಗಳನ್ನು ಒಡೆದು, ಶಾಸಕರನ್ನು ಖರೀದಿ ಮಾಡಿ ಸರ್ಕಾರ ಮಾಡುತ್ತಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ, ಮಣಿಪುರ ಸೇರಿದಂತೆ ಎಲ್ಲ ಕಡೆ ಈ ಹಿಂದೆ ಇದೇ ನಡೆದಿದೆ. ಇವರು ಚುನಾವಣೆ ಗೆದ್ದು ಅಧಿಕಾರಕ್ಕೆ ಬರಲಿಲ್ಲ. ಈಗಲೂ ಅದೇ ಚಾಳಿ ಮುಂದುವರಿಸುತ್ತಿದ್ದಾರೆ. ಇವರಿಗೆ ಬುದ್ಧಿ ಕಲಿಸಬೇಕಿದೆ.

ದೇಶದ ಆರ್ಥಿಕತೆ ಕೆಡಿಸುತ್ತಿದ್ದು, ಜನ ನೆಮ್ಮದಿ ಕಳೆದುಕೊಳ್ಳುವಂತಾಗಿದೆ. ನೋಟು ರದ್ಧತಿ ಸೇರಿದಂತೆ ಅನೇಕ ತಪ್ಪು ಮಾಡಿ ದೇಶ ನಾಶ ಮಾಡಿದ್ದಾರೆ. ಈಗ ಮತ್ತೊಂದು ತಪ್ಪು ಮಾಡಿ ದೇಶ ಹಾಳು ಮಾಡುತ್ತಿದ್ದಾರೆ. ಎಲ್ಲರೂ ಚುನಾವಣೆ ಕಳ್ಳತನ ಕಂಡು ಹಿಡಿದು ಹೋರಾಟ ಮಾಡಬೇಕು.

ಸೋಮವಾರ ಇಂಡಿಯಾ ಮೈತ್ರಿಕೂಟದ ಎಲ್ಲ ಸಂಸದರು ಕೇಂದ್ರ ಚುನಾವಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸುವ ಮೂಲಕ ಅಕ್ರಮಕ್ಕೆ ಬೆಂಬಲ ನೀಡುತ್ತಿರುವ ಅಧಿಕಾರಿಗಳು ಮುಂದುವರಿಯಲು ಅರ್ಹರಲ್ಲ ಎಂಬ ಸಂದೇಶ ನೀಡುತ್ತೇವೆ.

ನಾವು ಒಂದಾಗಿದ್ದರೆ ಮಾತ್ರ ಮೋದಿ ಕಳ್ಳಾಟ ತಡೆಯಲು ಸಾಧ್ಯ. ಇವರನ್ನು ಅಧಿಕಾರದಿಂದ ಇಳಿಸುವುದು ಅತ್ಯಂತ ಮಹತ್ವದ ವಿಚಾರ. ಅಧಿಕಾರ ಇದೆ ಎಂದು ಶಿಕ್ಷಣ ಕ್ಷೇತ್ರದಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುತ್ತಿದ್ದಾರೆ.

ಮತ ಕಸಿದುಕೊಂಡ ಮೇಲೆ ಅಸ್ತಿತ್ವವೇ ಇರುವುದಿಲ್ಲ, ಆಗಸ್ಟ್ 9, 1942ರಲ್ಲಿ ಮಹಾತ್ಮಾ ಗಾಂಧಿ ಕ್ವಿಟ್ ಇಂಡಿಯಾ ಚಳವಳಿ ಆರಂಭಿಸಿದರು, ಅದೇ ರೀತಿ ನಮ್ಮ ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆಗೆ ನಾವು 'ಮಾಡು ಇಲ್ಲವೇ ಮಡಿ' ಎಂಬ ಧ್ಯೇಯದೊಂದಿಗೆ ಹೋರಾಟ ಮಾಡಬೇಕಿದೆ ಎಂದರು.

ರಾಹುಲ್ ಗಾಂಧಿ ಆರೋಪ: ತನಿಖೆಗೆ ಆದೇಶ

ಬೆಂಗಳೂರು, ಆ.8– ಚುನಾವಣಾ ವಂಚನೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆರೋಪಗಳ ಬಗ್ಗೆ ತನಿಖೆಗೆ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಆದೇಶಿಸಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಳಿದ್ದಾರೆ.



ಡಿ.ಕೆ. ಶಿವಕುಮಾರ್

ತಮ್ಮ ನೇತೃತ್ವದ ಕಾಂಗ್ರೆಸ್ ನಿಯೋಗ ಅನ್ಬುಕುಮಾರ್ ಅವರಿಗೆ ಜ್ಞಾಪಕ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರು (ಸಿಇಒ ಕಚೇರಿ) ತನಿಖೆಯನ್ನು ಪ್ರಾರಂಭಿಸಿದ್ದಾರೆ ಎಂದು ಹೇಳಿದರು. ಇದನ್ನು ತಿಳಿದು ನನಗೆ ಸಂತೋಷವಾಯಿತು ಎಂದಿರುವ ಶಿವಕುಮಾರ್, ದಾಖಲೆಗಳು ಮತ್ತು ಪುರಾವೆಗಳನ್ನು ಪಡೆಯಲು ಮತ್ತೆ ಸಿಇಒ ಕಚೇರಿಗೆ ಭೇಟಿ ನೀಡುವುದಾಗಿ ಹೇಳಿದರು. ಮೊದಲ ಹಂತದಲ್ಲಿ ಅಂತಹ ಘಟನೆಗಳು ನಡೆದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ವಿವರಗಳನ್ನು ಒದಗಿಸಲು ನಾವು ಅವರನ್ನು ಕೇಳಿದ್ದೇವೆ ಎಂದು ಡಿಕೆಶಿ ಹೇಳಿದರು. ಲೋಕಸಭಾ ಚುನಾವಣೆಯ ಸಮಯದಲ್ಲಿ ಮಹದೇವಪುರ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಚುನಾವಣಾ ವಂಚನೆ ನಡೆದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ ನಂತರ ಶಿವಕುಮಾರ್ ಸಿಇಒ ಅನ್ಬುಕುಮಾರ್ ಅವರಿಗೆ ಜ್ಞಾಪಕ ಪತ್ರ ಸಲ್ಲಿಸಿದರು.

ಮತ ಕಳ್ಳತನ ಆರೋಪ: ಘೋಷಣೆಗೆ ಸಹಿ ಹಾಕಿ ಇಲ್ಲವೇ ಕ್ಷಮೆಯಾಚಿಸಿ

ರಾಹುಲ್ ಗಾಂಧಿಗೆ ಚುನಾವಣಾ ಆಯೋಗ ಸವಾಲು

ನವದೆಹಲಿ, ಆ.8– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಮತಕಳ್ಳತನ ಬಗ್ಗೆ ತಾವು ನೀಡುವ ವಿವರಣೆ ಸತ್ಯವಾಗಿದೆ ಎಂದು ಹೇಳುವುದಾದರೆ ಚುನಾವಣಾ ನಿಯಮಗಳ ಅಡಿಯಲ್ಲಿ ಘೋಷಣೆಗೆ ಸಹಿ ಹಾಕಲಿ ಮತ್ತು ಮತದಾರರ ಪಟ್ಟಿಯಿಂದ ತಪ್ಪಾಗಿ ಸೇರಿಸಲಾದ ಅಥವಾ ತೆಗೆದುಹಾಕಲಾದ ಹೆಸರುಗಳನ್ನು ಸಲ್ಲಿಸಲಿ ಇಲ್ಲವೇ ಕ್ಷಮೆ ಯಾಚಿಸಲಿ ಎಂದು ಚುನಾವಣಾ ಆಯೋಗ ಸವಾಲು ಹಾಕಿದೆ.

ಕನಿಷ್ಠ ಮೂರು ರಾಜ್ಯಗಳಲ್ಲಿ ಮತ ಕಳ್ಳತನ ನಡೆದಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದು, ಈ ಬಗ್ಗೆ ಇಂದು ವಿಡಿಯೋ ಮೂಲಕ ವಿವರಣೆ ನೀಡಿದ್ದಾರೆ ಮತ್ತು ಬೆಂಗಳೂರಿನಲ್ಲಿ ಇಂದು ನಡೆದ ರ್‍ಯಾಲಿಯಲ್ಲಿ ಚುನಾವಣಾ ಆಯೋಗ ಮತ್ತು ಮೋದಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಇದೀಗ ರಾಹುಲ್ ಗಾಂಧಿಯವರು ಮಾಡುತ್ತಿರುವ ಆರೋಪಗಳು, ಕೊಡುತ್ತಿರುವ ವಿವರಣೆಗಳ ಬಗ್ಗೆ ಸಹಿ ಮಾಡದಿದ್ದರೆ ಅವರು ತಮ್ಮ ವಿಶ್ಲೇಷಣೆಯಲ್ಲಿ ನಂಬಿಕೆ ಇಟ್ಟುಕೊಂಡಿಲ್ಲ ಎಂದರ್ಥ ಮತ್ತು ಇದರಿಂದ ಅವರು ಮಾಡುತ್ತಿರುವುದು ಅಸಂಬದ್ಧ ಆರೋಪ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಒಂದು ವೇಳೆ ವಿಫಲವಾದರೆ ರಾಷ್ಟ್ರದ ಮುಂದೆ ಕ್ಷಮೆಯಾಚಿಸಬೇಕಾಗುತ್ತದೆ ಎಂದು ಚುನಾವಣಾ ಆಯೋಗ ಹೇಳಿದೆ.

ಮೂರು ರಾಜ್ಯಗಳ ಚುನಾವಣಾ ಆಯೋಗಗಳು: ನಿನ್ನೆ ರಾಹುಲ್ ಗಾಂಧಿಯವರು ಮೂರು ರಾಜ್ಯಗಳಲ್ಲಿ ಮತದಾರರ ಪಟ್ಟಿಯಿಂದ ತಪ್ಪಾಗಿ ಸೇರಿಸಲಾಗಿದೆ ಅಥವಾ ಹೊರಗಿಡಲಾಗಿದೆ ಎಂದು ಹೇಳಲಾದ ಮತದಾರರ ಹೆಸರುಗಳನ್ನು ಹಂಚಿಕೊಳ್ಳಲು ಮತ್ತು ಈ ವಿಷಯದಲ್ಲಿ ಅಗತ್ಯ ಕ್ರಮಗಳನ್ನು ಪ್ರಾರಂಭಿಸಲು ಚುನಾವಣಾ ಅಧಿಕಾರಿಗಳಿಗೆ ಸಹಿ ಮಾಡಿದ ಘೋಷಣೆಯೊಂದಿಗೆ ಹಂಚಿಕೊಳ್ಳಲು ಚುನಾವಣಾ ಅಧಿಕಾರಿಗಳು ಕೇಳಿಕೊಂಡಿದ್ದರು.

ನಿನ್ನೆ ರಾಹುಲ್ ಗಾಂಧಿಯವರು ಕರ್ನಾಟಕದ ಒಂದು ಕ್ಷೇತ್ರದಲ್ಲಿ 1,00,250 ಮತಗಳ ಕಳ್ಳತನವಾಗಿದ್ದು, ಈ ಕ್ಷೇತ್ರದಲ್ಲಿ 11,965 ನಕಲಿ ಮತದಾರರು, ನಕಲಿ ಮತ್ತು ಅಮಾನ್ಯ ವಿಳಾಸಗಳನ್ನು ಹೊಂದಿರುವ 40,009 ಮತದಾರರು, 10,452 ಬಹು ಸಂಖ್ಯಾತ ಮತದಾರರು ಅಥವಾ ಏಕ ವಿಳಾಸ ಮತದಾರರು, ಅಮಾನ್ಯ ಫೋಟೋಗಳನ್ನು ಹೊಂದಿರುವ 4,132 ಮತದಾರರು, 33,692 ಮತದಾರರು ಹೊಸ ಮತದಾರರ ನಮೂನೆ 6 ಅನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿದ್ದರು.

ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಪ್ರಶ್ನಿಸಿ ಮೇಲ್ಮನವಿ: ಸಹೋದರ ಸೂರಜ್ ಮಾಹಿತಿ

ಹಾಸನ, ಆ.8– ಮನೆ ಕೆಲಸದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಜೀವನ ಪರ್ಯಂತ ಜೀವಾವಧಿ ಶಿಕ್ಷೆ ತೀರ್ಪು ನೀಡಿದೆ. ಈ ಕುರಿತು ಪ್ರಜ್ವಲ್ ಕುಟುಂಬದಿಂದ ಮೊದಲ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅವರ ಸಹೋದರ ಹಾಗೂ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಇಂದು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಅತ್ಯಾಚಾರ ಕೇಸ್‌ನಲ್ಲಿ ಸಹೋದರ ಪ್ರಜ್ವಲ್ ರೇವಣ್ಣಗೆ ವಿಧಿಸಿರುವ ಶಿಕ್ಷೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಾಗಿ ಸೂರಜ್ ಹೇಳಿದರು. ನಮಗೆ ಅದನ್ನು ಬಿಟ್ಟು ಬೇರೆ ಏನನ್ನೂ ಹೇಳಲು ಸಾಧ್ಯವಿಲ್ಲ. ಪ್ರಕರಣ ನ್ಯಾಯಾಲಯದಲ್ಲಿದೆ. ಇದನ್ನು ಯಾರೂ ಚರ್ಚೆ ಮಾಡೋದು ಸೂಕ್ತ ಅಲ್ಲ ಎಂದರು.

ಬ್ರಾಹ್ಮಣ ಮುಖಂಡರಿಗೆ ಆಶೀರ್ವಾದ



ಮೈಸೂರಿಗೆ ಆಗಮಿಸಿದ ವಿದ್ಯಾಶಾರದ ಪ್ರವಚನ ಚಕ್ರವರ್ತಿ ಡಾ.ಪಾವಗಡ ಪ್ರಕಾಶ್‌ರಾವ್ ಅವರನ್ನು ಮೈಸೂರು ಬ್ರಾಹ್ಮಣ ಮುಖಂಡರು ಸ್ವಾಗತಿಸಿದರು.

ಮೈಸೂರು, ಆ.8–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರು ಹಾಗೂ ಅಖಿಲ ಭಾರತೀಯ ಬ್ರಾಹ್ಮಣ ಏಕಿಕೃತ್ ಪರಿಷತ್ತಿನ ಕರ್ನಾಟಕದ ರಾಜ್ಯದ ಅಧ್ಯಕ್ಷ ಎನ್.ಎಂ. ನವೀನ್ ಕುಮಾರ್ ಅವರ ಗೃಹ ಕಚೇರಿಗೆ ವಿದ್ಯಾಶಾರದ ಪ್ರವಚನ ಚಕ್ರವರ್ತಿ ಡಾ.ಪಾವಗಡ ಪ್ರಕಾಶ್‌ರಾವ್ ಅವರು ಆಗಮಿಸಿ ನವೀನ್ ಕುಮಾರ್ ಅವರನ್ನು ಆಶೀರ್ವದಿಸಿದರು. ಇದೇ ವೇಳೆ ಪ್ರಕಾಶ್‌ರಾವ್ ಅವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಈ ವೇಳೆ ಅಖಿಲ ಭಾರತೀಯ ಬ್ರಾಹ್ಮಣ ಏಕೀಕೃತ ಪರಿಷತ್ತಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ನಿಕಟಪೂರ್ವ ಅಧ್ಯಕ್ಷ ವಿದ್ವಾನ್ ವೆಂಕಟಕೃಷ್ಣ ಸಾಮವೇದಿ, ವಿಪ್ರ ಮುಖಂಡರಾದ ಆರ್.ಎಸ್.ಸತ್ಯನಾರಾಯಣ, ಎಸ್.ಬಿ.ವಾಸುದೇವಮೂರ್ತಿ, ಪಾರ್ಥಸಾರಥಿ, ರಾಜಕುಮಾರ್, ವಕೀಲರಾದ ಜಯಶ್ರೀ, ಸುರೇಶ್, ಜಯರಾಮ್, ಮುರಳಿ, ಗದಾದರ್, ಪ್ರವೀಣ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಸಾರಾಂಗದ ಬೃಹತ್ ನಾಮಫಲಕ ಅನಾವರಣ



ಮೈಸೂರು ವಿವಿಯ ಪ್ರಸಾರಾಂಗದ ನೂತನ ಎಲ್‌ಇಡಿ ನಾಮಫಲಕವನ್ನು ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅನಾವರಣಗೊಳಿಸಿದರು.

ಮೈಸೂರು, ಆ.8(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಪ್ರಸಾರಾಂಗ ವತಿಯಿಂದ ನೂತನವಾಗಿ ಅಳವಡಿಸಲಾಗಿರುವ ಪ್ರಸಾರಾಂಗದ ವಿಶೇಷ ಎಲ್.ಇ.ಡಿ ದೀಪ ಒಳಗೊಂಡ ಬೃಹತ್ ನಾಮಫಲಕವನ್ನು ಶುಕ್ರವಾರ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅನಾವರಣಗೊಳಿಸಿದರು.

ಬಳಿಕ ಮಾತನಾಡಿ, ಪ್ರಸಾರಾಂಗಕ್ಕೆ ಇಡೀ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವಿಶೇಷ ಗೌರವವಿದೆ. ಆದರೆ ಪ್ರಸಾರಾಂಗದ ಬಗ್ಗೆ ಸಾಮಾನ್ಯ ಜನರಿಗೆ ತಿಳಿದಿಲ್ಲ. ಇದರ ಬಗ್ಗೆ ಸಾರ್ವಜನಿಕರಿಗೆ ಗೊಂದಲವಿದ್ದು, ಅದನ್ನು ನಿವಾರಿಸುವ ಸಲುವಾಗಿ ಎಲ್‌ಇಡಿ ದೀಪದ ಬೃಹತ್ ನಾಮಫಲಕ ಅಳವಡಿಸಲಾಗಿದೆ. ಪ್ರಸಾರಾಂಗದಲ್ಲಿ ಪುಸ್ತಕಗಳ ಮುದ್ರಣ, ಮಾರಾಟ ಸೇರಿದಂತೆ ಹಲವು ಉಪಯೋಗಿ ಕಾರ್ಯಗಳು ನಡದಿವೆ. ಇದರ ಸಲುವಾಗಿ ನಿರ್ದೇಶಕರು ಮತ್ತು ತಂಡ ಈ ಉತ್ತಮ ಕೆಲಸ ಮಾಡಿದ್ದಾರೆ. ಈ ಕೆಲಸ ಹೀಗೆ ಮುಂದುವರೆಯಲಿ ಎಂದು ಅವರು ಆಶಿಸಿದರು.

ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು ಮಾತನಾಡಿ, ಮೈಸೂರು ವಿವಿಯ ಕಳಶಪ್ರಾಯವಾದ ಸಂಸ್ಥೆ ಎಂದರೆ ಪ್ರಸಾರಾಂಗ. ಪ್ರಸಕ್ತ ಪ್ರಸಾರಾಂಗದ ಗುರುತು ಕ್ರಮೇಣ ಕಾಣೆಯಾಗುತ್ತಿದ್ದು, ಶತಮಾನಗಳ ಇತಿಹಾಸ ಇರುವ ಈ ಸಂಸ್ಥೆಯನ್ನು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಾರ್ವಜನಿಕರು ಗುರುತಿಸುವಂತೆ ಮಾಡಲು ಈ ನಾಮಫಲಕ ಅಳವಡಿಸಲಾಗಿದೆ ಎಂದರು.

> ಪ್ರಸಾರಾಂಗದಲ್ಲಿ ಪುಸ್ತಕಗಳನ್ನು ಖರೀದಿಸುವ ವಿದ್ಯಾರ್ಥಿಗಳಿಗೆ ವಿಶೇಷವಾಗಿ ರಿಯಾಯಿತಿ ದರದಲ್ಲಿ ಪುಸ್ತಕಗಳು ಲಭ್ಯವಿದೆ. ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಪಠ್ಯ ಪುಸ್ತಕಗಳು ಸೇರಿದಂತೆ ಎಲ್ಲಾ ಪುಸ್ತಕಗಳ ಮೇಲೆ ಶೇ.50 ರಷ್ಟು ರಿಯಾಯಿತಿ ಇರಲಿದೆ. ಪುಸ್ತಕಗಳ ಶೀರ್ಷಿಕೆಗಳಿಗನುಗುಣವಾಗಿ ರಿಯಾಯಿತಿ ನೀಡಲಾಗುವುದು.
>
> -ಪ್ರೊ.ಎಂ.ನಂಜಯ್ಯ ಹೊಂಗನೂರು, ಪ್ರಸಾರಾಂಗ ನಿರ್ದೇಶಕ

ವಿವಿ ಅನುದಾನ ಮತ್ತು ವೈಯಕ್ತಿಕ ಹಣ ಹೂಡಿಕೆ ಮಾಡಿ ಪ್ರಸಾರಾಂಗ ನಾಮಫಲಕ ಹಾಕಿಸಲಾಗಿದೆ. ಅತೀ ವಿರಳವಾದ, ವಿಶಿಷ್ಟವಾದ ಪುಸ್ತಕಗಳು ಇಲ್ಲಿ ದೊರೆಯಲಿದ್ದು, ವಿಶ್ವವಿದ್ಯಾನಿಲಯದಲ್ಲಿರುವ ಪುಸ್ತಕ ಭಂಡಾರವನ್ನು ಪ್ರಚಾರ ಮಾಡುವ ಉದ್ದೇಶದಿಂದ ಬೋರ್ಡ್ ಅಳವಡಿಸಲಾಗಿದೆ ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಸಾರಾಂಗದ ಅಧೀಕ್ಷಕರಾದ ಚನ್ನಬಸಪ್ಪ, ಸಹಾಯಕ ನಿರ್ದೇಶಕ ಅನಿಲ್ ಕುಮಾರ್, ಮುದ್ರಣಾಲಯ ನಿರ್ದೇಶಕ ಸತೀಶ್, ಪ್ರಸಾರಾಂಗದ ಸಿಬ್ಬಂದಿ ವರ್ಗ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.


ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ಮೈಸೂರಿನ ಗಾಂಧಿನಗರದ ಗರಡಿ ಮನೆಗಳು ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಶಾಸಕ ತನ್ವೀರ್ ಸೇಠ್ ಇನ್ನಿತರರಿದ್ದರು.

ಮೈಸೂರು ಸಾಹಸ ಪರಂಪರೆ ಸಾರುವ ಗರಡಿಗಳನ್ನು ಸುಧಾರಿಸದೆ 'ದಸರಾ ಕುಸ್ತಿ' ಮೆರೆಸುವುದರಲ್ಲಿ ಏನು ಫಲ!

ಸಾಹಸ ಗಾಥೆ ಸಾರುವ ಗುಡಿ ಮನೆಗಳಿಗೆ ಬಂದಿರುವ ದುಸ್ಥಿತಿ ಕಂಡು ಪೈಲ್ವಾನರು ತೀವ್ರ ಬೇಸರ



ಲಷ್ಕರ್ ಮೊಹಲ್ಲಾದಲ್ಲಿರುವ 'ಪೈ.ಶ್ರೀನಿವಾಸಣ್ಣನವರ ಗರಡಿ ಮನೆ' ಕುಸಿದು ಬಿದ್ದಿರುವುದು.



ನಿರ್ಮಾಣ ಹಂತದಲ್ಲಿರುವ ಮಂಡಿ ಮೊಹಲ್ಲಾದ 'ಲಾವರ್ ಬಸಪ್ಪನವರ ಗರಡಿ ಮನೆ

● ಮೋಹನ್ ಕಾಯಕ

ಮೈಸೂರು, ಆ.8– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಾಹಸಗಾಥೆಯ ಪ್ರತೀಕ ದಸರಾ ಕುಸ್ತಿ... ಅಖಾಡದಲ್ಲಿ ತೊಡೆ ತಟ್ಟಿ ಧೂಳೆಬ್ಬಿಸುವ ಜಗಜಟ್ಟಿಗಳನ್ನು ತಿದ್ದಿ–ತೀಡಿ ರೂಪಿಸುವ ಗಂಡು ಭೂಮಿ ಗರಡಿ ಮನೆಗಳು ಕಣ್ಣ ಮುಂದೆಯೇ ಕಣ್ಮರೆಯಾಗುತ್ತಿವೆ...!

ಮೈಸೂರು ಕುಸ್ತಿಗೆ ತನ್ನದೇ ಆದ ಸುದೀರ್ಘ ಮತ್ತು ವೈಭವಯುತ ಪರಂಪರೆ ಇದೆ. ಸಾಂಸ್ಕೃತಿಕ ನಗರಿಯ ಒಂದೊಂದು ಮೊಹಲ್ಲಾದಲ್ಲಿಯೂ ಗಂಡು ಭೂಮಿ ಗರಡಿ ಮನೆಗಳು ಸಾಹಸಗಾಥೆಯ ಪ್ರತೀಕವಾಗಿದ್ದವು. ಮೈಸೂರು ರಾಜ ಮನೆತನ ನೀಡಿದ ಪ್ರೋತ್ಸಾಹದಿಂದಾಗಿ ದೇಶ–ವಿದೇಶಗಳಲ್ಲಿ ಎದುರಾಳಿಗಳಿಗೆ ಮಣ್ಣು ಮುಕ್ಕಿಸಿದ ಮೈಸೂರಿನ ಪೈಲ್ವಾನರದ್ದು ಎಂದಿಗೂ ಮರೆಯದ ಇತಿಹಾಸ. ಆದರೆ, ಇಂತಹ ಪೈಲ್ವಾನರನ್ನು ಸೃಷ್ಟಿಸಿದ ಗರಡಿ ಮನೆಗಳು ವರ್ಷದಿಂದ ವರ್ಷಕ್ಕೆ ಒಂದೊಂದಾಗಿ ಕುಸಿದು ಬಿದ್ದು ಕಣ್ಮರೆಯಾಗುತ್ತಿವೆ.

ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಕುಸಿದು ಬಿದ್ದ ಲಷ್ಕರ್ ಮೊಹಲ್ಲಾದಲ್ಲಿರುವ 'ಪೈ.ಶ್ರೀನಿವಾಸಣ್ಣನವರ ಗರಡಿ ಮನೆ' ಮಾನವನ ಅಸ್ಥಿ ಪಂಜರದಂತೆ ಕಾಣಿಸುತ್ತಿದ್ದರೆ, 20 ವರ್ಷಗಳ ಹಿಂದೆ ಕುಸಿದು ಬಿದ್ದ ಮಂಡಿ ಮೊಹಲ್ಲಾದ ಲಾವರ್ ಬಸಪ್ಪನವರ ಗರಡಿ ಮನೆ'ಯ ಅವಶೇಷಗಳಷ್ಟೇ ಕಣ್ಣಿಗೆ ಗೋಚರಿಸುತ್ತಿವೆ.

> ### ಕುಸ್ತಿ ಕಲೆ ಉಳಿಸುವ ಕಾಳಜಿಯೂ ಇಲ್ಲ... ಕನಿಕರವೂ ಇಲ್ಲ... ಕಲಿಯುವ ಆಸಕ್ತಿಯೂ ಇಲ್ಲವಾಗುತ್ತಿದೆ....!
>
> ಮೈಸೂರಿನಲ್ಲಿ ಕುಸ್ತಿ ಪರಂಪರೆಯನ್ನು ಉಳಿಸಿ–ಬೆಳೆಸುವ ಕಾಳಜಿಯೇ ಸ್ಥಳೀಯ ಜನಪ್ರತಿನಿಧಿಗಳಲ್ಲಿ ಇಲ್ಲವಾಗಿದೆ. ಪೈಲ್ವಾನರು ಎಲ್ಲಿಂದ ಹಣ ತಂದು ದುರಸ್ಥಿ ಮಾಡಲು ಸಾಧ್ಯ. ಜನಪ್ರತಿನಿಧಿಗಳು ಕುಸ್ತಿ ಕಲೆ ಉಳಿಸುವ ಕನಿಷ್ಠ ಕಾಳಜಿಯನ್ನಾದರೂ ತೋರಬೇಕಲ್ಲವೇ... ಕುಸಿದು ಬಿದ್ದು ಬಡವಾಗಿ ಕಾಣುವ ಗರಡಿ ಮನೆಗಳನ್ನು ಕಂಡರೂ ಕನಿಕರ ಇಲ್ಲದಂತೆ ವರ್ತಿಸುತ್ತಾರೆ. ಪೈಲ್ವಾನರಿಗೆ ಪ್ರೋತ್ಸಾಹದ ಕೊರತೆ ಜೊತೆಗೆ ಹಾಳಾದ್ ಮೊಬೈಲ್ ಗೀಳು ಕುಸ್ತಿ ಕಲೆಯ ಮೇಲಿನ ಆಸಕ್ತಿ ಕಡಿಮೆ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಕುಸ್ತಿ ಕಲೆಯ ಬಗ್ಗೆ ಪುಸ್ತಕಗಳಲ್ಲಿ ಓದಿ ತಿಳಿದುಕೊಳ್ಳಬೇಕಾದ ಸಂದರ್ಭ ಬಂದರೂ ಅಚ್ಚರಿ ಇಲ್ಲ.
>
> - ಹಿರಿಯ ಕುಸ್ತಿ ಪೈಲ್ವಾನರು.

ಅಷ್ಟೇ ಅಲ್ಲದೆ ಸುಮಾರು 15 ವರ್ಷದ ಹಿಂದೆ ಕುಸಿದು ಬಿದ್ದ ಮಂಡಿ ಮೊಹಲ್ಲಾದಲ್ಲೇ ಇದ್ದಂತಹ 'ಗೌಡಯ್ಯನ ಗರಡಿ' ಅಕ್ಷರಶಃ ಕಣ್ಮರೆಯಾಗಿದೆ.

ಮೈಸೂರು ಕುಸ್ತಿ ಕಲೆಯನ್ನು ಉಳಿಸಿ–ಬೆಳೆಸುವ ಗರಡಿ ಮನೆಗಳು ಒಂದೊಂದಾಗಿಯೇ ಕಣ್ಮರೆಯಾಗುತ್ತಾ ಬರುತ್ತಿದ್ದು, ಹಿರಿಯ ಪೈಲ್ವಾನರು ಹೇಳುವಂತೆ, 70–80 ಗರಡಿ ಮನೆಗಳಿದ್ದ ಮೈಸೂರಿನಲ್ಲಿ ಈಗ ಲೆಕ್ಕಾ ಹಾಕಿದರೆ 25–30 ಗರಡಿ ಮನೆಗಳು ಇರಬಹುದು. ಅವುಗಳಲ್ಲಿಯೂ ಬಹುತೇಕ ಗರಡಿಗಳು ಅಳಿವಿನ ಅಂಚಿನಲ್ಲಿವೆ ಎಂದು ಅತೀವ ಬೇಸರ ಹೊರಹಾಕಿದ್ದಾರೆ.

ನೂರಾರು ಪೈಲ್ವಾನರ ತಯಾರಿ ಯೊಂದಿಗೆ ಪ್ರತಿನಿತ್ಯ ಸಾಧನೆ(ಕಸರತ್ತು), ಗುದ್ದಾಟ ನಡೆಯುತ್ತಿದ್ದ ಲಷ್ಕರ್ ಮೊಹಲ್ಲಾ ಇರ್ವಿನ್ ರಸ್ತೆ ಸಮೀಪದ ದೊಡ್ಡ ಒಕ್ಕಲಗೇರಿಯ 4ನೇ ಕ್ರಾಸ್‌ನಲ್ಲಿರುವ 'ಪೈ.ಶ್ರೀನಿವಾಸಣ್ಣನವರ ಗರಡಿ ಮನೆ' ಕುಸಿದು, ಇಲ್ಲಿಗೆ 10 ತಿಂಗಳೇ ಕಳೆದಿದೆ. ಗರಡಿ ಮನೆಯಲ್ಲಿ ಕಸರತ್ತು ನಡೆಸುವ ಪರಿಕರಗಳು, ತಾಜಾತನದಿಂದ ಹದವಾಗಿರುವ ಮಟ್ಟಿ, ಮಲ್ಲಕಂಬ ಸೇರಿದಂತೆ ಎಲ್ಲವೂ ಇದ್ದು, ಸೂರಿನ ಆಸರೆ ಇಲ್ಲದೆ ಅಸ್ಥಿಪಂಜರದಂತೆ ಕಾಣುತ್ತಿದೆ.

'ಪೈ.ಶ್ರೀನಿವಾಸಣ್ಣನವರ ಗರಡಿ ಮನೆ' ಕುಸಿದು ಬಿದ್ದಾಗ ಸ್ಥಳೀಯ ಶಾಸಕರು ಗರಡಿ ಮನೆಗೆ ಭೇಟಿ ನೀಡಿ, ಹೊಸದಾಗಿ ಕಟ್ಟಿಸಿಕೊಡುವ ಭರವಸೆ ನೀಡಿದ್ದರು. ಆದರೆ, ಭರವಸೆ ಇನ್ನೂ ಭರವಸೆಯಾಗಿಯೇ ಉಳಿದಿದ್ದು, ಕುಸಿದು ಬಿದ್ದ ಗೋಡೆಯ ಛಾವಣಿ ತೊಲೆಗೆ ಕಾವು(ದೊಣ್ಣೆ)ಕೊಟ್ಟು ನಿಲ್ಲಿಸಿರುವ ಕುಸ್ತಿ ಪಟುಗಳು ಕಸರತ್ತು ನಡೆಸಲಾಗದೆ, ಮನಸ್ಸಿನಲ್ಲೇ ಕುಸ್ತಿ ಕನವರಿಸುತ್ತಾ ದಿನ ದೂಡುತ್ತಿದ್ದಾರೆ. ದುರಸ್ಥಿ ಕಾಮಗಾರಿ ಯಾವಾಗ ಆರಂಭವಾಗುತ್ತೊ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.



ಕಣ್ಮರೆಯಾದ 'ಗೌಡಯ್ಯನವರ ಗರಡಿ ಮನೆ' ಇದ್ದ ಜಾಗ ಪಾಳು ಬಿದ್ದಿರುವುದು.

ಕಣ್ಮರೆಯಾದ 'ಗೌಡಯ್ಯನವರ ಗರಡಿ ಮನೆ: ಮಂಡಿ ಮೊಹಲ್ಲಾದ ಅಕ್ಬರ್ ರಸ್ತೆಯಲ್ಲಿದ್ದ 'ಗೌಡಯ್ಯನವರ ಗರಡಿ ಮನೆ' ಅಕ್ಷರಶಃ ಕಣ್ಮರೆಯಾಗಿದ್ದು, ಗರಡಿ ಮನೆ ಇದ್ದ ಜಾಗ ಪಾಲು ಬಿದ್ದಿದೆ. ಸುಮಾರು 15 ವರ್ಷಗಳ ಹಿಂದೆ ಕುಸಿದ ಬಿದ್ದ ಗರಡಿ ಮನೆಯ ಅವಶೇಷಗಳು ಇಲ್ಲದಂತಾಗಿದ್ದು, ಪಾಲು ಬಿದ್ದಿರುವ ಜಾಗದಲ್ಲಿ ಸ್ಥಳೀಯರು ತಮ್ಮ ವಾಹನಗಳನ್ನು ಪಾರ್ಕ್ ಮಾಡುತ್ತಿದ್ದಾರೆ.

10 ಲಕ್ಷ ಅನುದಾನಕ್ಕೆ ಬರೆದಿದ್ದೇವೆ: ಮಂಡಿ ಮೊಹಲ್ಲಾದ ಎಂಹೆಚ್(ಮಿಷನ್ ಆಸ್ಪತ್ರೆ ರಸ್ತೆ) ರಸ್ತೆಯಲ್ಲಿರುವ 'ಲಾವರ್ ಬಸಪ್ಪನವರ ಗರಡಿ ಮನೆ' ಕುಸಿದು ಬಿದ್ದು ಇಪ್ಪತ್ತು ವರ್ಷಗಳು ಕಳೆದಿದ್ದು, ಹೊಸದಾಗಿ ನಿರ್ಮಿಸುವ ಪ್ರಯತ್ನ ಇನ್ನೂ ನಡೆಯುತ್ತಲೇ ಇದೆ. ಶ್ರೀ ಶಂಕರ ಮಠ ಮತ್ತು ಶ್ರೀ ರಾಮ ಸೇವಾ ಟ್ರಸ್ಟ್‌ನಿಂದ ರಾಮಮಂದಿರ, ಶಿವನ ದೇವಸ್ಥಾನದ ಜೊತೆಗೆ 'ಲಾವರ್ ಬಸಪ್ಪನವರ ಗರಡಿ ಮನೆ'ಯನ್ನು ಹೊಸದಾಗಿ ನಿರ್ಮಿಸಲಾಗುತ್ತಿದ್ದು, 10 ಲಕ್ಷ ರೂ. ಅನುದಾನಕ್ಕೆ ಮನವಿ ಮಾಡಿದ್ದೇವೆ. ಅನುದಾನ ಬಿಡುಗಡೆಯಾಗುವ ಭರವಸೆ ಇದೆ ಎಂದು ಶ್ರೀ ಶಂಕರ ಮಠ ಮತ್ತು ಶ್ರೀ ರಾಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ವೈ.ಎನ್. ರವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇನ್ನೂ ಸಾಕಷ್ಟು ಗರಡಿ ಮನೆಗಳು ಕುಸಿದು ಬಿದ್ದಿವೆ: ನಜರ್‌ಬಾದ್, ಇಟ್ಟಿಗೆಗೂಡು ಸೇರಿದಂತೆ ಮೈಸೂರಿನ ಹಲವೆಡೆ ಇದ್ದಂತಹ ಗರಡಿ ಮನೆಗಳು ಕುಸಿದು ಬಿದ್ದಿವೆ. ಕೆಲ ಗರಡಿ ಮನೆಗಳನ್ನು ಅಲ್ಲಿನ ಪೈಲ್ವಾನರೆ ದುರಸ್ಥಿ ಮಾಡಿಕೊಂಡು ಪೈಲ್ವಾನರನ್ನು ತಯಾರು ಮಾಡಿದರೆ, ಹಲವು ಗರಡಿ ಮನೆಗಳು ಜೀರ್ಣೋದ್ಧಾರವಾಗದೆ ಕಣ್ಮರೆಯಾಗುತ್ತಿವೆ ಎಂದು ಕೆಲ ಹಿರಿಯ ಪೈಲ್ವಾನರು 'ಗರಡಿ ಮನೆ'ಗಳ ಪರಿಸ್ಥಿತಿ ತೆರೆದಿಟ್ಟರು.

ಏಕ ಕಾಲಕ್ಕೆ 36 ವಿದ್ಯಾರ್ಥಿಗಳಿಂದ ಕೀಬೋರ್ಡ್ ನುಡಿಸುವ ಕಾರ್ಯಕ್ರಮ

ನಾಳೆ ನಿನಾದ್ ಮ್ಯೂಸಿಕಲ್ ಸ್ಕೂಲ್‌ನಿಂದ ಆಯೋಜನೆ

ಮೈಸೂರು, ಆ.8(ಎಂಟಿವೈ)– ಮೈಸೂರಿನ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಆ.10ರಂದು ಸಂಜೆ 6ಕ್ಕೆ ನಿನಾದ್ ಮ್ಯೂಸಿಕಲ್ ಟ್ರಸ್ಟ್ 36 ವಿದ್ಯಾರ್ಥಿಗಳು ಏಕಕಾಲಕ್ಕೆ ಕೀ ಬೋರ್ಡ್ ನುಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಿನಾದ್ ಮ್ಯೂಸಿಕಲ್ ಟ್ರಸ್ಟ್ ಅಧ್ಯಕ್ಷ ಎ.ಎಸ್. ಪ್ರಸನ್ನಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಕಳೆದ 25 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿನಾದ್ ಮ್ಯೂಸಿಕಲ್ ಟ್ರಸ್ಟ್ ಸಾವಿರಾರು ವಿದ್ಯಾರ್ಥಿಗಳಿಗೆ ಕೀ ಬೋರ್ಡ್ ನುಡಿಸುವುದನ್ನು ಕಲಿಸಿದೆ. ಸಂಸ್ಥೆಯ 25ನೇ ವಾರ್ಷಿಕೋತ್ಸವ ಕೀ ಬೋರ್ಡ್ ನುಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಸ್ಥೆಯ 36 ವಿದ್ಯಾರ್ಥಿಗಳು ಏಕಕಾಲದಲ್ಲಿ ಕೀ ಬೋರ್ಡ್ ನುಡಿಸಲಿದ್ದಾರೆ. ಇವರಲ್ಲಿ 60 ವರ್ಷ ಮೇಲ್ಪಟ್ಟ ಮೂವರು ಇರುವುದು ವಿಶೇಷ. ಕನ್ನಡ ಹಿಂದಿ ದೇಶಭಕ್ತಿ ಗೀತೆ, ಚಿತ್ರಗೀತೆಗಳನ್ನು ನುಡಿಸಲಿದ್ದಾರೆ. ಕಾರ್ಯಕ್ರಮದಲ್ಲಿ ನನ್ನ ಗುರುಗಳಾದ ಪಿ.ಜಿ. ವೆಂಕಟೇಶ್ ಹಾಗೂ ಕೆ.ಆರ್. ಆಸ್ಪತ್ರೆ ಇಎನ್‌ಟಿ ತಜ್ಞ ಡಾ. ಸುಭಾಷ್ ಅವರನ್ನು ಸನ್ಮಾನಿಸಲಾಗುವುದೆಂದರು. ಸುದ್ದಿಗೋಷ್ಠಿಯಲ್ಲಿ ದೇವಿಕಾ, ರೇಖಾ, ಪಿ. ವಾಸುದೇವ್ ಇದ್ದರು.

ಅಂತರ್ ಶಾಲಾ ಸ್ಪರ್ಧೆ



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾ ಮಂದಿರದಲ್ಲಿ ಅಂತರ್ ಶಾಲಾ ಸ್ಪರ್ಧೆ ನಡೆಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ. ಬಾಹುಬಲಿ ಜೆ. ನಾಗಾವಿ, ಉಪಾಧ್ಯಕ್ಷ ಸುರೇಶ್ ಕುಮಾರ್, ಖಜಾಂಚಿ ಗೌತಮ್ ಕುಮಾರ್ ಎಚ್.ಡಿ, ಕಾರ್ಯದರ್ಶಿ ಇಚ್ಛಾ.ಜೆ, ಪ್ರಾಂಶುಪಾಲೆ ಅನಿತಾ.ಡಿ, ಸಹ ಪ್ರಾಂಶುಪಾಲೆ ಆಶಾ ಎಸ್, ತೀರ್ಪುಗಾರರಾದ ಪುಷ್ಪ ಬಸವರಾಜು ಬಿ ವಿ, ಎಂ. ಕೆ.ನಾಗಮಣಿ, ಅನುರಾಧ ಗಿರೀಶ್, ಪ್ರಿಯಾ ಉಪಸ್ಥಿತರಿದ್ದರು.

ಭಾರತ ಬಹುತ್ವದ ರಾಷ್ಟ್ರ; ಸಹಬಾಳ್ವೆಯೊಂದಿಗೆ ಸಂಭ್ರಮಿಸಬೇಕು

ಸಂವಾದ ಕಾರ್ಯಕ್ರಮದಲ್ಲಿ ಚಿಂತಕ ಡಾ.ರಹಮತ್ ತರೀಕೆರೆ ಅಭಿಮತ

ಮೈಸೂರು, ಆ.8(ಎಂಕೆ)– ವಿವಿಧತೆಯಲ್ಲಿ ಏಕತೆಯನ್ನೊಳಗೊಂಡ ಭಾರತ, ಮೂಲತಃ ಬಹುತ್ವ ರಾಷ್ಟ್ರವಾಗಿದೆ. ಒಂದೇ ಧರ್ಮ, ಒಬ್ಬನ ಆಳ್ವಿಕೆ, ಒಂದೇ ಸಂಸ್ಕೃತಿ ಇರುವಲ್ಲಿ ಬಹುತ್ವ ಛಿದ್ರವಾಗಲಿದೆ. ಹಾಗಾಗಿ ಸಹಬಾಳ್ವೆಯೊಂದಿಗೆ ಬಹುತ್ವವನ್ನು ಸಂಭ್ರಮಿಸಬೇಕು ಎಂದು ಚಿಂತಕ ಡಾ.ರಹಮತ್ ತರೀಕೆರೆ ಅಭಿಪ್ರಾಯಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ 'ಬಹುತ್ವ ಭಾರತ' ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ, ಆಹಾರ ಪದ್ಧತಿ, ಭೌಗೋಳಿಕ ಅಂಶಗಳಲ್ಲಿಯೂ ಭಾರತ ಬಹುತ್ವದ ರಾಷ್ಟ್ರವಾಗಿದೆ ಎಂದರು.

ಭಾರತ ಒಕ್ಕೂಟ ವ್ಯವಸ್ಥೆ ಒಳಗೊಂಡ ದೇಶವಾಗಿದ್ದು, ರಾಷ್ಟ್ರಗೀತೆ, ನಾಡಗೀತೆಯಲ್ಲಿ ನಮ್ಮದು ವಿವಿಧತೆಯಲ್ಲಿ ಏಕತೆ ಸಾರುವ ರಾಷ್ಟ್ರ ಎಂಬುದನ್ನು ಉಲ್ಲೇಖಿಸಲಾಗಿದೆ. ಭೌಗೋಳಿಕವಾಗಿ ಭಾರತದ ಒಂದೊಂದು ಪ್ರದೇಶ, ರಾಜ್ಯ, ಜಿಲ್ಲೆಗಳಲ್ಲಿಯೂ ವೈವಿಧ್ಯತೆಯನ್ನು ಕಾಣುತ್ತೇವೆ. ಕರ್ನಾಟಕದಲ್ಲಿಯೇ ಕರಾವಳಿ, ಮಳೆನಾಡು, ಬಯಲುಸೀಮೆ ಎಂಬುದಾಗಿ ವಿಂಗಡಣೆಯಾಗಿದೆ. ಒಂದೊಂದು ಪ್ರದೇಶದಲ್ಲಿ ವಿಭಿನ್ನ ಸಂಸ್ಕೃತಿಯನ್ನು ಕಾಣುತ್ತೇವೆ ಎಂದು ತಿಳಿಸಿದರು.



ಸಂವಾದ ಕಾರ್ಯಕ್ರಮದಲ್ಲಿ ಚಿಂತಕ ಡಾ.ರಹಮತ್ ತರೀಕೆರೆ ಮಾತನಾಡಿದರು.

ಈ ಬಹುತ್ವವನ್ನು ಸಹಬಾಳ್ವೆಯಿಂದ ಸಂಭ್ರಮಿಸಬೇಕು. ಎಲ್ಲಾ ಭಾಷೆ, ಸಂಸ್ಕೃತಿ, ಆಹಾರ ಪದ್ಧತಿಗಳನ್ನು ಗೌರವಿಸಿದರೆ ಬಹುತ್ವದಲ್ಲಿ ಸಮಾನತೆ ಕಾಣಬಹುದಾಗಿದೆ. ಇದನ್ನೇ ಬಾಬಾ ಸಾಹೇಬರು ಸಾಮಾಜಿಕ ಸಮಾನತೆ ಎಂದಿದ್ದರು. ಬಹುತ್ವದ ಸಂಭ್ರಮ ಕೇವಲ ಮನುಷ್ಯನಿಗೆ ಮಾತ್ರವಲ್ಲ ನಿಸರ್ಗದಲ್ಲಿರುವ ಎಲ್ಲಾ ಜೀವಿಗಳಿಗೂ ಅನ್ವಯಿಸಲಿದೆ. ಬದುಕುವ ಹಕ್ಕು ಎಲ್ಲಾ ಜೀವಿಗಳಿಗೂ ಇದೆ. ಅದೇ ರೀತಿ ಜಾತಿ ವ್ಯವಸ್ಥೆಯಲ್ಲಿ ಬಹುತ್ವವನ್ನು ಸಂಭ್ರಮಿಸಲು ಸಾಧ್ಯವಿಲ್ಲ ಎಂದರು.

ಹೇರಿಕೆ, ತಾರತಮ್ಯದಿಂದ ಬಹುತ್ವದ ನಾಶ: ಸಹಬಾಳ್ವೆ ಇರಬೇಕಾದ ಬಹುತ್ವದ ಸಮಾಜದಲ್ಲಿ ನಾನು ಮೇಲು... ನೀನು ಕೀಳು ಎನ್ನುವ ಜಾತಿ ವ್ಯವಸ್ಥೆಯಿಂದ ಬಹುತ್ವವನ್ನು ಸಂಭ್ರಮಿಸಲು ಸಾಧ್ಯವಾಗುವುದಿಲ್ಲ. ಒಬ್ಬರ ಆಲೋಚನೆಗಳನ್ನು ಮತ್ತೊಬ್ಬರ ಇಷ್ಟಕ್ಕೆ ವಿರುದ್ಧವಾಗಿ ಹೇರಿಕೆ ಅಥವಾ ಬಲವಂತ ಮಾಡುವುದು ಬಹುತ್ವದ ನಾಶಕ್ಕೆ ಕಾರಣವಾಗಲಿದೆ. ಹಿಂದಿ ಭಾಷೆಯನ್ನೇ ಕಲಿಯಬೇಕು ಎಂಬುದು ಹೇರಿಕೆ ಮಾಡುವುದು ಕೂಡ ಬಹುತ್ವಕ್ಕೆ ವಿರುದ್ಧವಾಗಿದೆ. ಒಬ್ಬನೇ ಆಳ್ವಿಕೆ ನಡೆಸಬೇಕು. ಒಬ್ಬ ಹೇಳಿದಂತೆಯೇ ನಡೆಯಬೇಕು. ಒಂದೇ ಧರ್ಮ, ಒಂದೆ ಭಾಷೆ, ಒಂದೇ ಸಂಸ್ಕೃತಿ ಎಂಬ ಧೋರಣೆಗಳಿಂದ ಬಹುತ್ವ ಛಿದ್ರವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ. ಸೋಮಶೇಖರ್, ಮಹಾತ್ಮ ಗಾಂಧಿ ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ.ನರೇಂದ್ರ ಕುಮಾರ್, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಸೌಮ್ಯ ಈರಪ್ಪ ಉಪಸ್ಥಿತರಿದ್ದರು.

ದೇಶ - ವಿದೇಶ

ಮಗುವಿಗೆ ಜನ್ಮ ನೀಡಿದ ಅತೀ ಕುಬ್ಜ ಮಹಿಳೆ

ತಿರುವನಂತಪುರ: ದೇಶದಲ್ಲೇ ಅತೀ ಕುಬ್ಜ ಎಂದೇ ಪರಿಗಣಿಸಲಾಗಿರುವ ಮಹಿಳೆಯೊಬ್ಬರು ಮಗುವಿಗೆ ಜನ್ಮ ನೀಡಿದ್ದಾರೆ. ಕೇರಳದ ತ್ರಿಶ್ಯೂರ್‌ನ ಅಯ್ಯಂಥೋಲ್‌ನ ಕೆ.ಕೆ. ಸಿಮಿ ಅವರು 95 ಸೆಂ.ಮೀ ಎತ್ತರ ಇದ್ದಾರೆ. ಸಿಮಿ ಅವರು ಜೂನ್ 23ರಂದು ತ್ರಿಶ್ಯೂರ್‌ನ ಆಸ್ಪತ್ರೆಯೊಂದರಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.



ಲಿಮ್ಕಾ ದಾಖಲೆಗಳ ಪಟ್ಟಿಗೆ ಸಿಮಿ ಹೆಸರನ್ನು ಸೇರಿಸುವ ಪ್ರಕ್ರಿಯೆ ಆರಂಭಗೊಂಡಿದೆ. ಪ್ರಸ್ತುತ ಅವರು ಸಹಕಾರ ಬ್ಯಾಂಕ್‌ವೊಂದರಲ್ಲಿ ಉದ್ಯೋಗಿಯಾಗಿದ್ದಾರೆ. ಆಸ್ಪತ್ರೆಯ ಅಧಿಕಾರಿಗಳ ಪ್ರಕಾರ ಮಗುವಿಗೆ ಜನ್ಮ ನೀಡಿದ ದೇಶದ ಅತೀ ಕುಬ್ಜ ಮಹಿಳೆ ಎಂದು ಆಂಧ್ರಪ್ರದೇಶ ಪಿ.ಕಾಮಾಕ್ಷಿ ಎನ್ನುವವರನ್ನು ಇದುವರೆಗೆ ಪರಿಗಣಿಸಲಾಗಿತ್ತು. ಅವರು 108 ಸೆಂ.ಮೀ ಎತ್ತರವಿದ್ದಾರೆ.

ಟ್ರಂಪ್‌ಗೆ ಮೋದಿ ಶಾಕ್: ಪುಟಿನ್ ಜೊತೆ ಮಹತ್ವದ ಮಾತುಕತೆ

ನವದೆಹಲಿ, ಆ.8– ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ (ಆ. 8) ರಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಈ ಸಂಭಾಷಣೆ ವೇಳೆ ಉಕ್ರೇನ್‌ಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳ ಕುರಿತು ಪುಟಿನ್ ಮೋದಿಗೆ ವಿವರಿಸಿದ್ದಾರೆ. ಅಧ್ಯಕ್ಷ ಪುಟಿನ್ ಅವರ ವಿವರವಾದ ಮೌಲ್ಯಮಾಪನಕ್ಕಾಗಿ ಧನ್ಯವಾದ ಹೇಳುತ್ತಾ, ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ಭಾರತದ ಸ್ಥಿರ ನಿಲುವನ್ನು ಪ್ರಧಾನಿ ಪುನರುಚ್ಚರಿಸಿದ್ದಾರೆ.



ನನ್ನ ಸ್ನೇಹಿತ ಅಧ್ಯಕ್ಷ ಪುಟಿನ್ ಅವರೊಂದಿಗೆ ಬಹಳ ಒಳ್ಳೆಯ ಮತ್ತು ವಿವರವಾದ ಸಂಭಾಷಣೆ ನಡೆಯಿತು. ಉಕ್ರೇನ್‌ನ ಇತ್ತೀಚಿನ ಬೆಳವಣಿಗೆಗಳನ್ನು ಹಂಚಿಕೊಂಡಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದ ಹೇಳಿದ್ದೇನೆ. ನಮ್ಮ ದ್ವಿಪಕ್ಷೀಯ ಕಾರ್ಯಸೂಚಿಯಲ್ಲಿನ ಪ್ರಗತಿಯನ್ನು ಸಹ ನಾವು ಪರಿಶೀಲಿಸಿದ್ದೇವೆ ಮತ್ತು ಭಾರತ–ರಷ್ಯಾ ವಿಶೇಷ ಮತ್ತು ಸವಲತ್ತು ಪಡೆದ ಕಾರ್ಯತಂತ್ರದ ಪಾಲುದಾರಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದೇವೆ. ಈ ವರ್ಷದ ಕೊನೆಯಲ್ಲಿ ಭಾರತದಲ್ಲಿ ಅಧ್ಯಕ್ಷ ಪುಟಿನ್ ಅವರನ್ನು ಆತಿಥ್ಯ ವಹಿಸಲು ನಾನು ಎದುರು ನೋಡುತ್ತಿದ್ದೇನೆ" ಎಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಹಾಸ್ಯ ನಟ ಕಪಿಲ್ ಶರ್ಮಾರ 'ಕೆನಡಾ ಕೆಫೆ' ಮೇಲೆ ಮತ್ತೆ ದಾಳಿ

ಒಟ್ಟಾವಾ: ಕೆನಡಾದಲ್ಲಿರುವ ಹಾಸ್ಯನಟ ಕಪಿಲ್ ಶರ್ಮಾ ಅವರ ಕೆಫೆ ಮೇಲೆ ಮತ್ತೆ ದಾಳಿಯಾಗಿದೆ. ಕೆನಡಾದ ಬ್ರಿಟಿಷ್ ಕೊಲಂಬಿಯಾದ ಸರ್ರೆಯಲ್ಲಿರುವ ಈ ಕೆಫೆ ಮೇಲೆ ಒಂದು ತಿಂಗಳ ಅವಧಿಯಲ್ಲಿ ಎರಡನೇ ಬಾರಿಗೆ ದಾಳಿಯಾಗಿದೆ. ಕೆಫೆಯ ಮೇಲೆ ಕನಿಷ್ಠ 25 ಗುಂಡುಗಳ ದಾಳಿ ನಡೆದಿರುವುದನ್ನು ಸಿಸಿಟಿವಿ ದೃಶ್ಯಾವಳಿಗಳು ತೋರಿಸುತ್ತವೆ. ಗುರುಪ್ರೀತ್ ಸಿಂಗ್ ಅಲಿಯಾಸ್ ಗೋಲ್ಡಿ ಧಿಲ್ಲೋನ್ ಮತ್ತು ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಈ ದಾಳಿಯ ಹೊಣೆ ಹೊತ್ತಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವುದಾಗಿ ವರದಿಗಳು ಹೇಳಿವೆ.



ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿದಾಗ ಕೆಫೆ ಆವರಣದಲ್ಲಿ ಒಡೆದ ಕಿಟಕಿಗಳು ಮತ್ತು ಆರು ಬುಲೆಟ್‌ನಿಂದಾದ ರಂಧ್ರಗಳು ಕಂಡುಬಂದಿವೆ. ಈ ದಾಳಿ ಸ್ಥಳೀಯ ಭಾರತೀಯ ಸಮುದಾಯದಲ್ಲಿ ಆತಂಕ ಮೂಡಿಸಿದೆ. ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ, ಆದರೆ ಇದುವರೆಗೆ ಯಾರನ್ನೂ ಬಂಧಿಸಲಾಗಿಲ್ಲ. ಕಳೆದ ತಿಂಗಳು ನಡೆದ ದಾಳಿಯನ್ನು ಖಲಿಸ್ತಾನಿ ಭಯೋತ್ಪಾದಕ ಹರ್ಜೀತ್ ಸಿಂಗ್ ಲಡ್ಡಿ ಹೊತ್ತುಕೊಂಡಿದ್ದ. ಆಗ ಕೆಫೆ ಮೇಲೆ ಕನಿಷ್ಠ ಒಂಬತ್ತು ಗುಂಡುಗಳನ್ನು ಹಾರಿಸಲಾಗಿತ್ತು.

ಭಾರತದ ಅತ್ಯಂತ ಸುರಕ್ಷಿತ ನಗರಗಳ ಪೈಕಿ ಮಂಗಳೂರು ಫಸ್ಟ್ !

ನವದೆಹಲಿ, ಆ.8– ಇತ್ತೀಚೆಗಿನ ದಿನಗಳಲ್ಲಿ ಜನರು ವಾಸಿಸುವ ಸ್ಥಳಗಳಲ್ಲಿ ಸುರಕ್ಷತೆಯೇ ಇಲ್ಲದಂತಾಗಿದೆ. ದಿನೇ ದಿನೇ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ವಾಸಯೋಗ್ಯವಾದ ವಾತಾವರಣವು ಇಲ್ಲದಂತಾಗಿದೆ. ಈ ಎಲ್ಲಾ ಅಂಶಗಳಿಂದಲೂ ಆತಂಕದಲ್ಲೇ ಜನರು ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಆದರೆ, ಇದೀಗ ನಗರವಾರು ಸುರಕ್ಷತಾ ಶ್ರೇಯಾಂಕದಲ್ಲಿ ಕರ್ನಾಟಕದ ಮಂಗಳೂರು ನಗರವು ಎಲ್ಲಾ ಅಂಶಗಳಿಂದಲೂ ಅತ್ಯಂತ ಸುರಕ್ಷಿತ ನಗರ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದು ಭಾರತದಲ್ಲೇ ಅಗ್ರಸ್ಥಾನವನ್ನು ಸ್ಥಾನ ಪಡೆದಿದೆ.



ಜಾಗತಿಕ ಡೇಟಾ ಸಂಸ್ಥೆಯಾದ ನಂಬಿಯೊ ಪ್ರಕಟಿಸಿದ 2025ರ ಮಧ್ಯಭಾಗದ ಸುರಕ್ಷತಾ ಸೂಚ್ಯಂಕ ವರದಿಯನ್ನು ಬಿಡುಗಡೆಗೊಳಿಸಿದೆ. ಈ ಪಟ್ಟಿಯಲ್ಲಿ ಮಂಗಳೂರು 74.2 ಸುರಕ್ಷತಾ ಅಂಕದೊಂದಿಗೆ ಜಾಗತಿಕ ಮಟ್ಟದಲ್ಲಿ 49 ನೇ ಸ್ಥಾನ ಪಡೆದುಕೊಂಡಿದ್ದು, ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಕಡಿಮೆ ಅಪರಾಧ ಪ್ರಕರಣಗಳು ಸೇರಿದಂತೆ ಉತ್ತಮ ಮೂಲಸೌಕರ್ಯಗಳಿಂದಲೇ ಈ ಕಡಲನಗರಿ ಮಂಗಳೂರು ಭಾರತದಲ್ಲಿ ಮೊದಲ ಸುರಕ್ಷಿತ ನಗರವೆನ್ನುವ ಖ್ಯಾತಿಗೆ ಪಾತ್ರವಾಗಿದೆ.

ಏಳು ನಾಯಿಗಳ ಜತೆ ಮಗನನ್ನು ಬಿಟ್ಟು ಎರಡು ವಾರಗಳ ಕಾಲ ಟ್ರಿಪ್‌ಗೆ ಹೋದ ಮಹಿಳೆ

ವಾಷಿಂಗ್ಟನ್: ತನ್ನ ಹುಟ್ಟುಹಬ್ಬ ಆಚರಿಸಿಕೊಳ್ಳುವ ಸಲುವಾಗಿ ಮಹಿಳೆಯೊಬ್ಬಳು ತನ್ನ ಮಗ ಹಾಗೂ ಆತನ ಜತೆ ಏಳು ನಾಯಿಗಳನ್ನು ಬಿಟ್ಟು ಎರಡು ವಾರಗಳ ಕಾಲ ಟ್ರಿಪ್‌ಗೆ ಹೋಗಿದ್ದರು.



ಇದು ಲಾಸ್ ವೇಗಾಸ್‌ನಲ್ಲಿ ನಡೆದ ಘಟನೆ. ಫ್ಲೋರಿಡಾದ ಮಹಿಳೆಯೊಬ್ಬರು ತನ್ನ ಮಗ ಹಾಗೂ ಏಳು ನಾಯಿಯನ್ನು ಬಿಟ್ಟು ಎರಡು ವಾರಗಳ ಕಾಲ ಟ್ರಿಪ್‌ಗೆ ಹೋಗಿದ್ದರು. ಕೆಲವು ನಾಯಿಗಳು ಹಾಲ್‌ನಲ್ಲಿದ್ದರೆ ಇನ್ನೂ ಕೆಲವು ನಾಯಿಗಳು ರೂಮಿನಲ್ಲಿದ್ದವು, ಎಲ್ಲವೂ ಶೋಚನೀಯ ಸ್ಥಿತಿಯಲ್ಲಿದ್ದವು. ಜುಲೈ 21 ರಂದು ಆಕೆ ಲಾಸ್ ವೇಗಾಸ್‌ಗೆ ಹುಟ್ಟುಹಬ್ಬವನ್ನು ಆಚರಿಸಲು ಹೋಗಿದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ನಾನು ರಜೆಗೆ ಹೋಗಿದ್ದೆ ಈಗ ಬಂದಿದ್ದೇನೆ ಎಂದು ಮಹಿಳೆ ಹೇಳಿದ್ದಾಳೆ. ಆದರೆ ಇದು ಕೇವಲ ಎರಡು ವಾರಗಳ ಘಟನೆಯಲ್ಲ ನಾಯಿಗಳ ಸ್ಥಿತಿ ನೋಡಿದರೆ ಮೊದಲಿನಿಂದಲೂ ಅವುಗಳಿಗೆ ಆಹಾರ ಕೊಟ್ಟಂತೆ ಕಾಣುತ್ತಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ಶ್ರೀಕ್ಷೇತ್ರ ಧರ್ಮಸ್ಥಳ, ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ವಿರುದ್ಧ ಅಪಪ್ರಚಾರ

ಭಕ್ತ ಸಮೂಹದಿಂದ ಬೃಹತ್ ಪ್ರತಿಭಟನೆ

ಮಡಿಕೇರಿ,ಆ.8– ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲ ತಾಣಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಅಪಪ್ರಚಾರದಿಂದ ಹಿಂದೂ ಧರ್ಮೀಯರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟಾಗಿದೆ ಎಂದು ಆರೋಪಿಸಿ ಶ್ರೀ ಕ್ಷೇತ್ರದ ಭಕ್ತ ಸಮೂಹ ಬೃಹತ್ ಪ್ರತಿಭಟನೆ ನಡೆಸಿತು.

ಶ್ರೀ ಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆ ಶುಕ್ರವಾರ ಬೆಳಗ್ಗೆ ನೂರಾರು ಭಕ್ತಾದಿಗಳ ಸಮ್ಮುಖದಲ್ಲಿ ಘೋಷಣೆಗಳ ಸಹಿತ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಿ ಶ್ರೀ ಕ್ಷೇತ್ರಕ್ಕೆ ಕಳಂಕ ತರಲು ಒಳ ಸಂಚು ರೂಪಿಸುತ್ತಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿತು.

ಗಾಂಧಿ ಮೈದಾನದಲ್ಲಿ ನಡೆದ ಜನಾಗ್ರಹ ಸಭೆಯಲ್ಲಿ ವೇದಿಕೆಯ ಪ್ರಮುಖ ಧನಂಜಯ ಅಗೋಳಿಕಜೆ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಿಂದು ಧಾರ್ಮಿಕ ಕೇಂದ್ರಗಳ ಮೇಲೆ ಸಾಮಾಜಿಕ ಜಾಲ ತಾಣಗಳ ಮೂಲಕ ನಿರಂತರ ದಾಳಿಗಳನ್ನು ಮಾಡಲಾಗುತ್ತಿದೆ. ಆ ಮೂಲಕ ಒಂದು ಸುಳ್ಳನ್ನು ಹತ್ತಾರು ಬಾರಿ ಹೇಳಿ ಸತ್ಯವನ್ನಾಗಿಸುವ ಪ್ರಯತ್ನ ನಡೆಯುತ್ತಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ನಾಡಿನ ಉದ್ದಗಲಕ್ಕೂ ಜನೋಪಯೋಗಿ ಯೋಜನೆ ಗಳ ಅನು ಷ್ಠಾನದ ಮೂಲಕ ಮಹಿಳಾ ಸ್ವಾವಲಂಬನೆ, ಬಡವರ್ಗದ ಪ್ರಗತಿ, ಶಿಕ್ಷಣ ಕೇಂದ್ರಗಳ ಪ್ರಗತಿಗೆ ಸಾಕಷ್ಟು ಒತ್ತು ನೀಡಿ ಮತ ಪಂಥಗಳನ್ನು ಮೀರಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಇಂಥವರ ವಿರುದ್ಧ ಮತ್ತು ಕ್ಷೇತ್ರಕ್ಕೆ ಕಳಂಕ ತರುವ ಪ್ರಯತ್ನ ನಡೆಯು ತ್ತಿದೆ. ಇದರ ವಿರುದ್ಧ ಭಕ್ತ ಸಮೂಹ ಸಂಘಟಿತವಾಗಿ ಶಕ್ತಿಯುತವಾಗಿ ಎದ್ದು ನಿಲ್ಲಲಿದೆಯೆಂದು ಸ್ಪಷ್ಟಪಡಿಸಿದರು.

ವಿಹೆಚ್‌ಪಿ ಮಾಜಿ ಜಿಲ್ಲಾಧ್ಯಕ್ಷ ಕೆ.ಎಸ್.ದೇವಯ್ಯ ಮಾತನಾಡಿ, ಹಿಂದೂ ಧಾರ್ಮಿಕ ಕೇಂದ್ರಗಳ ವಿರುದ್ಧದ ಅಪಪ್ರಚಾರಗಳಿಗೆ ಹಿಂದು ಬಾಂಧವರು ಎಂದಿಗೂ ಕಿವಿಗೊಡುವುದು ಬೇಡ ಎಂದರು. ಕೊಡಗು ಜಿಲ್ಲಾ ದೈವ ನರ್ತಕರು ಮತ್ತು ದೈವ ಆರಾಧಕರ ಸಂಘದ ಅಧ್ಯಕ್ಷ ಪಿ.ಎಂ.ರವಿ ಮಾತನಾಡಿ, ಕೆಲ ವರ್ಷಗಳಿಂದ ಧರ್ಮಸ್ಥಳ ಕ್ಷೇತ್ರದ ಬಗ್ಗೆ ನಿರಂತರವಾಗಿ ಅಪಪ್ರಚಾರಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಈ ಬಗ್ಗೆ ಎಚ್ಚೆತ್ತುಕೊಳ್ಳುವ ಕಾಲ ಇದೀಗ ಕೂಡಿ ಬಂದಿದೆ ಎಂದು ಹೇಳಿದರು.

ಜನ ಜಾಗೃತಿ ವೇದಿಕೆಯ ಜಿಲ್ಲಾ ಸಂಚಾಲಕ ಎ.ಟಿ.ರಂಗಸ್ವಾಮಿ ಮಾತನಾಡಿ, ಮಡಿಕೇರಿಯಲ್ಲಿ ಆರಂಭವಾಗಿರುವ ಜನಾಗ್ರಹ ಕೂಗು ರಾಜ್ಯದ 31 ಜಿಲ್ಲೆ ಗಳಲ್ಲೂ ಮೊಳಗಲಿದೆ ಎಂದು ಹೇಳಿದರು. ಸಭೆಯ ಬಳಿಕ ಮೆರವಣಿಗೆಯಲ್ಲಿ ತೆರಳಿದ ಭಕ್ತಾದಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಒತ್ತಾಯಗಳು: ಶ್ರೀ ಧರ್ಮ ಸ್ಥಳ ಕ್ಷೇತ್ರ ಮತ್ತು ಧರ್ಮಾಧಿಕಾರಿಗಳಿಗೆ ಸಂಬಂಧಿಸಿದಂತೆ ಗಿರೀಶ್ ಮಟ್ಟಣ್ಣನವರ್, ಮಹೇಶ್‌ಶೆಟ್ಟಿ ತಿಮ ರೋಡಿ, ಸಂತೋಷ್ ಶೆಟ್ಟಿ, ಟಿ.ಜಯಂತ್ ಸಾಮಾಜಿಕ ಜಾಲ ತಾಣದಲ್ಲಿ ಕಳಂಕ ತರುವಂತಹ ವಿಡಿಯೊಗಳನ್ನು ಹರಿ ಬಿಡುವ ಮೂಲಕ ಸಮಾಜವನ್ನು ಒಡೆಯುವ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಪ್ರಯತ್ನ ನಡೆಸುತ್ತಿದ್ದಾರೆ. ಇವರ ಬ್ಯಾಂಕ್ ಖಾತೆಗಳನ್ನು ತನಿಖೆಗೆ ಒಳಪಡಿಸಬೇಕು. ಆರೋಪ ಮಾಡುತ್ತಿರುವವರ ಮೊಬೈಲ್, ಮನೆ ಕಚೇರಿಗಳನ್ನು ತನಿಖೆ ನಡೆಸುವ ಮೂಲಕ ಸತ್ಯಾಂಶವನ್ನು ಬಯಲಿಗೆ ಎಳೆಯಲು ತನಿಖಾ ತಂಡವೊಂದನ್ನು ರಚಿಸಿ ಕ್ರಮ ಕೈಗೊಳ್ಳಬೇಕು. ಇಂಥ ಸುದ್ದಿಗಳು ಸಮೂಹ ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸ ಲಾಗಿದೆ.

ಜನಾಗ್ರಹ ಸಭೆಯಲ್ಲಿ ಶ್ರೀ ಧರ್ಮಸ್ಥಳ ಭಕ್ತಾಭಿಮಾನಿ ಜನಜಾಗೃತಿ ವೇದಿಕೆಯ ಟಿ.ಎಂ.ಅಯ್ಯಪ್ಪ, ಪುಂಡರೀಕಾಕ್ಷ, ರಾಜಶೇಖರ್, ಸತೀಶ್ ಪಾಲ್ಗೊಂಡಿದ್ದರು. ಪ್ರತಿಭಟನಾ ಮೆರವಣಿಗೆಯಲ್ಲಿ ನೂರಾರು ಸಂಖ್ಯೆಯಲ್ಲಿ ಜಿಲ್ಲೆಯ ವಿವಿಧೆಡೆಗಳ ಕ್ಷೇತ್ರದ ಭಕ್ತರು ಪಾಲ್ಗೊಂಡಿದ್ದರು.



ಶ್ರೀ ಧರ್ಮಸ್ಥಳ ಭಕ್ತಾಭಿಮಾನಿಗಳ ವೇದಿಕೆ ಶುಕ್ರವಾರ ಬೆಳಗ್ಗೆ ಶ್ರೀ ಕ್ಷೇತ್ರಕ್ಕೆ ಕಳಂಕ ತರಲು ಒಳ ಸಂಚು ರೂಪಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದರು

ಕಾಡಾನೆ ದಾಳಿಯಿಂದ ಕೂದಲೆಳೆ ಅಂತರದಲ್ಲಿ ಬೈಕ್ ಸವಾರ ಪಾರು

ಸಿದ್ದಾಪುರ: ಮುಖ್ಯ ರಸ್ತೆಯಲ್ಲಿ ತೆರಳುತ್ತಿದ್ದ ಬೈಕ್ ಸವಾರನ ಮೇಲೆ ಕಾಡಾನೆ ದಾಳಿ ನಡೆಸಿ ಬೈಕ್ ಜಖಂಗೊಳಿಸಿದ ಘಟನೆ ಸಿದ್ದಾಪುರ ವ್ಯಾಪ್ತಿಯ ಘಟದಳ್ಳ ಬಳಿ ನಡೆದಿದೆ.

ವಿರಾಜಪೇಟೆ ತಾಲೂಕಿನ ಹಂಚಿತ್ತಿಟ್ಟು ಗ್ರಾಮದ ದಿಲೀಪ್ ಬೈಕ್‌ನಲ್ಲಿ ತೆರಳುತ್ತಿದ್ದಾಗ ಸಿದ್ದಾಪುರ–ಮಾಲ್ದಾರೆ ಮಾರ್ಗದ ಘಟದಳ್ಳ ಮುಖ್ಯ ರಸ್ತೆಯಲ್ಲಿ ಏಕಾಏಕಿ ಕಾಡಾನೆ ಪ್ರತ್ಯಕ್ಷವಾಗಿದೆ. ಕಾಡಾನೆಯನ್ನು ಕಂಡು ದ್ವಿಚಕ್ರ ವಾಹನವನ್ನು ತಿರುಗಿಸಲು ಯತ್ನಿಸಿದ ಸುಂದರ್ಭ ದಿಢೀರ್ ದಾಳಿ ನಡೆಸಿದೆ. ಸವಾರ ದಿಲೀಪ್ ತನ್ನ ದ್ವಿಚಕ್ರವನ್ನು ಸ್ಥಳದಲ್ಲಿ ಬಿಟ್ಟು ಓಡಿ ಕೂದಲೆಳೆಯ ಅಂತರದಲ್ಲಿ ಪ್ರಾಣಪಾಯದಿಂದ ಪಾರಾಗಿದ್ದಾರೆ.

ಆಕ್ರೋಶಗೊಂಡ ಕಾಡಾನೆ ಬೈಕನ್ನು ತುಳಿದು ಸಂಪೂರ್ಣ ಜಖಂಗೊಳಿಸಿದೆ. ಕಾಡಾನೆ ದಾಳಿಯಿಂದ ತಪ್ಪಿಸಿಕೊಳ್ಳಲು ಓಡಿದ ಸಂದರ್ಭ ದಿಲೀಪ್ ಕೆಳ ಬಿದ್ದು ಸಣ್ಣಪುಟ್ಟ ಗಾಯಗಳೊಂದಿಗೆ ಸಿದ್ದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಕಾಡಾನೆ ದಾಳಿ ನಡೆಸಿದ ಘಟನೆಯಿಂದ ಸ್ಥಳೀಯ ಕಾರ್ಮಿಕರು, ವಾಹನ ಸವಾರರು ಭಯಭೀತರಾಗಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಕೊಠಡಿ ಮುಂದೆಯೇ ಈ ಘಟನೆ ನಡೆದಿದ್ದು ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವ ಮೂಲಕ ಸಾರ್ವಜನಿಕರಿಗೆ ರಕ್ಷಣೆ ನೀಡಬೇಕಾಗಿದೆ ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸಮೀರ್ ಒತ್ತಾಯಿಸಿದ್ದಾರೆ.

ಘಟನಾ ಸ್ಥಳಕ್ಕೆ ಉಪ ವಲಯ ಅರಣ್ಯಾಧಿಕಾರಿಗಳು ಹಂಸ, ಶಶಿ, ಆರ್‌ಆರ್‌ಟಿ ತಂಡ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಕಾರ್ಯಾಚರಣೆ ನಡೆಸಿ ಕಾಫಿ ತೋಟದಲ್ಲಿ ಬೀಡುಬಿಟ್ಟಿದ್ದ ಕಾಡಾನೆಯನ್ನು ಕಾಡಿಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.


ಕಾಡಾನೆ ದಾಳಿಯಿಂದ ಜಖಂ ಆದ ಬೈಕ್

ಮಾಲೀಕರಿಗೆ ವಿಮೆ ಪಾವತಿ ವಿಳಂಬ

15.75 ಲಕ್ಷ ರೂ. ಮೊತ್ತ ಪಾವತಿಗೆ ಆದೇಶ

ಮಡಿಕೇರಿ,ಆ.8–ರಸ್ತೆ ಅಪಘಾತದಲ್ಲಿ ಮೃತಪಟ್ಟ ವಾಹನದ ಮಾಲೀಕರಿಗೆ ವಿಮೆ ಪಾವತಿಸಲು ವಿಳಂಬ ಮಾಡಿದ ವಿಮಾ ಸಂಸ್ಥೆಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ 15 ಲಕ್ಷ ರೂ. ವಿಮಾ ಮೊತ್ತ ಮತ್ತು ಒಟ್ಟು 75 ಸಾವಿರ ರೂ.ಗಳ ಪರಿಹಾರ ನೀಡಬೇಕೆಂದು ಆದೇಶಿಸಿದೆ.

ಅಪಘಾತದ ವಾಹನಕ್ಕೆ ವಿಮೆ ನೀಡುವುದಾಗಿ ಹೇಳಿವಂಚಿಸಿದ್ದ ಇಫ್ಕೋ–ಟೋಕಿಯೋ ಜನರಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್‌ಗೆ ಗ್ರಾಹಕರ ವ್ಯಾಜ್ಯ ಪ್ರಕರಣ ನ್ಯಾಯಾಲಯದ ನ್ಯಾಯಾಧೀಶೆ ಡಾ.ಸಿ.ರೇಣುಕಾಂಬ ವಿಮಾ ಮೊತ್ತ, ಪರಿಹಾರ ನೀಡುವಂತೆ ಆದೇಶಿಸಿದೆ.

ಪ್ರಕರಣ ಹಿನ್ನೆಲೆ : ತಾಲೂಕು ಅಂಬಟ್ಟಿ ಗ್ರಾಮ ನಿವಾಸಿ ಎನ್.ಎಂ.ಚೆಂಗಪ್ಪ, ತಮ್ಮ ಮಾರುತಿ ವ್ಯಾಗನಾರ್ ಕಾರಿಗೆ ಓನರ್ ಕಂ ಡ್ರೈವರ್ ಯೋಜನೆ ಅಡಿಯಲ್ಲಿ ಇಫ್ಕೋ–ಟೋಕಿಯೋ ಜನರಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್‌ಗೆವಿಮೆ ಮಾಡಿಸಿದ್ದರು. 2023ರ ಫೆ.13 ರಂದು ಚೆಂಗಪ್ಪ, ಪತ್ನಿ ಮತ್ತು ಮಗನ ಸಹಿತ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಬಿಟ್ಟಂಗಾಲ ಬಳಿ ಕಾರು– ಲಾರಿ ನಡುವೆ ಅಪಘಾತವಾಗಿ ಚೆಂಗಪ್ಪ ಸ್ಥಳದಲ್ಲೇ ಮೃತಪಟ್ಟಿದ್ದರು. ಪತ್ನಿ ಶ್ವೇತ ಗೌರಮ್ಮ ಮತ್ತು ಮಗ ಶ್ರೇಯಸ್ ಸಣ್ಣ ಪುಟ್ಟ ಗಾಯಗಳಿಂದ ಬದುಕುಳಿದಿದ್ದರು.

ಸಂಸ್ಥೆ ವಿರುದ್ಧ ದೂರು ದಾಖಲು : ಪತ್ನಿ ಮತ್ತು ಮಗ ವಿಮಾ ಕಂಪನಿಯನ್ನು ಸಂಪರ್ಕಿಸಿ ವಿಮಾಪಾಲಿಸಿಯ ಕ್ಲೇಮನ್ನು ಕೇಳಿದ್ದರು. ದೂರುದಾರರ ದಾಖಲಾತಿಗಳನ್ನು ಪರಿಶೀಲಿಸಿ ಕ್ಲೇಮನ್ನು ಸೆಟಲ್ ಮಾಡುವುದಾಗಿ ಹೇಳಿ ಸೆಟಲ್ ಮಾಡಿರಲಿಲ್ಲ. ಈ ಸಂಬಂಧ ಶ್ವೇತ ಗೌರಮ್ಮ ಮತ್ತು ಎನ್.ಸಿ.ಶ್ರೇಯಸ್ ಅವರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ದೂರು ದಾಖಲಿಸಿಕೊಂಡ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಉಭಯ ಪಕ್ಷಗಳ ವಾದ ಪ್ರತಿವಾದಗಳನ್ನು ಚರ್ಚಿಸಿ, ದಾಖಲಾತಿಗಳನ್ನು ಪರಿಶೀಲನೆ ನಡೆಸಿತು. ಆಯೋಗದ ಅಧ್ಯಕ್ಷ ಡಾ. ಸಿ.ರೇಣು ಕಾಂಬ ಮತ್ತು ಸದಸ್ಯೆ ಗೌರಮ್ಮಣ್ಣಿ ಅವರು ವಿವಿಧ ಪ್ರಕರಣಗಳ ತೀರ್ಪು ಗಳನ್ನು ಉಲ್ಲೇಖಿಸಿ ದೂರುದಾರರ ವಾಹನ ವಿಮಾ ಮೊತ್ತ 15 ಲಕ್ಷ ರೂ ಹಾಗೂ ಮಾನಸಿಕ ವೇದನೆ ಪರಿಹಾರ ವಾಗಿ 50 ಸಾವಿರ ಮತ್ತು ವ್ಯಾಜ್ಯದ ಖರ್ಚು ವೆಚ್ಚಗಳಿಗೆ 25 ಸಾವಿರ ರೂ. ಪರಿಹಾರ ಪಾವತಿಸುವಂತೆ ಆದೇಶ ನೀಡಿದೆ.

ದೊಡ್ಡಪುಲಿಕೋಟಲ್ಲಿ ಸ್ವಚ್ಛ ಭಾರತ್ ಕಾರ್ಯಕ್ರಮ


ದೊಡ್ಡಪುಲಿಕೋಟು ಗ್ರಾಮ ಹಿತ ರಕ್ಷಣಾ ಸಮಿತಿ ಯಿಂದ ರಸ್ತೆ ಬದಿಯಲ್ಲಿರುವ ಗಿಡಗಂಟಿಗಳನ್ನು ಕಡಿದು ಸ್ವಚ್ಛಗೊಳಿಸಿತು.

ನಾಪೋಕ್ಲು: ಸಮೀಪದ ದೊಡ್ಡಪುಲಿ ಕೋಟು ಗ್ರಾಮ ಹಿತರಕ್ಷಣಾ ಸಮಿತಿ ಆಯೋಜಿಸಿದ್ದ ಸ್ವಚ್ಛ ಭಾರತ್ ಕಾರ್ಯಕ್ರಮದಲ್ಲಿ ಗ್ರಾಮದ ತಂಡ್ರ ಹೊಳೆ ಸೇತುವೆಯಿಂದ ಪ್ರಾರಂಭಿಸಿ ಗ್ರಾಮದ ಮುಖ್ಯರಸ್ತೆಯ ಬದಿಯಲ್ಲಿರುವಂತಹ ಕಸ ಕಡ್ಡಿಗಳು ಗಿಡಗಂಟಿಗಳನ್ನು ಕಡಿದು ಸ್ವಚ್ಛ ಗೊಳಿಸಲಾಯಿತು.

ದೊಡ್ಡಪುಲಿಕೋಟು ಗ್ರಾಮ ಹಿತ ರಕ್ಷಣಾ ಸಮಿತಿಯ ಸಂಚಾಲಕರು ಕರವಂಡ ಲವ ನಾಣಯ್ಯ ಮಾತನಾಡಿ, ಗ್ರಾಮದಲ್ಲಿ ರೆಸಾರ್ಟ್ ನಿರ್ಮಾಣದ ವಿರುದ್ಧ ಗ್ರಾಮ ಹಿತರಕ್ಷಣಾ ಸಮಿತಿ ಹೋರಾಟ ನಡೆಸಿ ರೆಸಾರ್ಟ್ ನಿರ್ಮಾಣವನ್ನು ಸ್ಥಗಿತಗೊಳಿಸಿದೆ. ಗ್ರಾಮದ ಅಭಿವೃದ್ಧಿಯತ್ತಲೂ ಹಿತರಕ್ಷಣ ಸಮಿತಿ ಗಮನಹರಿಸುತ್ತಿದೆ. ಗ್ರಾಮದ ನೆಲ, ಜಲ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಪಂಚಾಯತಿ ಸದಸ್ಯರಾದ ಮುಕ್ಕಾಟಿರ ಸುತನ್ ಸುಬ್ಬಯ್ಯ, ಕರವಂಡ ಅಪ್ಪಣ್ಣ, ಮುಕ್ಕಾಟಿರ ಯತೀಶ್, ಅಪ್ಪಚ್ಚಿರ ತಂಡ್ರಿ ತಮ್ಮಯ್ಯ, ಕರವಂಡ ರವಿ ಬೋಪಣ್ಣ, ಮುಕ್ಕಾಟಿರ ಬಿನ್ನಿ ಮೋಹನ್, ಮುಕ್ಕಾಟಿರ ಬೋಪಣ್ಣ, ಕರವಂಡ ಮನು ಮಾಚಯ್ಯ, ಕರವಂಡ ಸದು ಸುಬ್ಬಯ್ಯ, ಮಣವಟಿರ ಹರೀಶ್ ಅಯ್ಯಪ್ಪ, ಅಪ್ಪಚ್ಚಿರ ದಿನು ತಮ್ಮಯ್ಯ, ಕರವಂಡ ಬೆಲ್ಲು ಬೆಳ್ಳಿಯಪ್ಪ, ಮುಕ್ಕಾಟಿರ ಸತ್ಯ ಸುಬ್ಬಯ್ಯ, ಮುಕ್ಕಾಟಿರ ಪೊನ್ನಣ್ಣ, ಮುಕ್ಕಾಟಿರ ಸಂಪತ್, ಮುಕ್ಕಾಟಿರ ಬೆಲ್ಲು ಪೂಣಚ್ಚ, ಮುಕ್ಕಾಟಿರ ಜಾಲಿ ಚಿಂಗಪ್ಪ ಕರುವಂಡ ಸತೀಶ್ ಸುಬ್ಬಯ್ಯ, ಕೋಟೆರ ಎಂ.ಕಿಶೋರ್, ಕೋಟೆರಯು ಶಿವಪ್ರಸಾದ್, ಪೆಬ್ಬಟ್ಟಿರ ಶೀತಲ್ ಕಾರ್ಯಪ್ಪ ರಕ್ಷಣಾ ಸಮಿತಿಯ ಸದಸ್ಯರಿದ್ದರು.

ಶಾಲೆಗೆ ಮಕ್ಕಳು ಮರಳಿ ಬರಲು ಕ್ರಮಕ್ಕೆ ನಿರ್ಧಾರ

ವಿರಾಜಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಮತ್ತು ಕಿರಿಯ ಪ್ರಾಥಮಿಕ ಸರಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿ ಕೊಡುವ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಬರಲು ಕ್ರಮ ಕೈಗೊಳ್ಳುವಂತೆ ಬೇಟೋಳಿ ಗ್ರಾಮ ಪಂಚಾಯಿತಿ ತ್ರೈಮಾಸಿಕ ಕೆ.ಡಿ.ಪಿ. ಸಭೆಯಲ್ಲಿ ತೀರ್ಮಾನಿಸಲಾಯಿತು.

ಬೇಟೋಳಿ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಅಧ್ಯಕ್ಷತೆಯಲ್ಲಿ ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಕುಡಿ ಯುವ ನೀರಿನ ಬಗ್ಗೆ ಚರ್ಚೆ ನಡೆದು ಜಲಜೀವನ್ ಮಿಷನ್ ಯೋಜನೆ ಮೂರು ವರ್ಷದ ಹಿಂದೆ ಪ್ರಾರಂಭಗೊಂಡ ಕಾಮಗಾರಿ ಮುಕ್ತಾಯಗೊಂಡಿಲ್ಲ ಕೂಡಲೇ ಮುಗಿಸುವಂತೆ ಸೂಚಿಸಲಾಯಿತು

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಣಿ ಮಾತನಾಡಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತ್ರೈಮಾಸಿಕ ಸಭೆಯನ್ನು ವಿವಿಧ ಇಲಾಖೆಗಳಿಂದ ಸರ್ಕಾರದ ಯೋಜನೆಗಳು ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದ್ದು ಕೆಲ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುವುದರಿಂದ ಇಲಾಖೆಯ ಯೋಜನೆಗಳ ಮಾಹಿತಿ ಈ ಸಭೆಗೆ ದೊರಕದ ಕಾರಣ ಮುಂದಿನ ಸಭೆಗೆ ಪಡೆದುಕೊಳ್ಳುವಂತಾಗಿದೆ ಎಂದರು.

ಬೇಟೋಳಿ ಪಂಚಾಯಿತಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ಅಯಿಶಾ ಮಾತನಾಡಿ, 15ನೇ ಹಣಕಾಸಿನಿಂದ ವೈದ್ಯಕೀಯ ವೆಚ್ಚ, ಅಂಗವಿಕಲ ಇಲಾಖೆಯಿಂದ ಶ್ರವಣ ಸಾಧನ ಬ್ರೈಲ್ ಕಿಟ್, ವೀಲ್‌ಚೇರ್, ಆಧಾರ್ ಯೋಜನೆಯಲ್ಲಿ ದ್ವಿಚಕ್ರ ವಾಹನ, ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹ ಧನ ಶೌಚಾಲಯ ಸೌಲಭ್ಯಗಳನ್ನು ವಿಕಲಚೇತನರಿಗೆ ಕಲ್ಪಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಕಂದಾಯ ಇಲಾಖೆ ಅಧಿಕಾರಿ ಸಾವಿತ್ರಿ ಮಾತನಾಡಿದರು.

ಅಧಿಕಾರಿಗಳು ಗೈರು: ಕೃಷಿ ಇಲಾಖೆ, ತೋಟಗಾರಿಕೆ, ಮೀನುಗಾರಿಕೆ ಇಲಾಖೆ, ಪಂಚಾಯತ್ ರಾಜ್, ಪೊಲೀಸ್ ಇಲಾಖೆ, ಪಶುಸಂಗೋಪನಾ ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದ ಕಾರಣ ಮುಂದಿನ ಸಭೆಗೆ ಹಾಜರಾಗುವಂತೆ ಪತ್ರದ ಮೂಲಕ ತಿಳಿಸುವುದಾಗಿ ಸಭೆ ತೀರ್ಮಾನಿಸಿತು.

ವೇದಿಕೆಯಲ್ಲಿ ಬೇಟೋಳಿ ಗ್ರಾಪಂ ಸದಸ್ಯರಾದ ವೈ.ಎಂ.ಶಾಂತಿ, ಎ.ಎ.ವಸಂತ ಕಟ್ಟಿ, ಎಂ.ಎಂ.ರಜಾಕ್, ಎಂ.ಎಂ.ರಂಜಿತ್, ಬಿ.ಜೆ.ಯಶೋದ, ಸಿ.ಎಸ್.ಸುದೀಶ್, ಕೆ.ಆರ್.ಲತಾ, ಪಿ.ಎಂ.ಲಕ್ಷ್ಮಿ, ಗ್ರಂಥಾಲಯ ಮೇಲ್ವಿಚಾರಕರು ಭಾಗವಹಿಸಿ ಸಭೆಯಲ್ಲಿ ಮಾತನಾಡಿದರು.


ಬೇಟೋಳಿ ಗ್ರಾಪಂ ಅಧ್ಯಕ್ಷ ಅಚ್ಚಪಂಡ ಎಂ.ಬೋಪಣ್ಣ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ನಡೆಯಿತು.

ಇಂದು ಶ್ರೀ ಭೂಲಕ್ಷ್ಮೀ ವರಾಹ ಸ್ವಾಮಿ ದೇಗುಲ ಉದ್ಘಾಟನೆ


ಲೋಕಾರ್ಪಣೆಗೆ ಸಿದ್ಧಗೊಂಡಿರುವ ಶ್ರೀ ಭೂಲಕ್ಷ್ಮಿ ವರಾಹಸ್ವಾಮಿ ದೇಗುಲ

ಯಳಂದೂರು, ಆ.8(ವಿ.ನಾಗರಾಜು)– ಎರಡು ಶತಮಾನದ ಐತಿಹ್ಯವಿರುವ ಶ್ರೀ ಭೂಲಕ್ಷ್ಮಿ ವರಾಹಸ್ವಾಮಿ ದೇಗುಲವನ್ನು ವೈದ್ಯ ಕುಟುಂಬವೊಂದು ನವೀಕರಣಗೊಳಿಸಿದ್ದು ಇದರ ಉದ್ಘಾಟನೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಡಾ. ರಮೇಶ್ ಉಡುಪ, ಡಾ.ಶಶಿಕಲಾ ರಮೇಶ್ ಕುಟುಂಬದವರು ಕೋಟಿ ರೂ.ಗೂ ಹೆಚ್ಚಿನ ಹಣವನ್ನು ವ್ಯಯಿಸಿ ಇದನ್ನು ಜೀರ್ಣೋದ್ಧಾರ ಮಾಡಿ ಆ. 9 ರಿಂದ 11 ರವರೆಗೆ ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಗಳನ್ನು ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಭೂ ಲಕ್ಷ್ಮಿ ವಿಶೇಷ : ನೆರೆಯ ಆಂಧ್ರ ಪ್ರದೇಶದ ತಿರುಪತಿಯಲ್ಲಿ ಶ್ರೀ ಭೂ ಲಕ್ಷ್ಮೀ ಸಮೇತವಾಗಿ ವರಾಹಸ್ವಾಮಿ ಮೂರ್ತಿಯನ್ನು ನೋಡುವುದನ್ನು ಬಿಟ್ಟರೆ ನಮ್ಮ ರಾಜ್ಯದಲ್ಲಿ ಬೇರೆಲ್ಲೂ ನೋಡಲು ಸಾಧ್ಯವಿಲ್ಲ. ಇದು ಯಳಂದೂರಿನಲ್ಲಿ ಮಾತ್ರವಿದೆ. ಈ ದೇಗುಲ ಭೂ ವ್ಯಾಜ್ಯ, ರಾಹು ದೋಷ, ಕೇತು ದೋಷ, ವಿವಾಹ ಯೋಗ, ಸಂತಾನ ಭಾಗ್ಯ ಹೀಗೆ ಸರ್ವ ಸಂಕಷ್ಟಗಳನ್ನು ದೂರ ಮಾಡುತ್ತಾನೆ ಎನ್ನುವ ಪ್ರತೀತಿಯನ್ನು ಹೊಂದಿದೆ.

ಇಡೀ ಕುಟುಂಬವೇ ವೈದ್ಯರು: ಡಾ. ರಮೇಶ್ ಉಡುಪ ಮೂಲ ಉಡುಪಿಯವರಾದರೂ 1977ರಿಂದಲೂ ಪಟ್ಟಣದಲ್ಲಿ ತಮ್ಮ ಅಶ್ವಿನಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿ ದ್ದಾರೆ. ಹಾಗೆ ಇವರ ಮಡದಿ ಡಾ. ಶಶಿಕಲಾ ರಮೇಶ್ ಮದುವೆಯಾದ ಬಳಿಕ ಎಂಬಿಬಿಎಸ್ ಪದವಿ ಮುಗಿಸಿ 1987ರಿಂದಲೂ ವೈದ್ಯ ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಮಗಳು ಹಾಗೂ ಅಳಿಯ ಡಾ. ಮೇಘಾ ಉಡುಪ ರೆಡಿಯೋಲಜಿಸ್ಟ್ ಆಗಿದ್ದಾರೆ. ಇವರ ಮಗ ಡಾ. ಕಾರ್ತಿಕ್ ಉಡುಪ ಮೂತ್ರಪಿಂಡ ತಜ್ಞರಾಗಿದ್ದರೆ, ಸೊಸೆ ಡಾ.ಮೇಘಾ ಕಾರ್ತಿಕ್ ಚರ್ಮರೋಗ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ದೇಗುಲ ದರ್ಶನಕ್ಕೆ ಬಂದಾಗ ಶಿಥಿಲವಾಗಿರುವುದು ನೋಡಿ ಜೀರ್ಣೋದ್ಧಾರ ಮಾಡಬೇಕೆಂದು ಮನಸ್ಸಾಯಿತು. ವರ್ಷದಿಂದ ಕಾಮಗಾರಿ ನಡೆದು ಈಗ ಕೆಲಸ ಮುಗಿದಿದೆ. ಕೋಟಿ ರೂ.ಗೂ ಹೆಚ್ಚು ಖರ್ಚಾಗಿದೆ ಎಂದರು


ಡಾ. ಶಶಿಕಲಾ, ಡಾ. ರಮೇಶ್ ಉಡುಪ

ಚಾ.ನಗರ ಜಿಲ್ಲಾದ್ಯಂತ ಶ್ರದ್ಧಾ–ಭಕ್ತಿಯ ವರಮಹಾಲಕ್ಷ್ಮಿ ಹಬ್ಬ ಆಚರಣೆ

ಚಾಮರಾಜನಗರ, ಆ. 8–ಜಿಲ್ಲೆಯಾದ್ಯಂತ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವನ್ನು ಸಂಭ್ರಮ, ಸಡಗರ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು, ಹನೂರು ಸೇರಿ ದಂತೆ ಗ್ರಾಮೀಣ ಪ್ರದೇಶಗಳಲ್ಲಿ ವರಮಹಾ ಲಕ್ಷ್ಮೀ ವ್ರತಾಚರಣೆಯನ್ನು ಮಹಿಳೆಯರು ಸಂಭ್ರಮದಿಂದ ಆಚರಿಸಿದರು. ಮನೆ–ಮನೆಗಳಲ್ಲಿ ಹಬ್ಬದ ವಾತಾವರಣ ಕಂಡು ಬಂತು. ಮನೆ ಗಳನ್ನು ಬಾಳೆ ಕಂದು, ಮಾವಿನ ಸೊಪ್ಪು, ಕಬ್ಬಿನ ಸೋಗಿನ ತೋರಣಗಳಿಂದ ಸಿಂಗರಿಸಲಾಗಿತ್ತು. ಮನೆಗಳ ಮುಂಭಾಗ ಮಹಿಳೆಯರು ಆಕರ್ಷಕವಾಗಿ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಹಬ್ಬಕ್ಕೆ ಕಳೆ ಕಟ್ಟಿಸಿದರು.

ಹೊಸ ಸೀರೆ ಧರಿಸಿ ಕಂಗೊಳಿಸುತ್ತಿದ್ದ ಸುಮಂಗಲಿಯರು ಮನೆಗಳಲ್ಲಿ ಮಹಾಲಕ್ಷ್ಮೀ ವಿಗ್ರಹ ಸ್ಥಾಪಿಸಿ, ಹೂವು, ಚಿನ್ನಾಭರಣಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿದರು. ಇವರಿಗೆ ಹೆಣ್ಣು ಮಕ್ಕಳು ಜೊತೆಯಾದರು. ಹಬ್ಬದ ವಿಶೇಷವಾಗಿ ಮನೆಯಲ್ಲಿ ಒಬ್ಬಟ್ಟು, ಚಕ್ಕುಲಿ, ಕೋಡುಬಳೆ, ಕರ್ಜಿಕಾಯಿ, ಪಾಯಸ ಇತರೆ ವಿಶೇಷ ತಿಂಡಿ, ತಿನಿಸುಗಳನ್ನು ತಯಾರಿಸಿ ಮಹಾಲಕ್ಷ್ಮೀಗೆ ನೈವೇದ್ಯ ಅರ್ಪಿಸಿದರು. ನಗ, ನಾಣ್ಯಗಳನ್ನು ಲಕ್ಷ್ಮಿ ಮುಂದೆ ಇಟ್ಟು ಪ್ರಾರ್ಥಿಸಿದರು. ಸಂಜೆ ಮುತ್ತೈದೆಯರನ್ನು ಮನೆಗೆ ಕರೆದು, ಅವರಿಗೆ ಅರಿಸಿನ, ಕುಂಕುಮ, ಬಳೆ ಹಾಗೂ ಸಿಹಿಯನ್ನು ನೀಡಿ ಶುಭಾಶಯಗಳನ್ನು ಹಂಚಿಕೊಂಡರು

ದೇವಾಲಯಗಳಲ್ಲಿ ವಿಶೇಷ ಪೂಜೆ: ಇನ್ನೂ ವರಮಹಾಲಕ್ಷ್ಮೀ ಹಬ್ಬದ ಅಂಗವಾಗಿ ನಗರದ ಹೊರವಲಯದಲ್ಲಿರುವ ಕರಿವರದರಾಜಸ್ವಾಮಿ ಬೆಟ್ಟ, ಗುಂಡ್ಲುಪೇಟೆ ವೃತ್ತದ ಸಮೀಪದ ಶ್ರೀದೇವಿ ಭೂದೇವಿ ಸಮೇತ ವರಾಹಸ್ವಾಮಿ, ಹಳೆ ಖಾಸಗಿ ಬಸ್ ನಿಲ್ದಾಣದಲ್ಲಿರುವ ಲಕ್ಷ್ಮೀಕಾಂತಸ್ವಾಮಿ ದೇವಾಲಯ, ಹರಳು ಕೋಟೆ ಜನಾರ್ದನ ಸ್ವಾಮಿ, ಆಂಜನೇಯ ಸ್ವಾಮಿ, ಸಂತೇಮರಹಳ್ಳಿ ವೃತ್ತದಲ್ಲಿನ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ದೇವಾಲಯ ಹಾಗೂ ಕೊಳದ ಬೀದಿಯಲ್ಲಿರುವ ಗಣಪತಿ ದೇವಾಲಯ, ಆಂಜನೇಯ ಸ್ವಾಮಿ, ಶನೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಇನ್ನು ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಹುಲುಗನಮುರಡಿ ವೆಂಕಟರಮಣ ಸ್ವಾಮಿ, ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿ ರಂಗನಾಥ ಸ್ವಾಮಿ, ಯಳಂದೂರಿನ ಭೂವರಾಹ ನರಸಿಂಹಸ್ವಾಮಿ ದೇವಾಲಯ, ಚಿಕ್ಕಲ್ಲೂರು ಸಿದ್ದಪ್ಪಾಜಿ ದೇವಸ್ಥಾನ, ಕುರುಬನಕಟ್ಟೆ ದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು.

ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿಯೂ ಕೂಡ ಹಬ್ಬದ ಅಂಗವಾಗಿ ಮಾದಪ್ಪನಿಗೆ ವಿಶೇಷ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು. ಭಕ್ತರು ಮಾದಪ್ಪನ ದರ್ಶನ ಪಡೆದು, ತಮ್ಮ ಹರಕೆಗಳನ್ನು ಸಲ್ಲಿಸಿದರು.



ಗುಂಡ್ಲುಪೇಟೆಯಲ್ಲೂ ವರಮಹಾಲಕ್ಷ್ಮಿ ಹಬ್ಬ


ಪಟ್ಟಣದಲ್ಲಿ ವಿಶೇಷ ಅಲಂಕಾರದೊಂದಿಗೆ ದೇವಿಯನ್ನು ಪೂಜಿಸಲಾಯಿತು.

ಗುಂಡ್ಲುಪೇಟೆ, ಆ.8(ಸೋಮ್.ಜಿ)– ಶ್ರಾವಣ ಮಾಸದ ಮೊದಲ ಹಬ್ಬ ಶ್ರೀ ವರ ಮಹಾಲಕ್ಷ್ಮಿ ಹಬ್ಬವನ್ನು ಪಟ್ಟಣ ಹಾಗೂ ತಾಲೂಕಿನಾದ್ಯಂತ ಸಂಭ್ರಮ ಮತ್ತು ಸಡಗರದಿಂದ ಆಚರಣೆ ಮಾಡಲಾಯಿತು.

ಪಟ್ಟಣದ ಬಹುತೇಕ ಮನೆಗಳಲ್ಲಿ ವಿವಿಧ ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕಿ, ತಳಿರು ತೋರಣ ಮತ್ತು ಹೂವುಗಳಿಂದ ಅಲಂಕಾರ ಮಾಡಿ ಲಕ್ಷ್ಮೀದೇವಿಯ ಮುಖವಾಡವನ್ನು ಹಾಕಿ ಚಿನ್ನಾಭರಣವನ್ನು ತೊಡಿಸಿ ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ಹಬ್ಬದ ಹಿನ್ನೆಲೆಯಲ್ಲಿ ಬಂಧು ಮಿತ್ರರನ್ನು ಮನೆಗೆ ಆಹ್ವಾನಿಸಿ ಅರಿಶಿಣ, ಕುಂಕುಮ, ಬಾಳೆ ಹಣ್ಣು ಮತ್ತು ಹಸಿರು ಗಾಜಿನ ಬಳೆಗಳನ್ನು ಕಾಣಿಕೆಯಾಗಿ ನೀಡುವುದರೊಂದಿಗೆ ಸುಮಂಗಲಿರು ವಿಶೇಷ ಪೂಜೆ ಸಲ್ಲಿಸಿ ವಿವಿಧ ಬಗೆಯ ಹಣ್ಣು ಮತ್ತು ನೈವೇದ್ಯವನ್ನು ದೇವಿಗೆ ಅರ್ಪಿಸುವುದರೊಂದಿಗೆ ತಮ್ಮ ಭಕ್ತಿಭಾವವನ್ನು ಮೆರೆದರು.

ಹೆಂಗಸರು ಮತ್ತು ಮಕ್ಕಳು ಹೊಸ ಬಟ್ಟೆಗಳನ್ನು ಧರಿಸಿ ಟಾಕುಟೀಕಿನಿಂದ ಸ್ನೇಹಿತೆಯರ ಮನೆಗಳಿಗೆ ಭೇಟಿ ನೀಡಿ ಕುಂಕುಮವನ್ನು ತೆಗೆದುಕೊಂಡು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದುದು ಸಾಮಾನ್ಯವಾಗಿತ್ತು.

ಬೆಲೆ ಏರಿಕೆ, ಮಳೆ ನಡುವೆಯೂ ಕಳೆ ಕಟ್ಟಿದ ವರಮಹಾಲಕ್ಷ್ಮಿ ಹಬ್ಬ

ಯಳಂದೂರು,ಆ.8(ವಿ.ನಾಗರಾಜು)–ಬೆಲೆ ಏರಿಕೆಯ ನಡುವೆಯೂ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವು ಸಂಭ್ರಮ ಸಡಗರಗಳಿಂದ ನಡೆಯಿತು.

ಬೆಳಿಗ್ಗೆಯಿಂದಲೇ ಪೂಜಾ ಕಾರ್ಯಗಳಲ್ಲಿ ಮಹಿಳೆಯರು ಶ್ರದ್ಧಾ ಭಕ್ತಿಗಳಿಂದ ವರಮಹಾಲಕ್ಷ್ಮಿ ಕಳಶವನ್ನು ಪ್ರತಿಷ್ಠಾಪಿಸಿ ಅದಕ್ಕೆ ಹೊಸ ಸೀರೆ, ಚಿನ್ನ, ಬೆಳ್ಳಿ ಆಭರಣ, ಹೂವು, ಹಣ್ಣುಗಳಿಂದ ಸಿಂಗರಿಸಿದ್ದರು. ತುಪ್ಪದ ದೀಪಗಳು, ಧೂಪಗಳಿಂದ ವಿಶೇಷ ಪೂಜೆ ನೆರವೇರಿಸುತ್ತಿದ್ದ ದೃಶ್ಯ ಅಲ್ಲಲ್ಲಿ ಗೋಚರಿಸುತ್ತಿತ್ತು. ಮನೆ–ಮನೆಗೆ ಹೆಂಗಳೆಯರು ಹಾಗೂ ಮಕ್ಕಳು ಕುಂಕುಮ ವಿನಿಮಯ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಅಲ್ಲಲ್ಲಿ ಕಂಡುಬಂದಿತು.


ತಟ್ಟದ ಬೆಲೆ ಏರಿಕೆ ಬಿಸಿ: ಈ ಬಾರಿ ವರಮಹಾಲಕ್ಷ್ಮಿ ಹಬ್ಬಕ್ಕೆ ಹೂವು ಹಣ್ಣುಗಳ ಬೆಲೆ ಗಗನಕ್ಕೇರಿತ್ತು, ಇದರ ನಡುವೆ ಮಳೆಯೂ ಕಾಡಿತ್ತು, ಆದರೂ ಕೂಡ ಭಕ್ತರ ಸಂಭ್ರಮಕ್ಕೆ ಇವು ಅಡ್ಡಿಯಾಗಲಿಲ್ಲ. ಕನಕಾಂಬರ ಹೂವು, ಹಣ್ಣು ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಾಯಿತು.

ಬೈಕ್‌ಗಳ ನಡುವೆ ಡಿಕ್ಕಿ; ಯೋಧನ ಸಾವು; ಮೂವರಿಗೆ ಗಾಯ

ಚಾಮರಾಜನಗರ: ಎರಡು ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬೈಕ್ ಚಾಲನೆ ಮಾಡುತ್ತಿದ್ದ ಅಗ್ನಿವೀರ ಯೋಧ ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಸವಾರರು ಗಾಯಗೊಂಡಿರುವ ಘಟನೆ ತಾಲೂಕಿನ ಕಮರವಾಡಿ ಸಮೀಪ ನಡೆದಿದೆ.

ನಗರದ ಪ್ರಜ್ವಲ್(21) ಸಾವನ್ನಪ್ಪಿದ ಯೋಧ ಅಗ್ನಿವೀರ. ಇವರ ಬೈಕ್‌ನ ಹಿಂಬದಿ ಸವಾರ ರೋಹಿತ್ ಹಾಗೂ ಮತ್ತೊಂದು ಬೈಕ್‌ನ ಸವಾರರಾದ ಸುಭಾಷ್, ಮಹದೇವಸ್ವಾಮಿ ಗಾಯಗೊಂಡಿದ್ದಾರೆ.

ಘಟನೆಯ ವಿವರ: ಸೇವಾ ಭಾರತಿ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಾಮಚಂದ್ರರ ಪುತ್ರ ಪ್ರಜ್ವಲ್ ಪಶ್ಚಿಮ ಬಂಗಾಳದಲ್ಲಿ ಅಗ್ನಿವೀರ ಆಗಿ ಕೆಲಸ ಮಾಡುತ್ತಿದ್ದು, ರಜೆ ಮೇಲೆ ನಗರಕ್ಕೆ ಬಂದಿದ್ದರು. ವೈಯಕ್ತಿಕ ಕಾರ್ಯ ನಿಮಿತ್ತ ಪ್ರಜ್ವಲ್ ಮೈಸೂರಿಗೆ ಹೋಗಿ ವಾಪಸ್ ನಗರಕ್ಕೆ ಬೈಕ್‌ನಲ್ಲಿ ಸ್ನೇಹಿತ ರೋಹಿತ್‌ನೊಂದಿಗೆ ಟಿ.ನರಸೀಪುರ ಮಾರ್ಗವಾಗಿ ಬರುತ್ತಿದ್ದಾಗ ಕಮರವಾಡಿ ಬಳಿ ಎದುರಿನಿಂದ ಮತ್ತೊಂದು ಬೈಕ್‌ಗೆ ಮುಖಾಮುಖಿ ಡಿಕ್ಕಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ಪ್ರಜ್ವಲ್ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಸ್ನೇಹಿತ ರೋಹಿತ್ ಹಾಗೂ ಮತ್ತೊಂದು ಬೈಕ್‌ನ ಸವಾರರಾದ ಸುಭಾಷ್, ಮಹದೇವಸ್ವಾಮಿ ಅವರಿಗೆ ಗಾಯಗಳಾಗಿದೆ. ಕೂಡಲೇ ಗಾಯಾಳುಗಳನ್ನು ಸ್ಥಳೀಯರು ಸಂತೇಮರಹಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದ್ದಾರೆ. ಸ್ಥಳಕ್ಕೆ ಸಂತೇಮರಹಳ್ಳಿ ಠಾಣೆಯ ಪೊಲೀಸರು ಭೇಟಿ ನೀಡಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಿಮ್ಸ್‌ಗೆ ರವಾನೆ ಮಾಡಿ, ಬೈಕ್‌ಗಳನ್ನು ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಪ್ರಜ್ವಲ್

ಅನಿಲ ಸೋರಿಕೆಯಾಗಿ ಮನೆಗೆ ಬೆಂಕಿ : ಲಕ್ಷಾಂತರ ರೂ. ನಷ್ಟ

ಚಾಮರಾಜನಗರ : ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತುಕೊಂಡು ಮನೆಯೊಂದು ಸುಟ್ಟು ಹೋಗಿರುವ ಘಟನೆ ತಾಲೂಕಿನ ಬಸವಟ್ಟಿ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ. ಗ್ರಾಮದ ಪುಟ್ಟಮಾದಯ್ಯ ಎಂಬವರ ಮನೆಯು ಸುಟ್ಟು ಹೋಗಿದ್ದು ಲಕ್ಷಾಂತರ ರೂ.ನಷ್ಟ ಸಂಭವಿಸಿದೆ.

ಸಂಜೆ ಪುಟ್ಟಮಾದಯ್ಯ ಅವರ ಪುತ್ರ ಉಮೇಶ್ ಮನೆಯ ಸ್ಟೌವ್‌ಗೆ ಸಿಲಿಂಡರ್ ಜೋಡಿಸಿದ್ದಾರೆ. ಬಳಿಕ ಉಮೇಶ್ ಒಲೆ ಹಚ್ಚಿದ ಕೂಡಲೆ ದಿಢೀರನೆ ಬೆಂಕಿ ಹೊತ್ತಿ ಉರಿದಿದೆ ಉಮೇಶ್ ಕಿರುಚಿಕೊಂಡು ಮನೆಯಿಂದ ಹೊರಗೆ ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ಬೆಂಕಿ ಉರಿ ಬಡಿದು ಕೆನ್ನೆ ಸ್ವಲ್ಪ ಪ್ರಮಾಣದಲ್ಲಿ ಸುಟ್ಟಿದೆ. ಉಮೇಶ್ ಹೊರತುಪಡಿಸಿದರೆ ಮನೆಯೊಳಗೆ ಯಾರೊಬ್ಬರೂ ಇರಲಿಲ್ಲ. ಬೆಂಕಿ ಹೊತ್ತುಕೊಂಡಿದ್ದ ಪರಿಣಾಮ ಮನೆ ಬಳಕೆ ವಸ್ತುಗಳು, ಆಸ್ತಿ ಪತ್ರಗಳು, ಪಾತ್ರೆಗಳು, ಬಟ್ಟೆಗಳು, 70 ಸಾವಿರ ನಗದು, 5 ಗ್ರಾಂ ಚಿನ್ನಾಭರಣ, ಟಿವಿ, ಬೀರು, ಮಂಚ, ಮನೆಯ ಮೇಲ್ಛಾವಣಿ ಸುಟ್ಟು ಹೋಗಿವೆ. ಗೋಡೆಗಳು ಬಿರುಕು ಬಿಟ್ಟಿವೆ.

ಅಕ್ಕಪಕ್ಕದವರು ಅಗ್ನಿ ಶಾಮಕ ದಳಕ್ಕೆ ದೂರು ನೀಡಿದ ಮೇರೆಗೆ ಸ್ಥಳಕ್ಕೆ ಆಮಿಸಿದ ಸಿಬ್ಬಂದಿ ಬೆಂಕಿಯನ್ನು ನಂದಿಸಿ ಸಿಲಿಂಡರ್ ಅನ್ನು ಹೊರಗೆ ತಂದರು. ವಿಷಯ ತಿಳಿದ ಗ್ರಾಮ ಆಡಳಿತಾಧಿಕಾರಿ ಸಾನಿಯಾ ಸ್ಥಳಕ್ಕೆ ಆಗಮಿಸಿ ಸಂಭವಿಸಿರುವ ನಷ್ಟದ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಸಂತೇಮರಳ್ಳಿ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ



ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರದ ಬೆಳವಣಿಗೆಗೆ ಕೇಂದ್ರದ ಬದ್ಧತೆ ಸ್ವಾಗತಾರ್ಹ

ಮೈಸೂರು, ಆ. 8 – ಕೇಂದ್ರದ ಶಿಕ್ಷಣ ಖಾತೆ ರಾಜ್ಯ ಸಚಿವ ಡಾ. ಸುಖಾಂತ ಮುಜುಂದಾರ್, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರದ ಬೆಳವಣಿಗೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ನೀಡಿರುವ ಹೇಳಿಕೆಯನ್ನು ಕನ್ನಡ ಕ್ರಿಯಾ ಸಮಿತಿ ಮತ್ತು ಶಾಸ್ತ್ರೀಯ ಕನ್ನಡ ಭಾಷಾ ಹೋರಾಟ ಸಮಿತಿ ಸ್ವಾಗತಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ, ಶಾಸ್ತ್ರೀಯ ಕನ್ನಡ ಭಾಷಾ ಹೋರಾಟ ಸಮಿತಿ ಕಾರ್ಯದರ್ಶಿ ನಾ. ದಿವಾಕರ, ಶಾಸ್ತ್ರೀಯ ಕನ್ನಡ ಭಾಷಾ ಹೋರಾಟ ಸಮಿತಿ ಸದಸ್ಯ ಅರವಿಂದ ಶರ್ಮ ಈ ವಿಷಯದಲ್ಲಿ ಸಾಕಷ್ಟು ಆಸಕ್ತಿಯನ್ನು ತಳೆದಿರುವ ಮೈಸೂರು ಸಂಸದ ಯದುವೀರ್ ಒಡೆಯರ್ ಅವರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ.

ಆದಾಗಿಯೂ ಮಂತ್ರಿಗಳ ಹೇಳಿಕೆಯಲ್ಲಿ ಮೈಸೂರಿನ ಶಾಸ್ತ್ರಿಯ ಭಾಷಾ ಅಧ್ಯಯನ ಕೇಂದ್ರವನ್ನು ಭಾರತೀಯ ಭಾಷಾ ಸಂಸ್ಥೆಯಿಂದ ಪ್ರತ್ಯೇಕಗೊಳಿಸಿ, ಸ್ವಾಯತ್ತೆ ನೀಡುವ ಬಗ್ಗೆ ನಿರ್ದಿಷ್ಟವಾದ ಭರವಸೆ ದೊರೆತಿಲ್ಲ.

ಸರ್ಕಾರವು ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಾಲ್ಕು ಎಕರೆ ಜಾಗವನ್ನು ನೀಡಿರುವ ಬಗ್ಗೆ ದಾಖಲೆಯನ್ನು ಕನ್ನಡ ಕ್ರಿಯಾ ಸಮಿತಿ ಭಾರತೀಯ ಭಾಷಾ ಸಂಸ್ಥೆಯ ನಿರ್ದೇಶಕರಿಗೆ ಸಲ್ಲಿಸಿ, ಮುಂದಿನ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದರೂ ಈವರೆಗೆ ಏನು ಆಗಿಲ್ಲ.

ಈ ವಿಷಯದಲ್ಲಿ ಯದುವೀರ್ ಒಡೆಯರ್ ಅವರು ಇನ್ನೂ ಹೆಚ್ಚಿನ ಆಸಕ್ತಿಯನ್ನು ತಳೆದು ಈ ದಿಸೆಯಲ್ಲಿ ಹೆಚ್ಚಿನ ಕ್ರಮ ಕೈಗೊಳ್ಳಬೇಕೆಂದು ಕೋರಲು ಸಮಿತಿಯ ಪದಾಧಿಕಾರಿಗಳು ಯದುವೀರ್ ಒಡೆಯರ್ ಅವರನ್ನು ಭೇಟಿ ಮಾಡಲು ನಿರ್ಧರಿಸಿರುವುದಾಗಿ ತಿಳಿಸಿದ್ದಾರೆ.

ಮಟ್ಟಿ ಪೂಜೆಗೆ ಹೊಸ ಮಣ್ಣು



ವರಮಹಾಲಕ್ಷ್ಮಿ ಹಬ್ಬದಂದು ಸಂಪ್ರದಾಯದಂತೆ ಮೈಸೂರಿನ ಕೆ.ಜಿ.ಕೊಪ್ಪಲಿನ ವಿವಿಧ ಗರಡಿ ಮನೆಗಳ ಮಟ್ಟಿ ಪೂಜೆಗೆ ಹೊಸ ಮಣ್ಣನ್ನು ತರಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಸೌತ್ ಇಂಡಿಯನ್ ಸಸ್ಯಹಾರಿ ಅಡುಗೆ ಭಟ್ಟರು(ಗಂಡಸರು)
ಸಂಬಳ : 30,000/–
ಸ್ಥಳ : ಮೈಸೂರು
8660834599

SITE FOR SALE
40X23 North facing Site for sale in Panchacharya Layout, attached to Vijayanagar 4th stage. Total 900 sqft 5750 Rupees/sqft.
8884616461
8073300783

ಮನೆ ಬಾಡಿಗೆಗೆ ಇದೆ
1st Floor, 1 BHK, T. K. Layout ,
Mob : 9738444665

RERA APPROVED – RAI ESTATES – MUDA APPROVED – E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಜಾದೂಗಾರ್ ಎಸ್.ಎನ್.ಗುರುಸ್ವಾಮಿ ಮೈಸೂರು ರವರಿಂದ ಗೌರಿಗಣೇಶ ಹಬ್ಬಕ್ಕೆ ಮ್ಯಾಜಿಕ್ ಷೋ ಮತ್ತು ಮಾತನಾಡುವ ಗೊಂಬೆ ಕಾರ್ಯಕ್ರಮ ಮಾಡಲಾಗುತ್ತದೆ ಹಾಗೂ ಕನ್ನಡ ರಾಜ್ಯೋತ್ಸವಕ್ಕೂ ಮಾಡಲಾಗುತ್ತದೆ.
ಸಂಪರ್ಕಿಸಿ: 9886818529, 9448553806

ಬೇಕಾಗಿದ್ದಾರೆ
ಕೇಟರಿಂಗ್ ಹಾಗೂ ಹೋಟೆಲ್ ನಡೆಸುವವರು ಬೇಕಾಗಿದ್ದಾರೆ.
ಪಿ.ರಾಜಪ್ಪ ಕಲ್ಯಾಣ ಮಂಟಪ, ಮೈಸೂರು
9141614633

ಸೈಟುಗಳು ಮಾರಾಟಕ್ಕಿವೆ
30x40 - 35 ಲಕ್ಷ - 30x50 - 42 ಲಕ್ಷ - 40x60 - 65 ಲಕ್ಷ - 40x60 - 1.30 cr, JP ನಗರ ರಿಂಗ್ ರಸ್ತೆ ಹತ್ತಿರ
ಸಂಪರ್ಕಿಸಿ: SKL ಪ್ರಾಪರ್ಟೀಸ್
Mob: 9341624462

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ
53ನೇ ಉಚಿತ ಕುಡಿತ ಬಿಡಿಸುವ ಶಿಬಿರ
ಆಗಸ್ಟ್ 17 ರಿಂದ 26ರ ವರೆಗೆ
88033 44999
97425 59999

SBIT ಟ್ರಾವೆಲ್ಸ್
ಗುಜರಾತ್ ಪ್ರವಾಸ 2025
04 ಅಕ್ಟೋಬರ್:
ವಿಮಾನ ಟಿಕೆಟ್‌ಗಳು | ಹೋಟೆಲ್ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
9343524127
(ಸರಸ್ವತಿಪುರಂ, ಮೈಸೂರು)

Fund ಆರ್ಡರ್ ತೆಗೆದುಕೊಳ್ಳುತ್ತೇವೆ
ಹೋಲ್‌ಸೇಲ್ ದರಗಳಲ್ಲಿ Estimate ಸಹ ಕೊಡುತ್ತೇವೆ. ಉಚಿತ ಡೆಲಿವರಿ ಲಭ್ಯವಿದೆ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ನಜರ್‌ಬಾದ್
Mob: 9739816440

3 ದಿನಗಳ ಶಿರಡಿ ಪ್ರವಾಸ 29/8/25
3 ದಿನಗಳ ಪುರಿ ಪ್ರವಾಸ 15/8/25
4 ದಿನಗಳ ಕಾಶಿ ಪ್ರವಾಸ 29/8/25
9 ದಿನಗಳ ಅಯೋಧ್ಯಾ, ನೇಪಾಳ ಪ್ರವಾಸ 11/9/25
13 ದಿನಗಳ ಚಾರ್ ಧಾಮ್ ಪ್ರವಾಸ 11/9/25
ಸುವರ್ಣ ಯಾತ್ರಾ
9008381022, 6360146483

SITES FOR SALE
30x40, 30x50 MUDA Approved Near Srirampura Ring Road (adjacent to R.T. Nagar)
Mob: 8296832513

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ, ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಚಿನ್ನದ ದರ: 9300/-, 24CT
ಸಂಪರ್ಕಿಸಿ
91081 46123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
30x40 North face House for Sale in Police Layout 95 Lakhs
30x40 West Face Site for Sale Opposite to Naguvinahalli Gate 300mtr from Mys-Blr Old Main Road, 27 Lakhs
9900040570
9945032833

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಉತ್ತಮ ಸಂಬಳ ನೀಡಲಾಗುವುದು.
9880102700

MUDA Approved Site for Sale
Ananda Sagar 40x60 North Face Site No. 65 - M Price: 90 Lakhs.
Mob: 7795017536

House for Sale
2250 sq. feet includes 5 portion house, near KRS Road, Mysore. Brokers Excuse
9164686032, 9980617003

HOUSE FOR SALE
New 3 BHK Independent House, East Face @ Lalithadri Nagar (South) Near Ring Road, Behind Indian Oil Petrol Bunk
Mob: 9110696752 / 9663452259

ಹೊಸ ಮನೆ ಮಾರಾಟಕ್ಕಿದೆ
30x35, 4 BHK
3 ಪ್ಲೆಕ್ಸ್, ದಟ್ಟಗಳ್ಳಿ
ಆದಿತ್ಯ ಸರ್ಕಲ್ ಹತ್ತಿರ, ಮೈಸೂರು
Mob: 7204401199

FOR SALE
30x40 Sites in Bogadi, near Harsha Bar & Vijayanagar 4th Stage
Mob: 8884133677

FOR SALE
40x60 Sites in Vijayanagar 4th Stage.
Mob: 7899214181

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

COMMERCIAL FOR SALE
1. 30x40, 40x60 @ Saraswati Puram
2. 30x40 Dattagalli Ring Road
3. 27x60 & 30x45 Commercial present Old House @ Jayanagar
4. 15x38 G+1 House & 40x60 Old House @ Krishnamurthy Puram
5. 50x80 with Rent Income @ Vijaya Nagar
6. 30x40, 40x60 Kuvempu Nagar

PRAKRUTHI PROPERTIES
95386 90359, 90359 90359

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

NEW HOUSE FOR SALE 20x30
485, S/E House, Ground & First Floor Semi furnished, near ring road, Indian petrol bunk backside, Lalithadrinagar, Mysuru. Contact:
9900145353 / 9008380934

Yuktha Constructions
1) 50x80, N/F Sharada Layout Site for Sale 40 Ft. Road
2) J P Nagar Houses for Sale 30x40
3) 40x40 S/F Site for Sale @ BEML

Brokers Excuse
Mob: 7892381659

ಸೋಲಾರ್ ಸರ್ವೀಸ್ ಅನ್ನು ಕಂಪನಿ ಕಡೆಯಿಂದ 700 ರೂ.ಗೆ 1–8–2025 ರಿಂದ 15–8–2025 ರವರೆಗೆ ಮಾಡಿಕೊಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಸೋನಾಲಿಕಾ ಟ್ರ್ಯಾಕ್ಟರ್ ಷೋರೂಂ ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್, ಮೈಸೂರು, ಬೋಗಾದಿ ರಿಂಗ್ ರೋಡ್ ಜಂಕ್ಷನ್. ಮೈಸೂರು, ನಂಜನಗೂಡು, ಟಿ.ನರಸೀಪುರ ಶಾಖೆಗಳಿಗೆ, ಸೇಲ್ಸ್ ಮ್ಯಾನೇಜರ್, ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
9880111533, 9880999411

ಲಾಲ್‌ಬಹದ್ದೂರ್ ಶಾಸ್ತ್ರಿ ನಗರದಲ್ಲಿ ಗೃಹ ಪ್ರವೇಶಕ್ಕೆ ಸಿದ್ಧವಾಗಿರುವ 30x40 ಅಳತೆಯ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಹಾಗೂ 60x40 ಅಳತೆಯ ಕಮರ್ಷಿಯಲ್ ಸೈಟು ಕೆ.ಬಿ.ಎಲ್ ಗಾರ್ಡನ್, ಮೈಸೂರು, ಎಲ್‌ಬಿಎಸ್ ನಗರ ಹತ್ತಿರ ಮಾರಾಟಕ್ಕಿದೆ.
Mob: 9482072352



SUNZONE SOLAR SYSTEM
VM Double Road, Kuvempunagar, Mysuru
9845175443

REQUIRED
SENIOR WELFARE OFFICER
MALE — Graduate with 5 - 7 years of experience in a Residential College
Remuneration as per Industry norms
ACCOMMODATION with PF & ESI facilities
CONTACT
8105639231

ಹಿತಶ್ರೀ ಡೋರ್ ವರ್ಲ್ಡ್
ನಮ್ಮಲ್ಲಿ ಎಲ್ಲಾ ವಿಧವಾದ Main Door, Room Door, Pooja Door & Wash Room Door ನಲ್ಲಿ ನೂರಾರು ಬಗೆಯ ಹತ್ತಕ್ಕೂ ಹೆಚ್ಚು ಬ್ರಾಂಡ್‌ಗಳ ಡೋರ್‌ಗಳು ದೊರೆಯುತ್ತದೆ ಹಾಗೂ ಪ್ರತಿ ಖರೀದಿಗೆ 1 ಫ್ರೀ ಕೂಪನ್ ದೊರೆಯುತ್ತದೆ
Agrahara Circle - Mysore
9886640503
08214191136

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ TVS Factoryಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು,
ಸಂಬಳ : 18000 + W/o (8hrs)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819 / 9620667819

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
1. ಶ್ರೀರಂಗ ಪಟ್ಟಣ
Qualification - Any degree
Work: Guest handling and property management
ವಸತಿ ಹಾಗೂ ಆಹಾರ ಸಹಿತ ಆಕರ್ಷಕ ಸಂಬಳ ನೀಡಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
+919035719219
yogadhaamamys@gmail.com

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 50 ವರ್ಷಗೊಳಗಿನ ಪುರುಷರು, ಬೈಕ್ ಇರುವಂತವರು ಬೇಕಾಗಿದ್ದಾರೆ. SSLC ವಿದ್ಯಾರ್ಹತೆ ಇರಬೇಕು. ಮೇಟಗಳ್ಳಿ, ಹೆಬ್ಬಾಳು, ವಿಜಯನಗರ, ಗೋಕುಲಂ, ಒಂಟಿಕೊಪ್ಪಲ್, ಕುಂಬಾರಕೊಪ್ಪಲ್, ಪಡುವಾರಹಳ್ಳಿ ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ:
Mob: 7259598615

ಬೇಕಾಗಿದ್ದಾರೆ
ಫರ್ನಿಚರ್ಸ್ ಶೋರೂಂನಲ್ಲಿ ಹೆಲ್ಪರ್ ಮತ್ತು ಡ್ರೈವರ್ಸ್ ಕೆಲಸ ಖಾಲಿ ಇದೆ (ಆಲನಹಳ್ಳಿ ಮತ್ತು ದಟ್ಟಗಳ್ಳಿ) ಬ್ರಾಂಚ್‌ಗೆ. ವಯೋಮಿತಿ 18 ರಿಂದ 40 ವರ್ಷ. ಸಂಬಳ: 15,000.
ESI, PF ಸೌಲಭ್ಯವಿರುತ್ತದೆ.
Mob: 9148851387

HOUSE FOR SALE
20x30 & 30x40 Srirampura / Kuvempunagar.
House for Rent / Lease 20x30 / 30x40Srirampura / Kuvempunagar
Sri Vishnu Properties
Mob: 9840728571

HOUSE FOR RENT
3 bedroom ground floor hosue for rent with solar, Vijayanagar 2nd Stage, near Krishna Devaraya Circle. Contact:
Mob: 9945516373

ಮನೆ ಮಾರಾಟಕ್ಕಿದೆ
ಭೈರವೇಶ್ವರ ನಗರ, ಗಣಪತಿ ಸಚ್ಚಿದಾನಂದ ಆಶ್ರಮ ಹಿಂಭಾಗ, 20X42.5 – ಉತ್ತರ ದಿಕ್ಕು, 12 ಚದರ ಮನೆ.
ಸರ್ವೆ ನಂ 71/4 – 0.10 ಗುಂಟೆ ಜಮೀನು ಮಂಡಕಳ್ಳಿ ಏರಪೋರ್ಟ್ ಹತ್ತಿರ, ನಂಜನಗೂಡು ರಸ್ತೆ, ಮೈಸೂರು
6362413340

HOUSE FOR RENT
15,000/- 2 BHK, GF, N/F # Saayi Sadana, 36/B, 4th Main, 26th Cross Vidyaranyapuram, Mysore
9739039595

ಹೊಸ ಮನೆ ಮಾರಾಟಕ್ಕಿದೆ
20x30 Duplex 3 bedroom Lal Bahadur Shastri Nagar, Mysore.
9742062636 / 8904500433

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಗೊತ್ತಿರುವ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ:
Arthor Services Pvt. Ltd.
#119, 2nd Floor, Panchamantra Road, Kuvempunagar, Opp. Park, above Khadim Shop.
Call: Shekar, 9945911118
Anil: 7026996123

WANTED
LODGE RECEPTIONIST
Contact:
Ph: 0821-2497185

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವುಳ್ಳ ಬಿ.ಕಾಂ ಪದವೀಧರರು ಕೆಲಸಕ್ಕೆ ಬೇಕಾಗಿದ್ದಾರೆ. (ನಿವೃತ್ತ ನೌಕರರು ಕೂಡ ಅರ್ಜಿ ಸಲ್ಲಿಸಬಹುದು) ಸಂಪರ್ಕಿಸಿ:
ನೇಗಿಲಯೋಗಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ (ರಿ), ಜಯನಗರ ಮೈಸೂರು
9731423925 / 9480135637
9611611399

ಹೊಸ ಮನೆ ಮಾರಾಟಕ್ಕಿದೆ
ಶ್ರೀರಾಂಪುರ ಮುಡಾ ಬಡಾವಣೆ ರಿಂಗ್ ರೋಡ್ ಒಳಗೆ, 20x30 ಗ್ರೌಂಡ್ ಫ್ಲೋರ್, 1st Floor top ನಲ್ಲಿ ರೂಂ ಇದೆ. ಒಟ್ಟು 15 ಚ.ಅಡಿ ಬಿಲ್ಡಿಂಗ್ ಇದೆ. Clear Document. 75 Lakhs (Nego.). ಸಂಪರ್ಕಿಸಿ:
9591913785 / 9880859168

ರೂಮುಗಳು ಹಾಗೂ ಜಮೀನು ಬಾಡಿಗೆಗಿದೆ
ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ ಪೀಠೋಪಕರಣಗಳ ಸಮೇತ 20X10 ಅಳತೆಯ 8ರೂಮುಗಳು ಹಾಸ್ಟೆಲ್‌ಗೆ, ಶಾಲೆ, ಪಿಜಿಗೆ ಹಾಗೂ ಬೋಗಾದಿ ರಸ್ತೆಯಲ್ಲಿ ಅಲಿನೇಶನ್ ಆಗಿರುವ 1 1/4 ಎಕರೆ ಜಮೀನು ಬಾಡಿಗೆಗಿದೆ.
8197609290

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 3ನೇ ಹಂತದಲ್ಲಿ ಮುನ್ಸಿಪಾಲ್ ಇ– ಖಾತಾ ಹೊಂದಿರುವ ಇಂಡಿಪೆಂಡೆಂಟ್ ಈಸ್ಟ್ ಫೇಸಿಂಗ್ 11000 ಚದರಡಿಯ ಡ್ಯುಪ್ಲೆಕ್ಸ್ ಮನೆ 20X30ರ ಸೈಟಿನಲ್ಲಿದ್ದು, ಮಾರಾಟಕ್ಕಿದೆ.
9342119411, 9901491006

ಹೊಸ ಮನೆ ಮಾರಾಟಕ್ಕಿದೆ
1900 ಪ್ರತಿ ಚದರಡಿಗೆ 24 ಚದರ ಮನೆ, 3 ಬೆಡ್ ರೂಂಗಳು ಈಸ್ಟ್ ನಾರ್ಥ್ ಕಾರ್ನರ್, 40 ಅಡಿ ರಸ್ತೆ, 2ನೇ ಮೇನ್, ವಿಜಯನಗರ 1ನೇ ಹಂತ, ಮೈಸೂರು. ರೂ. 3 ಕೋಟಿ 20 ಲಕ್ಷ. ಸ್ವಲ್ಪ ನೆಗೋಷಿಯೇಬಲ್.
8050257887 / 8762705887

ಬೇಕಾಗಿದ್ದಾರೆ
ಮೈಸೂರಿನ ಜೆ.ಪಿ. ನಗರ ಹತ್ತಿರ ಇರುವ ಸಂಸ್ಥೆಗೆ ಹಗಲು ಮತ್ತು ರಾತ್ರಿ 12 ಗಂಟೆ ಕೆಲಸ ಮಾಡುವ ಪುರುಷ, ವಿದ್ಯಾವಂತ ಹಾಗೂ 40 ರಿಂದ 60 ವರ್ಷ ವಯಸ್ಸು ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ ಹೆಡ್‌ಗಾರ್ಡ್ ರೂ. 15,000 ಮತ್ತು ಗಾರ್ಡ್ ರೂ. 13,000. ಸಂಪರ್ಕಿಸಿ:
Mob: 9731976148

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages also)
Mob: 9343175000

ಕಾರ್ ಬಾಡಿಗೆಗೆ ಬೇಕಾಗಿದೆ
3 ವರ್ಷ ಅಗ್ರೀಮೆಂಟ್ ತಿಂಗಳಿಗೆ 8,000 ರೂ ರಿಂದ 10,000ರೂ ವರೆಗೆ ನೀಡಲಾಗುವುದು ಹಾಗೂ ಕೂಲಿ ಕಾರ್ಮಿಕರು ಕೆಲಸಕ್ಕೆ ಬೇಕಾಗಿದ್ದಾರೆ ವಾರದ ಸಂಬಳ ನೀಡಲಾಗುವುದು
ಸಂಪರ್ಕಿಸಿ: 9008436264

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITE FOR SALE
40x60 E/F Site at Shakthi Nagar, North Face, Just Bihind Sub Registrar Office Dr. Rajkumar Road
9986984268, 9886653351

ಮನೆ ಮಾರಾಟಕ್ಕಿದೆ
ಮೈಸೂರು ಸಿಟಿ, ಕುವೆಂಪುನಗರ 'ಎಂ' ಬ್ಲಾಕ್‌ನಲ್ಲಿ 20X30ರ ನಿವೇಶನದಲ್ಲಿರುವ 2 BHK ಗ್ರೌಂಡ್ ಫ್ಲೋರ್ + 1ನೇ ಮಹಡಿ + ಎರಡನೆ ಮಹಡಿ ಹಾಗೂ 3ನೇ ಮಹಡಿಯಲ್ಲಿ ಒಂದು ರೂಮ್ ಹಾಗೂ AEH, Solar ಎಲ್ಲಾ ಸೌಲಭ್ಯಗಳಿರುವ ಸ್ವತ್ತು ಮಾರಾಟಕ್ಕಿದೆ.
9449703452

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್, ಆಚಾರ್ಯ ವಿದ್ಯಾಕುಲ ಶಾಲೆಯ ಹತ್ತಿರ MUDA ಅನುಮೋದಿತ ಬಡಾವಣೆಯಲ್ಲಿ 20x30 ಅಳತೆಯ ಡ್ಯೂಪ್ಲೆಕ್ಸ್ ಮನೆಯಲ್ಲಿ 3 ಬೆಡ್‌ರೂಂ, 3 ಬಾತ್ ರೂಂ, ಓನ್ ಬೋರ್‌ವೆಲ್ ಇರುವ ಫುಲ್ ಫರ್ನಿಷ್ಡ್ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050 / 8660625801

English Teacher WANTED
* Candidates with B.Ed. / D.Ed.
* MINIMUM 2 YEARS EXPERIENCE.

PLACE: GUNDLUPET.
Mob: 9739464498

SITE FOR SALE
30x40 MUDA allotted (100 meters Ring Road, Vijayanagar 4th Stage.
Mob: 9148316776

ಬೇಕಾಗಿದ್ದಾರೆ
ಗೋಬಿ ಮಂಚೂರಿ, ಪಾನಿಪುರಿ ಚಾಟ್ಸ್ ಹಾಗೂ ಪರೋಟ ತಯಾರಿಕೆಯಲ್ಲಿ ಅನುಭವವಿರುವ ಪುರುಷ ಹಾಗೂ ಮಹಿಳಾ ಅಡುಗೆಯವರು ಬೇಕಾಗಿದ್ದಾರೆ ಕಡ್ಡಾಯವಾಗಿ ನಮ್ಮಲ್ಲೇ ಉಳಿದುಕೊಳ್ಳುವವರು ಮಾತ್ರ ಕರೆ ಮಾಡಿ
ಸ್ಥಳ: ಮೈಸೂರು
Mob: 9591547239

ಮನೆಯಿಂದಲೇ ಕೆಲಸಗಳು
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ವಾಟ್ಸಾಪ್ ಟೈಪಿಂಗ್ ಫ್ಲವರ್ ಪ್ಯಾಕಿಂಗ್, ಜ್ಯೂವಲರಿ ಪ್ಯಾಕಿಂಗ್ ಗುಡ್ ಲೀಫ್ ಕವರ್ ಪ್ಯಾಕಿಂಗ್ ಹಾಗೂ ಕರಕುಶಲ ವಸ್ತುಗಳ ಪ್ಯಾಕಿಂಗ್ ಕೆಲಸಗಳು ಲಭ್ಯ. ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20000 ದಿಂದ 35000ರವರೆಗೆ
7259816020, 7829483767

ಸೈಟ್‌ಗಳು ಮಾರಾಟಕ್ಕಿವೆ
30x40 E/F JSS 3ನೇ ಹಂತ ಹಾಗೂ JSS ಯೂನಿವರ್ಸಿಟಿ ಹತ್ತಿರ. 30x90 ಕಮರ್ಷಿಯಲ್ ಸೈಟ್ ರಾಜ್ಯ ಹೆದ್ದಾರಿ, ವರುಣ ಸರ್ಕಲ್ ಟಿ.ನರಸೀಪುರ ರಸ್ತೆ
9686071750

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಸಕ್ಯೂರಿಟಿ ಗಾರ್ಡ್ ಮತ್ತು ಲೇಡಿ ಡಾಟಾ ಆಪರೇಟರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಲೇಡಿ : PUC & Computer
ಸಂಬಳ : 19000/- + W/o (8hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819 / 9620667819

ಬೇಕಾಗಿದ್ದಾರೆ
ICE CREAM PARLOUR ನಲ್ಲಿ ಪಾರ್ಟ್ ಟೈಮ್ ಕೆಲಸಕ್ಕೆ (6 pm - 11 pm) ಹುಡಗರು ಬೇಕಾಗಿದ್ದಾರೆ.
ವಯೋಮಿತಿ (18 – 40)
8317386649

ಬೇಕಾಗಿದ್ದಾರೆ
ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8296695765
7348843351

WANTED
STAFF WANTED FOR ICE CREAM PARLOUR AT KUVEMPUNAGAR, MYSORE
PART TIME / FULL TIME, MALE / FEMALE
AGE : 18 YEARS TO 30 YEARS
EDUCATION QUALIFICATION : SSLC/PUC PASS / FAIL, SALARY : Rs. 6000/- TO Rs. 12000/- PER MONTH
CONTACT
7760023629

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಶನಿವಾರ 9 ಆಗಸ್ಟ್ 2025

76 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ನಂಜನಗೂಡು, ಆ.8– ನಗರದ ವಿವಿಧ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ಸ್ವಚ್ಛ ನಗರವನ್ನಾಗಿ ರೂಪಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ತಿಳಿಸಿದರು.

ನಗರದ ಚಾಮುಂಡೇಶ್ವರಿ ದೇವಸ್ಥಾನದ ಎದುರು ಗೌರಿಘಟ್ಟ ಬೀದಿ, ತೋಪಿನ ಬೀದಿಗಳಲ್ಲಿ 76 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಂಜನಗೂಡಿನ ಶ್ರೀಕಂಠೇಶ್ವರ ದೇಗುಲಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ನಗರಸಭೆಯ ರಾಜ್ಯ ವಿಪತ್ತು ಉಪಶಮನ (ಎಸ್‌ಡಿಎಮ್‌ಎಫ್) ವತಿಯಿಂದ ದೇವಾಲಯದ ಆಸುಪಾಸಿನಲ್ಲಿರುವ ನಗರದ ಚಾಮುಂಡೇಶ್ವರಿ ದೇವಸ್ಥಾನದ ಎದುರು 20 ಲಕ್ಷ ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆ ಎತ್ತರಿಸುವ ಕಾಮಗಾರಿ ನಡೆಸಲಾಗುವುದು. ಅಲ್ಲದೇ ಗೌರಿಘಟ್ಟದ ಬೀದಿಯಲ್ಲಿ 16 ಲಕ್ಷ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಎತ್ತರಿಸುವ ಕಾಮಗಾರಿ, ನಗರದ ತೋಪಿನ ಬೀದಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆ ಎತ್ತರಿಸುವ ಕಾಮಗಾರಿ ನಿರ್ವಹಿಸಲಾಗುವುದು. ಅಲ್ಲದೇ ಹಳ್ಳದಕೇರಿ ಬಡಾವಣೆಯಲ್ಲಿ 20 ಲಕ್ಷ ವೆಚ್ಚದಲ್ಲಿ ರಿಟೇನಿಂಗ್ ವಾಲ್ ಮತ್ತು ಚರಂಡಿ, ರಸ್ತೆ ಎತ್ತರಿಸುವ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಈ ಭಾಗದಲ್ಲಿ ಕಪಿಲಾ ನದಿಯ ಪ್ರವಾಹಕ್ಕೆ ತುತ್ತಾಗಿ ದೇವಾಲಯಗಳು ಮತ್ತು ದೇವಾಲಯದ ಬಡಾವಣೆಗಳು ಮುಳುಗಡೆಯಾಗುವುದನ್ನು ತಪ್ಪಿಸಲು ಈ ಕಾಮಗಾರಿಗಳು ಅನುಕೂಲವಾಗಲಿದೆ ಎಂದರು.

ನಂಜನಗೂಡು ನಗರವನ್ನು ಸ್ವಚ್ಛ ಮತ್ತು ಪ್ರವಾಸಿ ತಾಣವನ್ನಾಗಿ ರೂಪಿಸುವ ಸಲುವಾಗಿ ಈಗಾಗಲೇ ಯೋಜನೆಗಳು ಸಿದ್ಧಗೊಂಡಿದ್ದು, ಶಾಸಕ ದರ್ಶನ್ ರವರು ನಂಜನಗೂಡು ಪಟ್ಟಣಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಸುಮಾರು 10 ಕೋಟಿ ಮಂಜೂರು ಮಾಡಿಸಿದ್ದಾರೆ. ಅತೀ ಶೀಘ್ರದಲ್ಲಿ ಶಾಸಕರ ಜೊತೆಗೂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ನಂಜನಗೂಡು ನಗರವನ್ನು ಒಂದು ಸ್ವಚ್ಛ ಮತ್ತು ಸುಂದರ ಪ್ರವಾಸಿ ತಾಣವನ್ನಾಗಿ ರೂಪಿಸಲು ಶ್ರಮಿಸುತ್ತೇನೆ ಎಂದರು.

ಈ ವೇಳೆ 14ನೇ ವಾರ್ಡ್ ನಗರಸಭಾ ಸದಸ್ಯರಾದ ಪ್ರದೀಪ್, 4ನೇ ವಾರ್ಡ್ ಸದಸ್ಯ ಎನ್.ಯೋಗೀಶ್, 23ನೇ ವಾರ್ಡ್ ಸದಸ್ಯ ಎನ್.ಎಸ್.ಯೋಗೀಶ್, ಮುಖಂಡರಾದ ಶಿವಕುಮಾರ್, ಎನ್.ಶ್ರೀನಿವಾಸ್, ಪ್ರಕಾಶ್, ನಗರಸಭಾ ಮಾಜಿ ಸದಸ್ಯೆ ಮಂಗಳ ಗೌರಿ, ಗುತ್ತಿಗೆದಾರರಾದ ಸುರೇಶ್, ವೆಂಕಟೇಶ್, ನಗರಸಭಾ ಎಇಇ ಸಮಂತ್, ಎಇ ಪ್ರತಿಮಾ ಸೇರಿದಂತೆ ಹಲವರಿದ್ದರು.

ಕಟ್ಟಡದ ಒತ್ತುವರಿ ನಿರ್ಮಾಣ ತೆರವುಗೊಳಿಸಲು ಮಾಲೀಕರಿಗೆ ನಗರಸಭೆ ನೋಟೀಸ್



ಕಟ್ಟಡದ ಒತ್ತುವರಿ ನಿರ್ಮಾಣ ತೆರವುಗೊಳಿಸುವಂತೆ ನಗರಸಭೆ ಅಧಿಕಾರಿಗಳು ನೋಟೀಸ್ ನೀಡಿದರು.

ಹುಣಸೂರು, ಆ.8– ನಗರದ ಬೈಪಾಸ್ ರಸ್ತೆಯಲ್ಲಿ ಸರ್ಕಾರಿ ರಸ್ತೆ, ಪಾರ್ಕ್ ಜಾಗ ಅತಿಕ್ರಮಿಸಿ ಅನುಮೋದಿತ ವಿನ್ಯಾಸ ನಕ್ಷೆಯನ್ನು ಉಲ್ಲಂಘಿಸಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ಉಚ್ಛ ನ್ಯಾಯಾಲಯದ ಆದೇಶದಂತೆ ವಾರದೊಳಗೆ ತೆರವುಗೊಳಿಸುವಂತೆ ನಗರಸಭೆ ಅಧಿಕಾರಿಗಳು ಕಟ್ಟಡ ಮಾಲೀಕರಾದ ಡಾ.ಹೆಚ್.ಬಿ.ರಂಜಿತಾ ಮತ್ತು ಡಾ.ಲೋಹಿತ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

ಹುಣಸೂರು ನಗರದ ಜೆ.ಬಿ. ಒಬೇದುಲ್ಲಾ ಹಾಗೂ ನಗರಸಭಾ ಸದಸ್ಯರ ದೂರು ಅರ್ಜಿಯಂತೆ ದೊಡ್ಡ ಹುಣಸೂರು ಗ್ರಾಮದ ಸರ್ವೇ ನಂ. 95/1ರಲ್ಲಿ ನಗರಸಭೆ ನಿಯಮ, ನಿಬಂಧನೆಗಳನ್ನು ಪಾಲಿಸದೆ, ಅನುಮೋದಿತ ನೀಲನಕ್ಷೆ ಮೀರಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗಿದೆ. ಅಲ್ಲದೆ, ಹೆಚ್ಚುವರಿ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ ಹಲವಾರು ಬಾರಿ ನೋಟಿಸ್ ನೀಡಿದ್ದರೂ ಕಾಮಗಾರಿ ಸ್ಥಗಿತಗೊಳಿಸಿಲ್ಲ ಎಂಬುದನ್ನು ಉಲ್ಲೇಖಿಸಲಾಗಿದೆ. ಹುಣಸೂರು ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ನಿರ್ದೇಶಕರು ತಿಳಿಸಿರುವಂತೆ ಯಾವುದೇ ಪೂರ್ವಾನುಮತಿ ಇಲ್ಲದೆ 4, 5, 6ನೇ ನಂಬರಿನ ನಿವೇಶನಗಳನ್ನು ಒಗ್ಗೂಡಿಸಿ ಅಕ್ರಮ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಿರುವುದು ಉಲ್ಲಂಘನೆಯಾಗಿರುತ್ತದೆ.

ಬೃಹತ್ ಕಟ್ಟಡಕ್ಕೆ ಯಾವುದೇ ಅನುಮೋದಿತ ನಕ್ಷೆ ಇಲ್ಲ. ಸಾರ್ವಜನಿಕ ಉದ್ಯಾನದಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಿಸಲು ಅನುಮತಿ ಇಲ್ಲ. ತ್ಯಾಜ್ಯ ಸಂಸ್ಕರಣಾ ಘಟಕ ಇಲ್ಲ. ಹೆಚ್ಚುವರಿಯಾಗಿ ನಿರ್ಮಿಸುತ್ತಿರುವ ಕಟ್ಟಡದ ಮೇಲ್ಭಾವಣಿ ಕಾಮಗಾರಿ ಸ್ಥಗಿತಗೊಳಿಸುವಂತೆ ನಗರಸಭೆ ಅಧಿಕಾರಿಗಳು ಅನೇಕ ಬಾರಿ ನೋಟಿಸ್ ನೀಡಿ ಸೂಚಿಸಿದ್ದರೂ ತಮ್ಮ ಸಹಚರ ಮೂಲಕ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದೀರಿ.

ಈ ಎಲ್ಲಾ ವಿಚಾರಗಳ ಸಂಬಂಧ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ವಾದ–ವಿವಾದ ನಡೆದು ಸ್ಥಳದ ಖಾತೆಗಳನ್ನು ಒಗ್ಗೂಡಿಸಿರುವುದು. ನಿಯಮಾವಳಿಗಳ ಪ್ರಕಾರ ಕಟ್ಟಡ ನಿರ್ಮಾಣ ಮಾಡದಿರುವುದು. ಶೇ.300ಕ್ಕಿಂತ ಹೆಚ್ಚು ಕಟ್ಟಡ ನಿರ್ಮಾಣ ಮಾಡಿರುವುದು ನಗರಸಭೆಯ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪರವಾನಗಿ ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ.

ಈ ರೀತಿ ಉಲ್ಲಂಘಿಸಿರುವುದನ್ನು ಗಮನಿಸಿರುವ ನ್ಯಾಯಾಲಯವು ನಿವೇಶನದ ಮಾಲೀಕರು 4 ವಾರದೊಳಗೆ ಪರವಾನಗಿ ಪ್ರಕಾರ ಸರಿಪಡಿಸಿಕೊಳ್ಳಲು ಅವಕಾಶ ನೀಡಿತ್ತು. ಇದನ್ನು ಪಾಲಿಸದಿರುವುದರಿಂದ ಕಾನೂನು ಬಾಹಿರವಾಗಿ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡ ತೆರವುಗೊಳಿಸಲು ಒತ್ತುವರಿ ಮಾಡಿಕೊಂಡು ನಿರ್ಮಿಸಿರುವ ಬೃಹತ್ ಕಟ್ಟಡದ ಕೆಲ ಭಾಗವನ್ನು ತೆರವುಗೊಳಿಸುವಂತೆ ಕ್ರಮಕೈಗೊಳ್ಳಲು ಪೌರಾಯುಕ್ತರಿಗೆ ಆದೇಶಿಸಿತ್ತು. ಅದರಂತೆ 7 ದಿನದ ಒಳಗೆ ತಾವೇ ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ಕಾನೂನಿನಂತೆ ತೆರವುಗೊಳಿಸಲಾಗುವುದೆಂದು ಪೌರಾಯುಕ್ತೆ ಮಾನಸ ನೋಟಿಸ್ ನೀಡಿದ್ದಾರೆ.

ಬೇಡಿಕೆಗಳ ಈಡೇರಿಕೆಗಾಗಿ ಪ್ರತಿನಿಧಿಗಳು ಸಂಘಟಿತರಾಗಬೇಕು

ಜೀವ ವಿಮಾ ನಿಗಮದ ಪ್ರತಿನಿಧಿಗಳ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಎಲ್.ಮಂಜುನಾಥ್ ಕರೆ

ನಂಜನಗೂಡು, ಆ.8– ಜೀವ ವಿಮಾ ಪ್ರತಿನಿಧಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗೆಹರಿಸಿ ಬೇಡಿಕೆ ಈಡೇರಿಸಿಕೊಳ್ಳಲು ಪ್ರತಿನಿಧಿಗಳು ಸಂಘಟಿತರಾಗಬೇಕು. ಅಗತ್ಯ ಬಿದ್ದರೆ ಹೋರಾಟಕ್ಕೆ ಸಜ್ಜಾಗಬೇಕು ಎಂದು ಜೀವ ವಿಮಾ ನಿಗಮದ ಪ್ರತಿನಿಧಿಗಳ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಎಲ್. ಮಂಜುನಾಥ್ ಕರೆ ನೀಡಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ನಡೆದ ಜೀವ ವಿಮಾ ಪ್ರತಿನಿಧಿಗಳ ಮೈಸೂರು ವಿಭಾಗೀಯ ಸಮ್ಮೇಳನ ಹಾಗೂ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.



ವಾರ್ಷಿಕ ಮಹಾಸಭೆಯನ್ನು ಜೀವ ವಿಮಾ ನಿಗಮದ ಪ್ರತಿನಿಧಿಗಳ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಎಲ್.ಮಂಜುನಾಥ್ ಉದ್ಘಾಟಿಸಿದರು.

ವಿಮಾ ಕ್ಷೇತ್ರಕ್ಕೆ ಹೆಚ್ಚಾಗಿ ಖಾಸಗಿ ಸಂಸ್ಥೆಗಳು ಕಾಲಿಟ್ಟಿರುವುದರಿಂದ ಜೀವ ವಿಮಾ ಪ್ರತಿನಿಧಿಗಳು ತೀವ್ರ ಪೈಪೋಟಿ ಎದುರಿಸಬೇಕಾಗಿದೆ. ಸಂಸ್ಥೆ ಹಲವು ಉತ್ತಮ ಪಾಲಿಸಿಗಳನ್ನು ಹಿಂದಕ್ಕೆ ಪಡೆಯುತ್ತಿದೆ. ಪ್ರತಿನಿಧಿಗಳಿಗೆ ದೊರೆಯುತ್ತಿದ್ದ ಹಲವು ಸೌಲಭ್ಯ ಹಾಗೂ ಕಮಿಷನ್‌ನಲ್ಲಿ ಕಡಿತ ಮಾಡುತ್ತಿರುವುದರಿಂದ ಪ್ರತಿನಿಧಿಗಳು ತೊಂದರೆಗೆ ಸಿಲುಕುತ್ತಿದ್ದಾರೆ. ಪ್ರತಿನಿಧಿಗಳ ಸಂಘ ನಮ್ಮ ಸದಸ್ಯರಿಗೆ ನ್ಯಾಯವಾಗಿ ದೊರಕಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡಲು ಆಡಳಿತ ಮಂಡಳಿಯೊಡನೆ ಸಂಘರ್ಷ ನಡೆಸುತ್ತಿದೆ. ಪ್ರತಿನಿಧಿಗಳ ಹಿತರಕ್ಷಣೆ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದರು.

ಸಭೆಯಲ್ಲಿ ಜೀವ ವಿಮಾ ಪ್ರತಿನಿಧಿಗಳ ತಾಲೂಕು ಅಧ್ಯಕ್ಷರಾಗಿ ಎನ್.ರವಿ, ಗೌರವ ಅಧ್ಯಕ್ಷರಾಗಿ ಎನ್.ಪುಟ್ಟರಾಜು, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಪಿ. ಪ್ರಕಾಶ್, ಖಜಾಂಜಿಯಾಗಿ ಪಿ.ಚಂದ್ರ ಅವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಟಿ.ಎಸ್.ಸಿದ್ದಲಿಂಗ ಒಡೆಯರ್, ಪ್ರತಿನಿಧಿಗಳ ಸಂಘದ ಅಧ್ಯಕ್ಷ ಎನ್.ರವಿ, ರಾಜ್ಯ ಸಮಿತಿ ಅಧ್ಯಕ್ಷ ಲೋಕೇಶ್ ಶೆಟ್ಟಿ, ಬಿ.ಸಿ.ಗುರುಪಾದಸ್ವಾಮಿ, ಜಯರಾಮು, ಮೈಸೂರು ವಿಭಾಗದ ವಿಮಾ ನೌಕರರ ಸಂಘದ ಅಧ್ಯಕ್ಷ ರಾಮು, ಯೋಗೇಶ್, ಶಿವರುದ್ರಮ್ಮ, ನಂಜನಗೂಡು ಶಾಖಾಧಿಕಾರಿ ಎಸ್. ರಾಮಸ್ವಾಮಿ, ಬಿ.ಎಸ್.ಅರವಿಂದ್ ಕುಮಾರ್, ಕೃಷ್ಣಭಟ್, ಗುಂಡ್ಲುಪೇಟೆ ಶಾಖೆ ಅಧ್ಯಕ್ಷ ನಾಗರಾಜು, ಎಂ.ಪಿ. ಪ್ರಕಾಶ್, ಚಂದ್ರ.ಪಿ, ಗುರುಪ್ರಸಾದ್, ಭಾವನ, ಬಿ.ಎಲ್.ನಾಗೇಂದ್ರ, ಬಿಳಿಗೆರೆ ನಾಗೇಂದ್ರ ಉಪಸ್ಥಿತರಿದ್ದರು.

ಹಿರಿಯ ರೈತ ಮುಖಂಡ ಶಿವಣ್ಣ ಅವರಿಗೆ ಶ್ರದ್ಧಾಂಜಲಿ



ತಿ.ನರಸೀಪುರದಲ್ಲಿ ಹಿರಿಯ ರೈತ ಮುಖಂಡ ಶಿವಣ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಕುಟುಂಬದವರನ್ನು ಗೌರವಿಸಲಾಯಿತು.

ತಿ.ನರಸೀಪುರ, ಆ.8– ಕರ್ನಾಟಕ ರಾಜ್ಯ ರೈತ ಸಂಘ ತಿ.ನರಸೀಪುರ ತಾಲೂಕು ಘಟಕದಿಂದ ಇತ್ತೀಚೆಗೆ ನಿಧನರಾದ ಹಿರಿಯ ರೈತ ಮುಖಂಡ ಯಾಚೇನಹಳ್ಳಿ ಶಿವಣ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ಆರ್‌ಎಂಸಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತ ಸಂಘದ ಸಭೆಯಲ್ಲಿ ಮುಖಂಡರು ಅಗಲಿದ ರೈತ ಮುಖಂಡ ಯಾಚೇನಹಳ್ಳಿ ಶಿವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ಸಲ್ಲಿಸಿದರು. ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಮಾತ ನಾಡಿ, ಹಿರಿಯ ರೈತ ಮುಖಂಡ ಶಿವಣ್ಣ ಅವರು ಸಹೃದಯಿಗಳಾಗಿದ್ದು, ಹೋರಾಟ ಮನೋಭಾವ ಹೊಂದಿದ್ದರು. ತಾಲೂಕು ಸಂಘದೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದ ಅವರು ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೇ ರೈತ ಪರ ಕೆಲಸದಲ್ಲಿ ನಿರತರಾಗಿದ್ದರು.

ಹತ್ತಾರು ವರ್ಷ ರೈತ ಸಂಘದ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ ಶಿವಣ್ಣ ಅವರ ನಿಧನ ಸಂಘಕ್ಕೆ ತುಂಬಲಾರದ ನಷ್ಟ ಎಂದು ಕಂಬನಿ ಮಿಡಿದರು.

ಈ ವೇಳೆ ಜಿಲ್ಲಾಧ್ಯಕ್ಷ ವಸಂತ್ ಕುಮಾರ್, ವಿಭಾಗೀಯ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿದರು. ವಿವಿಧ ರೈತ ಮುಖಂಡರು ಹಾಜರಿದ್ದರು.

ಲಯನ್ಸ್ ಸಂಸ್ಥೆ ಸೇವಾ ಕಾರ್ಯ ಮುಂದುವರೆಯಲಿ

ಸರಗೂರು, ಆ.8– ಪಟ್ಟಣದ ಲಯನ್ಸ್ ಸಂಸ್ಥೆ ಸೇವಾ ಕಾರ್ಯಗಳ ಮೂಲಕ ಸಮಾಜ ಸುಧಾರಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದು, ಇದು ಹೀಗೆ ಮುಂದುವರೆಯಲಿ ಎಂದು ಲಯನ್ ಮಾ. ಜಿಲ್ಲಾ ರಾಜ್ಯಪಾಲರು, ನಿಕಟಪೂರ್ವ ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ 317 ಎಸ್.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ನಡೆದ ಲಯನ್ಸ್ ಸಂಸ್ಥೆ ಪ್ರತಿಜ್ಞಾ ವಿಧಿ ಭೋದನೆ, ಪದಗ್ರಹಣ ಹಾಗೂ ವೈದ್ಯರ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಮ್ಮ ಚಿಂತನೆಯಲ್ಲಿ ಸ್ಪಷ್ಟತೆ ಹಾಗೂ ಹೃದಯದಲ್ಲಿ ಪರಿಶುದ್ಧತೆ ಇದ್ದರೆ ನಾವು ಮಾಡುವ ಯಾವುದೇ ಕೆಲಸ ಶ್ರೇಷ್ಠತೆಯಿಂದ ಕೂಡಿರುತ್ತದೆ. ನಾವು ಜವಾಬ್ದಾರಿ ವಹಿಸಿಕೊಳ್ಳುವಾಗ ಹೇಗೆ ಗುರಿಮುಟ್ಟಲು ಶ್ರಮಿಸುತ್ತೇವೆಯೋ ಹಾಗೆಯೇ ಅಲ್ಲಿಂದ ನಿರ್ಗಮಿಸುವಾಗ ಅಲ್ಲಿ ಬಿಟ್ಟು ಹೋದ ಮೌಲ್ಯಗಳು ಮುಂದಿನ ಪೀಳಿಗೆಗೆ ಆದರ್ಶದಾಯಕವಾಗಿರಬೇಕು. ಇದರಿಂದ ಸಂಸ್ಥೆಯು ಸೇವಾ ಕಾರ್ಯಗಳ ಮೂಲಕ ಸಮಾಜ ಸುಧಾರಣೆಯಲ್ಲಿ ಮಹತ್ತರ ಬದಲಾವಣೆ ತರಲು ಸಾಧ್ಯವಾಗಲಿದೆ ಎಂದರು.



ಸಮಾರಂಭದಲ್ಲಿ ಲಯನ್ ಎಸ್.ಕೃಷ್ಣೇಗೌಡ ಮಾತನಾಡಿದರು.

ಕಾಯದರ್ಶಿ ಎಸ್.ಎಸ್.ಪ್ರಭುಸ್ವಾಮಿ ಮಾತನಾಡಿ, ಲಯನ್ಸ್ ಸಂಸ್ಥೆ ಹೆಚ್ಚು ನೇತ್ರದಾನ ಹಾಗೂ ರಕ್ತದಾನ ಶಿಬಿರ ರೂಪಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲದೇ ಗ್ರಾಮೀಣ ಭಾಗದಲ್ಲಿ ಮೊದಲ ಬಾರಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಆರೋಗ್ಯ, ಶಿಕ್ಷಣಗಳಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ನಿಯೋಜನೆ ಮಾಡಿದ್ದರಿಂದ ಇಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಸ್ಥಾನ ಅಲಂಕರಿಸಿದ್ದಾರೆ ಎಂದರು.


ಇದೇ ವೇಳೆ ಪಶುವೈದ್ಯ ಡಾ.ಡಿ.ಟಿ. ಜಯರಾಮಯ್ಯ, ಪಟ್ಟಣದ ತಾಲೂಕು ಆಸ್ಪತ್ರೆ ಮಹಿಳಾ ವೈದ್ಯಾಧಿಕಾರಿ ಡಾ.ಆರ್. ಸುಜಾತ ಅವರನ್ನು ಲಯನ್ಸ್ ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು. ಲಯನ್ ಪ್ರಾದೇಶಿಕ ಅಧ್ಯಕ್ಷ ವಾಸುಕಿ ಹಾಗೂ ವಲಯ ಅಧ್ಯಕ್ಷ ಶಶಿಕುಮಾರ್ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಕಲಿಕಾ ಸಾಮಾಗ್ರಿಗಳನ್ನು ನೀಡಿದರು.

ನೂತನ ಅಧ್ಯಕ್ಷ ಲಯನ್ ಎಸ್.ಬಿ. ನಾಗರಾಜು ತಂಡದವರಿಗೆ ಪ್ರತಿಜ್ಞಾ ವಿಧಿ ಭೋದಿಸಲಾಯಿತು. ಲಯನ್ ಜಿಲ್ಲಾ ಕಾರ್ಯದರ್ಶಿ ಉಮೇಶ್, ಶಾಲಾ ಶೌಚಾಲಯ ಕಟ್ಟಡ ನಿರ್ಮಾಣಕ್ಕೆ 25 ಸಾವಿರ ರೂ. ಸಹಾಯಧನ ನೀಡಿದರು. ಕಾರ್ಯಕ್ರಮದಲ್ಲಿ ಲಯನ್ ಸಿದ್ದೇಗೌಡ, ಜಿಪಂ ಮಾಜಿ ಸದಸ್ಯ ನರಸೀಪುರ ಪಿ.ರವಿ, ಉಪಾಧ್ಯಕ್ಷ ವೀರೇಶ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ ಮಾತನಾಡಿದರು.

ನೂತನ ಅಧ್ಯಕ್ಷ ಲಯನ್ ಎಸ್.ಬಿ. ನಾಗರಾಜು, ನಿಕಟಪೂರ್ವ ಅಧ್ಯಕ್ಷ ಎಸ್.ಎನ್.ಪ್ರತಾಪ್, ಕಾರ್ಯದರ್ಶಿ ಎಸ್.ಎಸ್.ಪ್ರಭುಸ್ವಾಮಿ, ಖಜಾಂಚಿ ಬ್ರಹ್ಮದೇವಯ್ಯ, ಉಪಾಧ್ಯಕ್ಷರಾದ ಎಸ್.ಬಿ. ಸುಮಂತ್, ಎಸ್.ಎನ್.ಮೋಹನ್ ಕುಮಾರ್, ಸಮಿತಿ ಅಧ್ಯಕ್ಷರಾದ ಎಂ.ಕೆ.ಹರಿದಾಸ್, ಎಸ್.ನಾರಾಯಣ್, ಎಸ್.ವಿ.ಯೋಗೀಶ್, ಎಸ್.ಪಿ.ಪ್ರಸಾದ್, ಕೆ.ಸುರೇಶ್ ಜೈನ್, ನಿರ್ದೇಶಕರಾದ ಎಸ್.ಎನ್.ಪದ್ಮಪ್ರಸಾದ್, ಎಸ್.ಎನ್. ಶ್ರೀಕಂಠಸ್ವಾಮಿ, ಎಸ್.ಎಸ್. ಸೋಮಪ್ರಭ, ಎನ್.ಎಸ್.ಪ್ರಸಾದ್, ಎಸ್.ವಿ.ಮಂಜುನಾಥ್ ಜೈನ್, ಎಸ್.ಮಂಜುನಾಥ್, ಎಸ್.ಪಿ. ಪ್ರಮೋದ್, ಎಸ್.ಎಸ್.ಮದನ್, ಎಸ್.ಪಿ.ಅಮಿತ್, ವಿ.ಚಿರಂತ್, ಸೀಮಾ ಮೋಹನ್, ಪ್ರಾಂಶುಪಾಲ ಬಿ.ಡಿ.ದಾಸಾಚಾರಿ, ಶಿಕ್ಷಕ ವೃಂದ, ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರಿದ್ದರು.

ಇಂದು ನಾಡಪ್ರಭು ಕೆಂಪೇಗೌಡ ಜಯಂತಿ

ಹುಣಸೂರು, ಆ.8– ನಗರದಲ್ಲಿ ಆ.9 ರಂದು ನಾಡಪ್ರಭು ಕೆಂಪೇ ಗೌಡರ 516ನೇ ಜಯಂತಿ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಗಣೇಶ್ ಗೌಡ ಕೆ. ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಬೆಳಗ್ಗೆ ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಪ್ರಧಾನ ಭಾಷಣಕಾರರಾಗಿ ವಿಶ್ರಾಂತ ಪ್ರಾಂಶುಪಾಲ ಹೆಚ್.ಆರ್. ಸಿದ್ದೇಗೌಡ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕೆ.ಗಣೇಶ್‌ಗೌಡ ವಹಿಸಲಿದ್ದಾರೆ. ಇದೇ ವೇಳೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಶ್ರೇಯಸ್ ಅವರನ್ನು ಸನ್ಮಾನಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.

ಬಾರ್ ಬಾಗಿಲು ಮೀಟಿ ಕಳ್ಳತನ

ನಂಜನಗೂಡು, ಆ.8– ತಾಲೂಕಿನ ತಗಡೂರಿನಲ್ಲಿರುವ ಸಂತೋಷ್ ಬಾರ್ ಅಂಡ್ ವೈನ್ಸ್‌ನ ಬಾಗಿಲನ್ನು ಕಳ್ಳರು ಕಬ್ಬಿಣದ ರಾಡಿನಿಂದ ಮೀಟಿ ಹಣ ದೋಚಿ ಪರಾರಿಯಾಗಿರುವ ಘಟನೆ ಗುರುವಾರ ರಾತ್ರಿ ಜರುಗಿದೆ.



ಈ ಸಂಬಂಧ ಬಾರ್ ಕ್ಯಾಶಿಯರ್ ಅಹಲ್ಯ ಗ್ರಾಮದ ಮಧುಕುಮಾರ್ ನಂಜನಗೂಡು ತಾಲೂಕಿನ ಕವಲಂದೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಗುರುವಾರ ರಾತ್ರಿ ವ್ಯಾಪಾರ ಮುಗಿಸಿ ಬಾರ್ ಬಾಗಿಲು ಹಾಕಿ ಮನೆಗೆ ಹೋಗಿದ್ದೆವು. ರಾತ್ರಿ 11 ಗಂಟೆ ವೇಳೆಗೆ ಬಾರ್‌ನ ಪಕ್ಕದಲ್ಲಿರುವ ಚಿಲ್ಲರೆ ಅಂಗಡಿಯವರು ಫೋನ್ ಮಾಡಿ ವಿಚಾರ ತಿಳಿಸಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ. ಈ ವೇಳೆ ಸ್ಥಳಕ್ಕಾಗಮಿಸಿ ಬಾರ್ ಒಳಗೆ ಹೋಗ ನೋಡಲಾಗಿ ಗಲ್ಲಾ ಪೆಟ್ಟಿಗೆಯಲ್ಲಿದ್ದ 5300 ರೂ. ಕಳ್ಳತನವಾಗಿದೆ. ಅಲ್ಲದೇ ಬಾರ್‌ನಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಕಳ್ಳರ ಕೈಚಳಕ ಸೆರೆಯಾಗಿದೆ. ಹೀಗಾಗಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಾಲೂಕಿನ ದೊಡ್ಡ ಕವಲಂದೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಉದ್ಯಾನವನವನ್ನು ವಾಯು ವಿಹಾರಕ್ಕೆ ಮುಕ್ತಗೊಳಿಸಿ

ತಹಸೀಲ್ದಾರ್‌ಗೆ ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರ ಮನವಿ



ಉದ್ಯಾನವನವನ್ನು ವಾಯು ವಿಹಾರಕ್ಕೆ ಮುಕ್ತಗೊಳಿಸುವಂತೆ ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.


ತಿ.ನರಸೀಪುರ, ಆ.8– ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಇರುವ ತಾಲೂಕು ಕಚೇರಿ ಮುಂಭಾಗದ ಉದ್ಯಾನವನ್ನು ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು ಸ್ವಚ್ಛಗೊಳಿಸಿ, ಹುಲುಸಾಗಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಿ ಉದ್ಯಾನವನದಲ್ಲಿ ವಾಯು ವಿಹಾರ ನಡೆಸಲು ರೈತರು, ಸಾರ್ವಜನಿಕರಿಗೆ ಮುಕ್ತ ಅವಕಾಶ ಮಾಡಿಕೊಡಬೇಕು ಎಂದು ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ರೈತ ಭವನದಲ್ಲಿ ಭಾರತೀಯ ಕಿಸಾನ್ ಸಂಘದ ಮಾಸಿಕ ಸಭೆ ನಡೆಸಿ ರೈತರ ಕುಂದು ಕೊರತೆ ಚರ್ಚಿಸಿದ ಬಳಿಕ ತಾಲೂಕು ಕಚೇರಿ ಆವರಣಕ್ಕೆ ತೆರಳಿದ ಕಾರ್ಯಕರ್ತರು ಉದ್ಯಾನವನ ಕಾಡಿನಂತೆ ಇರುವುದನ್ನು ಕಂಡು ಕೆಲ ತಾಸು ಸ್ವಚ್ಛತಾ ಕಾರ್ಯ ನಡೆಸಿದರು. ಬಳಿಕ ತಹಸೀಲ್ದಾರ್ ಕಚೇರಿಗೆ ತೆರಳಿ ಉದ್ಯಾನವನವನ್ನು ವಾಯು ವಿಹಾರಕ್ಕೆ ಮುಕ್ತಗೊಳಿಸಬೇಕೆಂದು ಟಿ.ಜಿ.ಸುರೇಶಾಚಾರ್ ಅವರಿಗೆ ಮನವಿ ಸಲ್ಲಿಸಿದರು.

ಅಧ್ಯಕ್ಷ ನಾಗಲಗೆರೆ ಶಿವಕುಮಾರ್ ಮಾತನಾಡಿ, ತಾಲೂಕಿನಲ್ಲಿ ಭಾರತೀಯ ಕಿಸಾನ್ ಸಂಘ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ಮಾಸಿಕ ಸಭೆಯಲ್ಲಿ ವಿದ್ಯುತ್, ಕಂದಾಯ, ನೀರಾವರಿ, ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಚರ್ಚೆ ಮಾಡಿ ಆಯಾಯ ಇಲಾಖೆಗಳ ಅಧಿಕಾರಿಗಳಿಗೆ ಮನವಿ ಪತ್ರವನ್ನು ಲಿಖಿತವಾಗಿ ಕೊಟ್ಟಿದ್ದೇವೆ. ಈ ಬಾರಿ ತಾಲೂಕು ಕಚೇರಿ ಉದ್ಯಾನವನದಲ್ಲಿ ವಾಯು ವಿಹಾರಕ್ಕೆ ಅನುವು ಮಾಡಿಕೊಡಬೇಕೆಂದು ತಾಲೂಕು ಆಡಳಿತವನ್ನು ಒತ್ತಾಯಿಸಿದ್ದೇವೆ. ಮುಂಗಾರು ಕೃಷಿ ಚಟುವಟಿಕೆಗಳು ಆರಂಭಗೊಂಡಿರುವುದರಿಂದ ನಾಲೆಗಳ ಏರಿಗಳನ್ನು ಸ್ವಚ್ಛಗೊಳಿಸುವಂತೆ ಕಾವೇರಿ ನೀರಾವರಿ ನಿಗಮದ ಕಬಿನಿ ವಿತರಣಾ ನಾಲಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಅವರಿಗೂ ಮನವಿ ಸಲ್ಲಿಸಿದ್ದೇವೆ ಎಂದರು.

ಮರಡೀಪುರ ಜಿಲ್ಲಾ ಪ್ರಧಾನ ಕಾರ್ಯದರ್ಶ ರವಿ ಗಂಡತ್ತೂರು, ಉಪಾಧ್ಯಕ್ಷ ಕೊಳತ್ತೂರು ಮರಿಸ್ವಾಮಿ, ಮಾಲಂಗಿ ಪ್ರಭುರಾಜ್, ಬೆನಕನಹಳ್ಳಿ ರಾಜಶೇಖರಮೂರ್ತಿ, ಮುಖಂಡರಾದ ದೊಡ್ಡಪುರ ಜಗದೀಶ್, ನಾಗರಾಜು, ಸೋಮಣ್ಣ, ಮಲ್ಲಿಕಾರ್ಜುನ ನಿಲಸೋಗೆ ಸಿದ್ದರಾಜು, ಮಡವಾಡಿ ಮಹೇಶ್, ಶಶಿಕುಮಾರ್, ಕುರುಬೂರು ಮಹದೇವಮ್ಮ, ತುಂಬಲ ಪ್ರಭು, ಬನ್ನಳ್ಳಿ ಹುಂಡಿ ಜಯಶೀಲ, ಯರಗನಹಳ್ಳಿ ನಟರಾಜು, ಜಗದೀಶ್ ಮೇಗಡಹಳ್ಳಿ, ಮುಕುಂದ, ಕಳ್ಳಿಪುರ ಪ್ರಕಾಶ್, ಕೊಳತ್ತೂರು ಕೆ.ಟಿ.ಸ್ವಾಮಿ, ರಾಜೇಶ್ ಬೂದಹಳ್ಳಿ, ಶಿವಮಲ್ಲು ಶ್ರೀರಂಗರಾಜಪುರ, ಪುಟ್ಟಸ್ವಾಮಿ, ಕೋಳಿಮಲ್ಲನಹುಂಡಿ ನಿಂಗರಾಜು ಹಾಗೂ ಇತರರಿದ್ದರು.

ಕೋಟೆ ಲಯನ್ಸ್ ಕ್ಲಬ್‌ನಲ್ಲಿ ಪ್ರತಿಜ್ಞಾವಿಧಿ ಭೋದನೆ



ತಾರಕ ಸಮುದಾಯ ಭವನದಲ್ಲಿ ಲಯನ್ಸ್ ಕ್ಲಬ್ ಹೆಚ್.ಡಿ.ಕೋಟೆ ಪ್ರತಿಜ್ಞಾವಿಧಿ ಬೋಧನೆ ಸಮಾರಂಭ ನಡೆಯಿತು.

ಹೆಚ್.ಡಿ.ಕೋಟೆ, ಆ.8– ಸಮಾಜಮುಖಿ ಸೇವೆ ಮಾಡಿಕೊಂಡು ಬಂದ ಹಿನ್ನೆಲೆಯಲ್ಲಿ ನನ್ನನ್ನು ಎರಡನೇ ಬಾರಿಗೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ ಎಂದು ನೂತನ ಅಧ್ಯಕ್ಷ ಬೀಚನಹಳ್ಳಿ ಭಾಸ್ಕರ್ ತಿಳಿಸಿದರು.

ತಾಲೂಕಿನ ಹ್ಯಾಂಡ್ ಪೋಸ್ಟ್‌ನಲ್ಲಿರುವ ತಾರಕ ಸಮುದಾಯ ಭವನದಲ್ಲಿ ನಡೆದ ಲಯನ್ಸ್ ಕ್ಲಬ್ ಹೆಚ್.ಡಿ.ಕೋಟೆ 2025–26ನೇ ಸಾಲಿನ ಪ್ರತಿಜ್ಞಾವಿಧಿ ಬೋಧನೆ ಸಮಾರಂಭ ಉದ್ಘಾಟಿಸಿ, ಪ್ರತಿಜ್ಞಾ ವಿಧಿ ಬೋಧನೆ ಸ್ವೀಕರಿಸಿ ಬಳಿಕ ಮಾತನಾಡಿದ ಅವರು, ನಾನು ಕಳೆದ ಬಾರಿ ಲಯನ್ಸ್ ಕ್ಲಬ್ ಅಧ್ಯಕ್ಷನಾಗಿ ಹಲವು ಸಮಾಜಮುಖಿ ಕೆಲಸಗಳನ್ನು ಮಾಡಿದ್ದೇನೆ. ಲಯನ್ಸ್ ಸಂಸ್ಥೆಯಲ್ಲಿರುವ ಗಣ್ಯರು ನನ್ನ ಸಮಾಜಮುಖಿ ಸೇವೆ ಗುರ್ತಿಸಿ ಮುಂದಿನ ದಿನಗಳಲ್ಲೂ ಉತ್ತಮ ಸೇವೆ ಮಾಡಲು ಮತ್ತೊಮ್ಮೆ 2ನೇ ಬಾರಿಗೆ ಲಯನ್ಸ್ ಸಂಸ್ಥೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಮಾಜಮುಖಿ ಸೇವೆ ಮಾಡಿ ಲಯನ್ಸ್ ಸಂಸ್ಥೆಗೆ ಕೀರ್ತಿ ತರುವ ಕೆಲಸ ಮಾಡುತ್ತೇನೆ ಎಂದರು.

ಲಯನ್ಸ್ ರಾಜ್ಯಪಾಲ ಡಾ.ಎನ್.ಕೃಷ್ಣೇಗೌಡ ಮಾತನಾಡಿ, ಲಯನ್ಸ್ ಸಂಸ್ಥೆ ಸದಸ್ಯತ್ವ ಪಡೆದ ಸಾಮಾನ್ಯ ವ್ಯಕ್ತಿಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ಕಳೆದ 43 ವರ್ಷಗಳಿಂದ ತಾಲೂಕು ಲಯನ್ಸ್ ಸಂಸ್ಥೆಯು ಸೇವೆ ಸಲ್ಲಿಸುತ್ತಾ ಬಂದಿದ್ದು, ಜಿಲ್ಲೆಗೆ ಮಾದರಿ ಸಂಸ್ಥೆಯಾಗಿ ಹೊರಹೊಮ್ಮಿರುವುದಲ್ಲದೇ ಅನೇಕ ಬಹುಮಾನ ಪಡೆದುಕೊಂಡಿದೆ ಎಂದರು.

ಸಭೆಯಲ್ಲಿ 2ನೇ ಬಾರಿಗೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಬೀಚನಹಳ್ಳಿ ಭಾಸ್ಕರ್, ಕಾರ್ಯದರ್ಶಿಯಾಗಿ ವಕೀಲ ನಾರಾಯಣಗೌಡ, ಖಜಾಂಚಿಯಾಗಿ ಬೆಳಗನಹಳ್ಳಿ ಬಸವರಾಜು, ಉಪಾಧ್ಯಕ್ಷರಾಗಿ ಅಶೋಕ್, ಸಣ್ಣೇಗೌಡ, ನಾಗನಾಯಕ, ಆಡಳಿತಾಧಿಕಾರಿಯಾಗಿ ಆರ್.ಪಿ.ವೀರಪ್ಪ ನೇಮಕಗೊಂಡರು. ಜಿಲ್ಲಾ ಸಂಪುಟ ಕಾರ್ಯದರ್ಶಿ ಎಂ.ಸಿದ್ದೇಗೌಡ, ಪ್ರಾಂತೀಯ ಅಧ್ಯಕ್ಷ ಡಿ.ಎಸ್.ಸತೀಶ್, ವಲಯ ಅಧ್ಯಕ್ಷ ಎನ್.ಮಹದೇವಸ್ವಾಮಿ, ಎಂ.ಸಿ.ದೊಡ್ಡನಾಯಕ, ಸಂಗಮೇಶ್ವರ್, ನಾರಾಯಣ್ ಗೌಡ, ಸುರೇಂದ್ರ ಗೌಡ, ನರಸೀಪುರ ರವಿ, ಬೊಪ್ಪನಹಳ್ಳಿ ಭಾಸ್ಕರ್, ನಾಗರಾಜು, ನಾಗನಾಯಕ, ನಟರಾಜು, ನಾಗಣ್ಣ, ವೈ.ಟಿ.ವೀರಪ್ಪ, ವಕೀಲೆ ಸರಸ್ವತಿ ಭಾಸ್ಕರ್, ಅಶೋಕ್, ರಮೇಶ್, ಗೋಪಾಲಕೃಷ್ಣ, ಬಸವರಾಜು, ಸೋಮಸುಂದರ್, ಚಿಕ್ಕನಾಯಕ, ಸಿದ್ದರಾಜು, ಕುಮಾರ್, ಬಸಪ್ಪ, ನಾಗಣ್ಣ, ವೆಂಕಟಸ್ವಾಮಿ, ಚಲುವ, ಜಗದೀಶ್, ಮಂಜ, ದಿನೇಶ್, ರಾಜಾಚಾರಿ, ಸುನೀಲ್, ಶಿವಕುಮಾರ್, ವೈ.ಟಿ.ಮಹೇಶ್, ಡಿ.ಆರ್. ಮಹೇಶ್, ಶಿವಕುಮಾರ್, ರಾಜೇಶ್, ಕುಮಾರ್, ಶಿವಾನಂದ್, ಈರೇಗೌಡ, ಆರ್.ಪಿ. ವೀರಪ್ಪ, ರಂಗೇಗೌಡ, ಯೋಗನರಸಿಂಹೇಗೌಡ, ಚಲುವರಾಜು, ಪ್ರಕಾಶ್ ಇದ್ದರು.

ಮೈಸೂರು ದಸರಾ ಮಹೋತ್ಸವ-2025

ಈ ಬಾರಿಯೂ ದಸರಾ ದೀಪಾಲಂಕಾರ ಆಕರ್ಷಕ, ಸುರಕ್ಷಿತವಾಗಿರಲಿ

ವಿದ್ಯುತ್ ಗುತ್ತಿಗೆದಾರರೂ ಸೇರಿದಂತೆ ಸಂಬಂಧಿಸಿದ ಅಧಿಕಾರಿವರ್ಗಕ್ಕೆ ಸೆಸ್ಕ್ ಎಂಡಿ ಕೆ.ಎಂ.ಮುನಿಗೋಪಾಲ್‌ರಾಜು ಸಲಹೆ

ಮೈಸೂರು,ಆ.8(ಎಂಟಿವೈ)- ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ದೀಪಾಲಂಕಾರ ಹೊಸತನದೊಂದಿಗೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಸಲಹೆ ನೀಡಿದ್ದಾರೆ.



ಮೈಸೂರಿನ ವಿಜಯನಗರದ ಎರಡನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ದೀಪಾಲಂಕಾರ ಪೂರ್ವಭಾವಿ ಸಭೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಅವರ ನೇತೃತ್ವದಲ್ಲಿ ಶುಕ್ರವಾರ ನಡೆಯಿತು.

ಈ ಬಾರಿ ಡ್ರೋನ್ ಶೋಗೆ ಇನ್ನಷ್ಟು ಮೆರಗು

ಕಳೆದ ವರ್ಷದ ದಸರಾ ಸಂದರ್ಭದಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆದ ಡ್ರೋನ್ ಶೋ ಎಲ್ಲರ ಗಮನ ಸೆಳೆದಿತ್ತು. ಆಗಸದಲ್ಲಿ ಸಾವಿರಾರು ಡ್ರೋನ್ ಏಕಾಲದಲ್ಲಿ ಹಾರಾಡಿ ವಿವಿಧ ಚಿತ್ತಾಕರ್ಷಕ ಆಕೃತಿಗಳನ್ನು ಮೂಡಿಸಿ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಬಾರಿಯೂ ಡ್ರೋನ್ ಶೋ ಮತ್ತಷ್ಟು ಆಕರ್ಷಕವಾಗಿ ನಡೆಸಲು ಚಿಂತಿಸಲಾಗಿದೆ. ಕಳೆದ ಬಾರಿಗಿಂತ ಹೆಚ್ಚಿನ ಡ್ರೋನ್ ಬಳಸಿ ಪ್ರದರ್ಶನ ನೀಡಲಾಗುತ್ತದೆ.

- ಕೆ.ಎಂ. ಮುನಿಗೋಪಾಲ್ ರಾಜು, ವ್ಯವಸ್ಥಾಪಕ ನಿರ್ದೇಶಕ, ಸೆಸ್ಕ್

ಮೈಸೂರಿನ ವಿಜಯನಗರದ ಎರಡನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ದಸರಾ ಮಹೋತ್ಸವದಲ್ಲಿ ದೀಪಾಲಂಕಾರವೂ ಪ್ರಮುಖ ಆಕರ್ಷಣೆಯಾಗಿದ್ದು, ಪ್ರವಾಸಿಗರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತಿದೆ. ಈ ಸಾಲಿನಲ್ಲೂ ದೀಪಾಲಂಕಾರದಲ್ಲಿ ಹೊಸತನಕ್ಕೆ ಆದ್ಯತೆ ನೀಡಲಾಗುತ್ತಿದ್ದು, ಇದರೊಂದಿಗೆ ಗುತ್ತಿಗೆದಾರರು ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಬೇಕು. ಈ ಸಾಲಿನ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಿರುವುದರಿಂದ ಕಳೆದ ವರ್ಷಕ್ಕಿಂತ ಈ ಬಾರಿ ದೀಪಾಲಂಕಾರ ಹೆಚ್ಚಿನ ಆಕರ್ಷಕವಾಗಿರಬೇಕು. ಕಳೆದ ತಿಂಗಳು ಬೆಂಗಳೂರಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀಪಾಲಂಕಾರವನ್ನು ಆಕರ್ಷಕ ಹಾಗೂ ಅಚ್ಚುಕಟ್ಟಾಗಿ ಮಾಡುವಂತೆ ಸೂಚನೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಯಾವುದೇ ಲೋಪವಾಗದಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಸುರಕ್ಷತೆಗೆ ಗಮನ ಹರಿಸಬೇಕು: ನವರಾತ್ರಿ ವೇಳೆ ದೀಪಾಲಂಕಾರದಲ್ಲಿ ಮೈಸೂರು ಸೌಂದರ್ಯ ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ದೀಪಾಲಂಕಾರದ ಮುಂದೆ ಫೋಟೋ ತೆಗೆಸಿಕೊಳ್ಳುವುದಕ್ಕೆ ಸಾಕಷ್ಟು ಮಂದಿ ಮುಗಿ ಬೀಳುತ್ತಾರೆ. ನವರಾತ್ರಿ ವೇಳೆ ಮಳೆ ಬೀಳುವ ಸಾಧ್ಯತೆಯೂ ಇರುವುದರಿಂದ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಆಗ್ಗಿಂದಾಗ್ಗೆ ದೀಪಾಲಂಕಾರಕ್ಕಾಗಿ ಬಳಸಿರುವ ವೈರ್‌ಗಳ ಪರಿಶೀಲನೆ ಮಾಡಿ, ಜನ ಸಂಚರಿಸುವ ಸ್ಥಳದಲ್ಲಿ ಎಚ್ಚರಿಕೆಯಿಂದ ಗಮನಿಸಬೇಕು ಎಂದು ಸೂಚನೆ ನೀಡಿದರು.

ದೀಪಾಲಂಕಾರದ ರೂಪುರೇಷೆ ನಿರ್ಧರಿಸಿ: ಈ ಸಾಲಿನ ದಸರಾ ಮಹೋತ್ಸವ ಸೆ.22ರಂದು ಉದ್ಘಾಟನೆಗೊಳ್ಳಲಿದ್ದು, ಅ.2ರಂದು ಜಂಬೂಸವಾರಿ ನೆರವೇರಲಿದೆ. ಈ ಹಿನ್ನೆಲೆಯಲ್ಲಿ ಸೆ.18ರೊಳಗೆ ದೀಪಾಲಂಕಾರ ಪೂರ್ಣಗೊಳ್ಳಬೇಕು. ವಿವಿಧೆಡೆ ಅಳವಡಿಸುವ ಕಲಾಕೃತಿ ಸೇರಿದಂತೆ ವಿವಿಧ ದೀಪಾಲಂಕಾರದ ರೂಪುರೇಷೆ ಅಂತಿಮಗೊಳಿಸಬೇಕು ಎಂದರು.

ವೃತ್ತಗಳಲ್ಲಿ ಅಲಂಕಾರ: ದಸರಾ ಜಂಬೂ ಸವಾರಿ ಮೆರವಣಿಗೆ ಸಾಗುವ ರಾಜ ಮಾರ್ಗದಲ್ಲಿ ಈ ಬಾರಿ ಆಕರ್ಷಕವಾಗಿ ದೀಪಾಲಂಕಾರ ಮಾಡಲು ಚಿಂತನೆ ನಡೆಸಲಾಗಿದೆ. ಅಲ್ಲದೆ ನಗರದ ಪ್ರಮುಖ ವೃತ್ತಗಳಲ್ಲಿ ವಿನೂತನ ವಿನ್ಯಾಸದ ದೀಪಾಲಂಕಾರ ಮಾಡಬೇಕೆಂಬ ಉದ್ದೇಶವಿದೆ ಎಂದು ತಿಳಿಸಿದರು.

ದಸರಾ ಮಹೋತ್ಸವದ ಅಂಗವಾಗಿ ನಡೆಸುವ 'ಯುವ ಸಂಭ್ರಮ' ಹಾಗೂ 'ಯುವ ದಸರಾ' ಕಾರ್ಯಕ್ರಮದ ಸ್ಥಳಗಳ ಸುತ್ತಲಿನ ರಸ್ತೆ ಹಾಗೂ ವೃತ್ತಗಳಿಗೆ ಆಕರ್ಷಣೀಯ ದೀಪಾಲಂಕಾರ ಮಾಡಬೇಕು. ಯುವ ಸಂಭ್ರಮ ಕಾರ್ಯಕ್ರಮ ದಸರಾ ಆರಂಭಕ್ಕೂ ಮೊದಲೇ ನಡೆಯುವುದರಿಂದ ಈ ಸ್ಥಳದಲ್ಲಿ ಮಾಡಲಾಗುವ ದೀಪಾಲಂಕಾರ ಎಲ್ಲರ ಆಕರ್ಷಣೆ ಮತ್ತು ಕುತೂಹಲವನ್ನು ಹೆಚ್ಚುವಂತೆ ಮಾಡುತ್ತದೆ. ಆದ್ದರಿಂದ ಈ ಭಾಗಗಳಲ್ಲಿ ದೀಪಾಲಂಕಾರ ಮಾಡುವವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ನಿಗಮದ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ಮೈಸೂರು ವಲಯ ಕಚೇರಿಯ ಮುಖ್ಯ ಇಂಜಿನಿಯರ್ ಮೃತ್ಯುಂಜಯ, ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ರಮೇಶ್ ಸೇರಿದಂತೆ ಸೆಸ್ಕ್‌ನ ಪ್ರಮುಖ ಅಧಿಕಾರಿಗಳು ಹಾಗೂ ವಿದ್ಯುತ್ ಗುತ್ತಿಗೆದಾರರು ಇದ್ದರು.

ಇಂದಿನಿಂದ ರಾಮಕೃಷ್ಣನಗರದಲ್ಲಿ ಆ.12ರವರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ



ಮೈಸೂರು, ಆ.8-ಮೈಸೂರಿನ ರಾಮಕೃಷ್ಣನಗರದ ಕಾರ್ತಿಕ ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಧಾಮದಲ್ಲಿ ನಾಳೆ(ಆ.9)ಯಿಂದ ಆ.12ರವರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ನಡೆಯಲಿದೆ.

ಆ.9ರಂದು ಬೆಳಗ್ಗೆ 7.30ಕ್ಕೆ ಋಗ್ವೇದ ಹಾಗೂ ಯಜುರ್ವೇದ ಉಪಾಕರ್ಮ, ಸಂಜೆ 7.30ಕ್ಕೆ ಪ್ರವಚನ ಮಂಗಳ, ಗೋಪೂಜೆ, ಲಕ್ಷ್ಮೀ ಪೂಜೆ ಹಾಗೂ ಧನ್ಯಪೂಜೆ ನಡೆಯಲಿದೆ.

ಆ.10ರಂದು ಬೆಳಗ್ಗೆ 5ಕ್ಕೆ ನಿರ್ಮಾಲ್ಯ, 7.30ಕ್ಕೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, 10ಕ್ಕೆ ವಿದ್ವಾಂಸರಿಂದ ಪ್ರವಚನ, 11ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸಂಜೆ 5.45ಕ್ಕೆ ಸಂಗೀತ ಕಾರ್ಯಕ್ರಮ, 7 ಗಂಟೆಗೆ ಪಲ್ಲಕ್ಕಿ ಉತ್ಸವ, ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ ನಡೆಯಲಿದೆ.

ಆ.11ರಂದು ಬೆಳಗ್ಗೆ 5ಕ್ಕೆ ನಿರ್ಮಾಲ್ಯ, 7.30ಕ್ಕೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, 10ಕ್ಕೆ ಡಾ.ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ ಪ್ರವಚನ, 10.45ಕ್ಕೆ ರಾಯರಿಗೆ ನೂತನ ರಥ ಸಮರ್ಪಣೆ, 11.30ಕ್ಕೆ ಮಹಾಮಂಗಳಾರತಿ, 11.45ರಿಂದ 1.45ರವರೆಗೆ ಅನ್ನಸಂತರ್ಪಣೆ, ಸಂಜೆ 5.45ಕ್ಕೆ ಸಂಗೀತ ಕಾರ್ಯಕ್ರಮ, 7 ಗಂಟೆಗೆ ಪಲ್ಲಕ್ಕಿ ಉತ್ಸವ, ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ ನಡೆಯಲಿದೆ.

ಆ.12ರಂದು ಬೆಳಗ್ಗೆ 5ಕ್ಕೆ ನಿರ್ಮಾಲ್ಯ, 7.30ಕ್ಕೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, 11ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸಂಜೆ 5.45ಕ್ಕೆ ಸಂಗೀತ ಕಾರ್ಯಕ್ರಮ, 7ಕ್ಕೆ ವಿಶೇಷ ದಾನಿಗಳಿಗೆ ಹಾಗೂ ಸೇವಾಕರ್ತೃಗಳಿಗೆ ಸನ್ಮಾನ, 7.30ಕ್ಕೆ ಪಲ್ಲಕ್ಕಿ ಉತ್ಸವ, ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ ನಡೆಯಲಿದೆ.

ಜಯಲಕ್ಷ್ಮಿಪುರಂ ಶ್ರೀ ರಾಘವೇಂದ್ರ ಮಠದಲ್ಲಿ ನಾಳೆಯಿಂದ 12ರವರೆಗೆ ರಾಯರ 354ನೇ ಆರಾಧನಾ ಮಹೋತ್ಸವ

ಮೈಸೂರು, ಆ.8- ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ರಾಘವೇಂದ್ರ ಮಠದಲ್ಲಿ ಆ.10ರಿಂದ 12ರವರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವ ನಡೆಯಲಿದೆ.

ಆರಾಧನಾ ದಿನಗಳಲ್ಲಿ ಬೆಳಗ್ಗೆ 5.30ಕ್ಕೆ ಸುಪ್ರಭಾತ, 7 ರಿಂದ 7.45ರವರೆಗೆ ಮಹಾ ಪಂಚಾಮೃತ ಅಭಿಷೇಕ, 8 ರಿಂದ 10ರವರೆಗೆ ಕನಕಾಭಿಷೇಕ, ಸರ್ವಸೇವೆ ಇತ್ಯಾದಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30ರಿಂದ 2 ಗಂಟೆವರೆಗೆ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ.

ಆ.10ರಂದು ಸಂಜೆ 6.30ರಿಂದ ರಾತ್ರಿ 8.30ರವರೆಗೆ ವಿದುಷಿ ಸ್ಫೂರ್ತಿ ರಾವ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್ ವಯೋಲಿನ್, ವಿದ್ವಾನ್ ಹರಿಹರನ್ ಮೃದಂಗ, ವಿದ್ವಾನ್ ಶಮಿತ್ ಗೌಡ ಘಟಂ.

ಆ.11ರಂದು ಸಂಜೆ 5 ರಿಂದ 6ರವರೆಗೆ ಸತ್ಯಧಾನ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, 6.30 ರಿಂದ 7.30ರವರೆಗೆ ಉಸ್ತಾದ್ ಫಿಯಾಜ್ ಖಾನ್ ಮತ್ತು ತಂಡದವರಿಂದ ಗಾಯನ ನಡೆಯಲಿದೆ.

ಆ.12ರಂದು ಸಂಜೆ 6ರಿಂದ 8.30ರವರೆಗೆ ವಿದುಷಿ ಸ್ಮಿತ ಶ್ರೀಕಿರಣ್ ಕೊಳಲು, ವಿದ್ವಾನ್ ಕೇಶವ ಮೋಹನ್ ಕುಮಾರ್ ವಯೋಲಿನ್, ವಿದ್ವಾನ್ ಎ.ರಾಧೇಶ ಮೃದಂಗ, ವಿದ್ವಾನ್ ಶರತ್ ಕೌಶಿಕ ಘಟಂ.

ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್‌ನಿಂದ ರಾಯರ ಆರಾಧನಾ ಮಹೋತ್ಸವ

ಮೈಸೂರು, ಆ.8-ಮೈಸೂರಿನ ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್ ವತಿಯಿಂದ ವಿವಿ ಮೊಹಲ್ಲಾದ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನದಲ್ಲಿ ಆ.10ರಿಂದ 12ರವರೆಗೆ ರಾಯರ 354ನೇ ಆರಾಧನಾ ಮಹೋತ್ಸವ ನಡೆಯಲಿದೆ.

ಪ್ರತಿದಿನ ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, ಮಧ್ಯಾಹ್ನ 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 7ರಿಂದ ರಾತ್ರಿ 8.30ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಗೀತ ಕಾರ್ಯಕ್ರಮದ ನಂತರ ಪಲ್ಲಕ್ಕಿ ಉತ್ಸವ, ರಥೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ.

ಮೈಸೂರು-ಅರಸೀಕೆರೆ ರೈಲ್ವೆ ಮಾರ್ಗದ ಹಳಿ ಪುನರ್ ಜೋಡಣೆ ಕಾಮಗಾರಿ ಹಿನ್ನೆಲೆ

ಮೇಟಗಳ್ಳಿ-ಬಿಎಂಶ್ರೀ ನಗರದ ನಡುವೆ ರೈಲ್ವೆ ಹಳಿ ಮಾರ್ಗ ಸಂಚಾರ ಬಂದ್



ಮೈಸೂರಿನ ಮೇಟಗಳ್ಳಿ-ಬಿಎಂಶ್ರೀ ನಗರದ ನಡುವಿನ ರೈಲ್ವೆ ಹಳಿ ಮಾರ್ಗವನ್ನು ಬಂದ್ ಮಾಡಿರುವುದು

ಮೈಸೂರು, ಆ.8(ಎಂಕೆ)- ಮೈಸೂರು-ಅರಸೀಕೆರೆ ರೈಲ್ವೆ ಮಾರ್ಗ ಹಳಿ ಪುನರ್ ಜೋಡಣೆ ಕಾಮಗಾರಿ ಹಿನ್ನೆಲೆಯಲ್ಲಿ ಮೇಟಗಳ್ಳಿ-ಬಿಎಂಶ್ರೀ ನಗರದ ನಡುವೇ ವಾಹನ ಸಂಚಾರವನ್ನು ನಾಳೆ(ಆ.9)ಯಿಂದ ಮೂರು ದಿನಗಳ ಕಾಲ ಬಂದ್ ಮಾಡಲಾಗಿದೆ.

ರೈಲುಗಳ ವೇಗ ಹೆಚ್ಚಿಸುವ ನಿಟ್ಟಿನಲ್ಲಿ ಕಳೆದ ಜೂನ್ ತಿಂಗಳಿಂದ ಮೈಸೂರು-ಅರಸೀಕೆರೆ ನಡುವೆ ಹೊಸ ರೈಲ್ವೆ ಹಳಿ ಜೋಡಣೆ ಹಾಗೂ ನವೀಕರಣ ಕಾಮಗಾರಿ ಬಿರುಸಿನಿಂದ ನಡೆಯುತ್ತಿದೆ. ಈಗಾಗಲೇ ಕಾಮಗಾರಿ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿದ್ದು, ಮೈಸೂರು ನಗರ ವ್ಯಾಪ್ತಿಯಲ್ಲಿ ಕಾಮಗಾರಿ ಚುರುಕುಗೊಳಿಸಲಾಗಿದೆ.

ಮೈಸೂರಿನ ಕೆಆರ್.ಎಸ್ ರಸ್ತೆಯ ರೈಲ್ವೆ ಜಂಕ್ಷನ್(ಫಾಲ್ಕನ್ ಟಯರ್ ಕಾರ್ಖಾನೆ ಸಮೀಪ)ನಿಂದ ರೈಲ್ವೆ ನಿಲ್ದಾಣದವರೆಗೆ ಕಾಮಗಾರಿ ನಡೆಯುತ್ತಿರುವ ಹಿನ್ನಲೆಯಲ್ಲಿ ಮೇಟಗಳ್ಳಿ ಹಾಗೂ ಬಿಎಂಶ್ರೀ ನಗರದ ನಡುವಿನ ರಸ್ತೆಯನ್ನು ಬಂದ್ ಮಾಡಲಾಗಿದ್ದು, ವಾಹನ ಸವಾರರಿಗೆ ಬದಲಿ ವ್ಯವಸ್ಥೆ ಸೂಚಿಸಲಾಗಿದೆ.

ಬದಲಿ ಮಾರ್ಗ: ಕೆ.ಆರ್.ಎಸ್ ರಸ್ತೆ, ಹೆಬ್ಬಾಳ, ಗೋಕುಲಂ, ರಿಂಗ್ ರಸ್ತೆ (ಮಣಿಪಾಲ್ ಆಸ್ಪತ್ರೆ ಕಡೆಯಿಂದ) ಕಡೆಯಿಂದ ಬಿಎಂಶ್ರೀ ನಗರಕ್ಕೆ ಹೋಗಬೇಕಾದ ವಾಹನ ಸವಾರರು ಕೆಆರ್.ಎಸ್ ರಸ್ತೆ ಜಂಕ್ಷನ್ ಮೂಲಕ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಎದುರು ಹಾಗೂ ಆರ್‌ಬಿಐ ಜಂಕ್ಷನ್ ಸಮೀಪದಲ್ಲಿರುವ ಅಂಡರ್ ಪಾಸ್ ಮೂಲಕ ಕರಕುಶಲನಗರ ಹಾಗೂ ಬಿಎಂಶ್ರೀ ನಗರ ತಲುಪಬಹುದಾಗಿದೆ ಹಾಗೆಯೇ ಬೃಂದಾವನ ಬಡಾವಣೆ ಮಾರ್ಗವಾಗಿ ಜಾವಾ ಫ್ಯಾಕ್ಟರಿ ರಸ್ತೆ ಸಮೀಪದ ಅಂಡರ್ ಪಾಸ್ ಮೂಲಕ ಹೈವೆ ಸರ್ಕಲ್, ಜೋಡಿ ತೆಂಗಿನಮರ ರಸ್ತೆ ಮೂಲಕ ಬಿಎಂಶ್ರೀ ನಗರಕ್ಕೆ ತೆರಳಬಹುದಾಗಿದೆ ಎಂದು ವಿವಿ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಧರ್ಮಸ್ಥಳ ಧರ್ಮಾಧಿಕಾರಿ ಆರೋಪಿಯಾಗಿಸಲು ಸಾಕ್ಷಿಗಾಗಿ ಶೋಧ!?

ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಾಪ್ ಸಿಂಹ ಆಕ್ರೋಶ

- ಸಾವಿರಾರು ಕೊಲೆ ಮಾಡಲು ಧರ್ಮಾಧಿಕಾರಿ ಏನು ದಾವೂದ್‌ನಂತೆ ಡಾನಾ
- ಇಸ್ಲಾಂ ವ್ಯಕ್ತಿಯೊಬ್ಬನಿಂದ ಅಪಪ್ರಚಾರ; ಹಿಂದೂಗಳು ನಂಬುತ್ತಿರುವುದು ದುರಂತ; ಧರ್ಮಸ್ಥಳ ಕಬಳಿಸಲು ಹುನ್ನಾರ



ಮೈಸೂರು, ಆ.8(ಬಿಎಲ್‌ಯು)- ಧರ್ಮಸ್ಥಳದಲ್ಲಿ ಶವಗಳ ಪತ್ತೆ ಪ್ರಕರಣದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಅವರನ್ನು ಆರೋಪಿ ಎಂದು ತೀರ್ಮಾನ ಮಾಡಿರುವ ರಾಜ್ಯ ಸರ್ಕಾರ ಅದಕ್ಕೆ ಅವಶ್ಯವಿರುವ ಸಾಕ್ಷಿಗಾಗಿ ಶೋಧ ನಡೆಸಿದೆ ಎಂದು ಪ್ರತಾಪ್ ಸಿಂಹ ಗಂಭೀರ ಆರೋಪ ಮಾಡಿದರು.

ನೂರಾರು ಕೊಲೆ ಮಾಡಿಸಲು ಧರ್ಮಸ್ಥಳದ ಧರ್ಮಾಧಿಕಾರಿ ಅವರೇನು ದಾವೂದ್ ಇಬ್ರಾಹಿಂ ತರಹ ದೊಡ್ಡ ಡಾನಾ ಎಂದು ಪ್ರಶ್ನಿಸಿದರು. ಧರ್ಮಸ್ಥಳವನ್ನು ಟಾರ್ಗೆಟ್ ಮಾಡಲಾಗಿದ್ದು, ಇದರ ಹಿಂದೆ ವ್ಯವಸ್ಥಿತ ಪಿತೂರಿ ಇದೆ. ಒಂದೇ ಒಂದು ಸಾಕ್ಷಿ ಇಲ್ಲದೆ ವೀರೇಂದ್ರ ಹೆಗಡೆ ಅವರನ್ನು ಏಕೆ ಆರೋಪಿ ಸ್ಥಾನಕ್ಕೆ ತರಲಾಗಿದೆ ಎಂದು ಮರು ಪ್ರಶ್ನಿಸಿದ ಪ್ರತಾಪ್ ಸಿಂಹ ಅವರು, ಶವಗಳ ಬಗ್ಗೆ ಮಾಹಿತಿ ನೀಡುತ್ತಿರುವ ಅನಾಮಿಕನ ಪೂರ್ವಪರವನ್ನು ಎಸ್‌ಐಟಿಯವರು ಮೊದಲು ತನಿಖೆ ಮಾಡಿ ಅದರ ವಿವರ ಬಹಿರಂಗ ಮಾಡಲಿ ಎಂದು ಸಲಹೆ ನೀಡಿದರು.

ಪ್ರಜ್ಞಾವಂತಿಕೆ ಕಳೆದುಕೊಂಡಿರುವ ಹಿಂದೂ ಸಮಾಜಕ್ಕೆ ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿರುವುದು ಅರ್ಥವಾಗುತ್ತಿಲ್ಲ. ಇಸ್ಲಾಂ ವ್ಯಕ್ತಿಯೊಬ್ಬ ಧರ್ಮಸ್ಥಳದ ಬಗ್ಗೆ ಅಪನಂಬಿಕೆ ಮೂಡಿಸಿ, ಅಪಪ್ರಚಾರ ಮಾಡುತ್ತಿದ್ದಾನೆ. ಅದನ್ನು ಹಿಂದೂಗಳು ನಂಬುತ್ತಿರುವುದು ದುರಂತ ವಿಚಾರ ಎಂದು ಹೇಳಿದರು.

ಆರೋಪಿಯನ್ನು ಮೊದಲೇ ನಿರ್ಧರಿಸಿ ಅದಕ್ಕೆ ಅವಶ್ಯವಿರುವ ಸಾಕ್ಷ್ಯ ಹುಡುಕುತ್ತಿರುವ ಮೊದಲ ಪ್ರಕರಣ ಇದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೀನು ತಿಂದು ಧರ್ಮಸ್ಥಳದ ದೇವಸ್ಥಾನಕ್ಕೆ ಹೋಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಧರ್ಮಸ್ಥಳದ ನಂಬಿಕೆ ಬಗ್ಗೆ ತನಿಖೆ ಮಾಡಿಸುತ್ತಿದ್ದಾರೆ ಎಂದು ಆರೋಪಿಸಿದರು.

ಸೌಜನ್ಯ ಪ್ರಕರಣಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ಸೌಜನ್ಯ ಅತ್ಯಾಚಾರ ಪ್ರಕರಣದ ಬಗ್ಗೆ ಈಗಾಗಲೇ ಮೂರು ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲಾಗಿದೆ. ಸೌಜನ್ಯ ಅವರ ತಾಯಿ ಹೇಳಿದರೆ ಅವರ ಪರವಾಗಿ ನಾವೇ ಅರ್ಜಿ ಹಾಕುತ್ತೇವೆ ಅದು ಬಿಟ್ಟು ಸೌಜನ್ಯ ಕೊಲೆಯನ್ನು ಅನಾವಶ್ಯಕವಾಗಿ ಈ ವಿಚಾರಕ್ಕೆ ಹೋಲಿಕೆ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಒಟ್ಟಾರೆ ಧರ್ಮಸ್ಥಳವನ್ನು ಕಬಳಿಸಲು ರಾಜ್ಯ ಸರ್ಕಾರ ಪ್ರಯತ್ನ ಆರಂಭಿಸಿದೆ. ಟೆಸ್ಟ್ ಮ್ಯಾಚ್ ಗಿಂತಲೂ ಮಿಗಿಲಾಗಿ ಧರ್ಮಸ್ಥಳದ ವಿಚಾರ ದಿನ ಪ್ರಚಾರ ನಡೆಯುತ್ತಿದೆ ಎಂದು ಪ್ರತಾಪ್ ಸಿಂಹ ಬೇಸರ ವ್ಯಕ್ತಪಡಿಸಿದರು.

ಕುಶಲಕರ್ಮಿಗಳಿಗೆ ಸನ್ಮಾನ



ರಾಷ್ಟ್ರೀಯ ಕೈ ಮಗ್ಗ ದಿನದ ಅಂಗವಾಗಿ ಕೆ.ಆರ್. ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ನಂಜುಮಳಿಗೆ ವೃತ್ತದಲ್ಲಿ ಬಿದಿರಿನಿಂದ ವಸ್ತುಗಳನ್ನು ತಯಾರಿಸುವ ಕರಕುಶಲ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕೆಆರ್ ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಸರ್ವಮಂಗಳ, ಕ್ಷೇತ್ರದ ಅಧ್ಯಕ್ಷ ಗೋಪಾಲ ರಾಜೇ ಅರಸ್, ಮೈಸೂರು ನಗರ ಒಬಿಸಿ ಮೋರ್ಚಾ ಉಪಾಧ್ಯಕ್ಷರಾದ ಹರೀಶ್ ಅಂಕಿತ್, ಮಹಿಳಾ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಮುಖಂಡರುಗಳಾದ ಆಶಾಲಕ್ಷ್ಮಿ ನಾರಾಯಣ್, ರೂಪ, ಮಂಜುಳಾ, ನಂದಾಸಿಂಗ್, ಭಾಗ್ಯ, ವನಜಾಕ್ಷಿ, ಮಧು, ಲತಾ ಮುಂತಾದವರಿದ್ದರು

ವರಮಹಾಲಕ್ಷ್ಮಿ ಅಂಗವಾಗಿ ಸಾಹುಕಾರ್ ಚೆನ್ನಯ್ಯ ಅಖಾಡದಲ್ಲಿ ಮಟ್ಟಿ ಪೂಜೆ



ಸಾಹುಕಾರ್ ಚೆನ್ನಯ್ಯ ಅಖಾಡದಲ್ಲಿ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮಟ್ಟಿ ಪೂಜೆ ನೆರವೇರಿಸಲಾಯಿತು.

ಹೊಸ ಮ್ಯಾಟ್ ಅಳವಡಿಕೆ...

ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಸಾಹುಕಾರ್ ಶ್ರೀ ಚೆನ್ನಯ್ಯ (ಕುಸ್ತಿ ಅಖಾಡ) ಕ್ರೀಡಾಂಗಣದ ಮ್ಯಾಟ್ ಕುಸ್ತಿ ತರಬೇತಿ ನಡೆಯುವ ಒಳಾಂಗಣದಲ್ಲಿ ಸುಮಾರು 60 ಸಾವಿರ ರೂ.ವೆಚ್ಚದಲ್ಲಿ ಹೊಸದಾಗಿ ಮ್ಯಾಟ್ ಅಳವಡಿಸಲಾಗಿದೆ. ಪೈಲ್ವಾನರ ತಯಾರಿಕೆ ಸಂಘದ ಮುಖ್ಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಸಂಘ ಕಾರ್ಯನಿರ್ವಹಿಸುತ್ತಿದೆ.

- ಪೈ ಎಸ್.ಮಹದೇವ್, ಗೌರವಾಧ್ಯಕ್ಷ, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘ

ಮೈಸೂರು, ಆ.8(ಎಂಕೆ)- ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿರುವ ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಸಾಹುಕಾರ್ ಶ್ರೀ ಚೆನ್ನಯ್ಯ (ಕುಸ್ತಿ ಅಖಾಡ)ಕ್ರೀಡಾಂಗಣದಲ್ಲಿ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮಟ್ಟಿ(ಮಣ್ಣು) ಪೂಜೆ ನೆರವೇರಿಸಲಾಯಿತು.

ಪ್ರತಿವರ್ಷವೂ ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯದಂತೆ ಶುಕ್ರವಾರ ಚಾಮುಂಡಿಬೆಟ್ಟದ ತಪ್ಪಲಿನಿಂದ ಮೂರು ಮಂಕರಿಗಳಲ್ಲಿ ಮಟ್ಟಿ(ಮಣ್ಣು)ಯನ್ನು ಪೂಜಾ ವಿಧಿ-ವಿಧಾನಗಳೊಂದಿಗೆ ನಾದಸ್ವರವನ್ನೊಳಗೊಂಡ ಮೆರವಣಿಗೆ ಮೂಲಕ ಅಖಾಡಕ್ಕೆ ತಂದಿರಿಸಿ, ಪೂಜೆ ಸಲ್ಲಿಸಲಾಯಿತು.

ಬಳಿಕ ಮಟ್ಟಿಯನ್ನು ಅಲಂಕರಿ, ಮಹಾಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ಮಾಡಲಾಯಿತು. ಅಖಾಡದಲ್ಲಿ ತರಬೇತಿ ಪಡೆಯುತ್ತಿರುವ ಪೈಲ್ವಾನರೇ ಚಾಮುಂಡಿಬೆಟ್ಟದ ಪಾದದಿಂದ ಮಟ್ಟಿಯನ್ನು ತಲೆ ಮೇಲೆ ಹೊತ್ತು ತಂದದ್ದು, ವಿಶೇಷವಾಗಿತ್ತು.

ಶುದ್ಧ ಕೆಮ್ಮಣ್ಣು: ಅಖಾಡದಲ್ಲಿ ನಿತ್ಯ ಕುಸ್ತಿ ಅಭ್ಯಾಸ ನಡೆಸುವುದರಿಂದ ಮಣ್ಣು ಕಡಿಮೆಯಾಗಲಿದೆ. ಹಾಗಾಗಿ ಮತ್ತು ಸಂಪ್ರದಾಯದಂತೆ ಪ್ರತೀ ವರ್ಷ ವರಮಹಾಲಕ್ಷ್ಮಿ ಹಬ್ಬದಿಂದ ಚಾಮುಂಡಿಬೆಟ್ಟದ ಪಾದದಿಂದ ಮೂರು ಮಂಕರಿಯಲ್ಲಿ ಮಣ್ಣನ್ನು ತಂದು ಪೂಜೆ ಮಾಡಿ, ಅಂಬಾ ದೇವಿ ಪೂಜೆ, ಮುತ್ತೈದೆ ಪೂಜೆ ನಂತರ ಅಖಾಡದ ಹಳೇ ಮಟ್ಟಿಯೊಂದಿಗೆ ಹೊಸ ಮಣ್ಣನ್ನು ಸೇರಿಸಲಾಗುವುದು ಎಂದು ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಗೌರವಾಧ್ಯಕ್ಷ ಯಜಮಾನ್ ಪೈ ಎಸ್.ಮಹದೇವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಚಾಮುಂಡಿಬೆಟ್ಟದ ಪಾದದಲ್ಲಿ ಶುದ್ಧ ಕೆಮ್ಮಣ್ಣು ದೊರೆಯಲಿದೆ. ಅಲ್ಲದೆ ಕುಸ್ತಿ ಅಖಾಡಕ್ಕೆ ಅನುಕೂಲಕರವಾದ ಮಣ್ಣಾಗಿದ್ದು, ಪ್ರತೀ ವರ್ಷವೂ ದಸರಾ ಸಿದ್ದತೆಗೂ ಮುನ್ನ ವರಮಹಾಲಕ್ಷ್ಮಿ ಹಬ್ಬದ ದಿನದಂದು ಹೊಸ ಮಟ್ಟಿ ತಂದು ಪೂಜೆ ಸಲ್ಲಿಸಿ, ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ಹೇಳಿದರು.

ಈ ವೇಳೆ ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಪಿ.ನಾಗೇಂದ್ರ, ಪ್ರದಾನ ಕಾರ್ಯದರ್ಶಿ ಪೈ.ಎಂ.ಸುಮಿತ್ರ, ಕೋಶಾಧ್ಯಕ್ಷ ಎಂ.ಪ್ರವೀಣ್ ಕುಮಾರ್, ತರಬೇತುದಾರರಾದ ಹಿರಿಯ ಪೈ.ಶ್ರೀನಿವಾಸ್‌ಗೌಡ, ಹಿರಿಯ ಪೈಲ್ವಾನರಾದ ಪೈ.ದೇವರಾಜ್, ಪೈ.ನಾಗರಾಜ್, ಪೈ.ಸತೀಶ್, ಪೈ.ರವಿಕುಮಾರ್ ಮತ್ತಿತರರಿದ್ದರು.

ಗೋಧೂಳಿ ಲಗ್ನದಲ್ಲಿ ಅರಮನೆ ಅಂಗಳ ಪ್ರವೇಶಿಸಲಿದೆ ಗಜಪಡೆ

- ನಾಳೆ ಸಂಜೆ 6.45 ರಿಂದ 7.20ರೊಳಗೆ ಮುಹೂರ್ತ ನಿಗಧಿ
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಗಜಪಡೆಗೆ ಪೂಜೆ
- ಅಂದು ಸಂಜೆ 5.15ಕ್ಕೆ ಅರಣ್ಯ ಭವನದಿಂದ ಬೀಳ್ಕೊಡುಗೆ

ಮೈಸೂರು, ಆ.8(ಎಂಟಿವೈ)- ಮೈಸೂರಿನ ಅಶೋಕಪುರಂನ ಅರಣ್ಯ ಭವನದಲ್ಲಿ ಬೀಡು ಬಿಟ್ಟಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ 9 ಆನೆಗಳು ಆ.10ರಂದು ಸಂಜೆ 6.45ರಿಂದ 7.20ರ ಶುಭ ಮಕರ ಗೋಧೂಳಿ ಲಗ್ನದಲ್ಲಿ ಅರಮನೆ ಅಂಗಳ ಪ್ರವೇಶಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಗಣ್ಯರು, ಗಜಪಡೆಯನ್ನು ಬರಮಾಡಿಕೊಳ್ಳಲಿದ್ದಾರೆ.



ಅರಮನೆಯ ಜಯಮಾರ್ತಾಂಡ ದ್ವಾರದಲ್ಲಿ ಅರಮನೆ ಮಂಡಳಿ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಅರಮನೆ ಆವರಣಕ್ಕೆ ಬರಮಾಡಿಕೊಳ್ಳಲಾಗುತ್ತದೆ. ಆ.4ರಂದು ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಿ ಅರಣ್ಯ ಭವನದ ಆವರಣದಲ್ಲಿ ಬೀಡು ಬಿಟ್ಟಿರುವ ಮೊದಲ ತಂಡದ 9 ಆನೆಗಳಿಗೆ ಆ.10ರಂದು ಸಂಜೆ 5ರಿಂದ 5.15ರ ವೇಳೆಗೆ ಅರಣ್ಯ ಇಲಾಖೆ ವತಿಯಿಂದ ಪೂಜೆ ಸಲ್ಲಿಸಿ, ಬೀಳ್ಕೊಡಲಾಗುತ್ತದೆ. ಬಳಿಕ ಅಶೋಕಪುರಂ, ಅಶೋಕ ವೃತ್ತ(ಬಲ್ಲಾಳ್ ಸರ್ಕಲ್), ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ ಗನ್‌ಹೌಸ್ ವೃತ್ತ ಬಿ.ಎನ್.ರಸ್ತೆ ಮೂಲಕ ಜಯಮಾರ್ತಾಂಡ ದ್ವಾರದ ಬಳಿ ಆಗಮಿಸಲಿವೆ.

ನಂತರ ಅಂದು ಸಂಜೆ 6.45 ರಿಂದ 7.20ರ ಶುಭ ಮಕರ ಗೋಧೂಳಿ ಲಗ್ನದಲ್ಲಿ ಗಜಪಡೆಗೆ ಅರಮನೆ ಮಂಡಳಿ ವತಿಯಿಂದ ಪೂಜೆ ಸಲ್ಲಿಸಿ, ಸ್ವಾಗತಿಸಿ ಬರಮಾಡಿಕೊಳ್ಳಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಗಜಪಡೆಯ ಮೊದಲ ತಂಡವನ್ನು ಬರಮಾಡಿಕೊಳ್ಳಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಗಜಪಡೆಗೆ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಿದ್ದಾರೆ. ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸಲಿರುವ ಈ ಕಾರ್ಯಕ್ರಮದಲ್ಲಿ ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶಿವರಾಜ್ ಸಂಗಪ್ಪ ತಂಗಡಗಿ, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಅನಿಲ್ ಕುಮಾರ್ ಚಿಕ್ಕಮಾದು, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷರಾದ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಶಾಸಕರಾದ ಜಿ.ಟಿ.ದೇವೇ ಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ವೃತ್ತದ ಸಿಎಫ್ ರವಿಶಂಕರ್, ಡಿಸಿಎಫ್ ಡಾ.ಐಬಿ. ಪ್ರಭುಗೌಡ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಮೂರನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಆಗಿದೆ, ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಪತ್ನಿ ಶ್ರೀಮತಿ ಕಲಾವತಿ, ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು.

ಎಂ. ಪುಟ್ಟಸ್ವಾಮಿ ರವರು

ಕಬಡ್ಡಿ ಆಟಗಾರರು, ರೈಲ್ವೆ ಇಲಾಖೆ.

ನಿಧನ



ಹುಣಸೂರು ತಾಲ್ಲೂಕು ಗಾವಡಗೆರೆ ಗ್ರಾಮದ

ಅಣ್ಣಾಜಿ ರಾವ್ ಕಾಳೆ (72 ವರ್ಷ)

(ಮೈಕ್ ಸೆಟ್ & ಸಪ್ತಗಿರಿ ಶಾಮಿಯಾನ ಮಾಲೀಕರು) ಇವರು ದಿನಾಂಕ 08.08.2025ರಂದು ನಿಧನರಾದರು ಎಂದು ತಿಳಿಸಲು ವಿಷಾದ ವ್ಯಕ್ತಪಡಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿ. 9.8.2025 (ಶನಿವಾರ) ಬೆಳಿಗ್ಗೆ 10 ಗಂಟೆಗೆ ಮೃತರ ಸ್ವ ಗ್ರಾಮ ಗಾವಡಗೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಕುಟುಂಬವರ್ಗ

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರುಗಳಾದ ಲೇಟ್ ಪಿ. ಸತೀಶ್ ರವರ ಧರ್ಮಪತ್ನಿ ಶ್ರೀಮತಿ ಭಾನು ಸತೀಶ್ ಹಾಗೂ ಇವರ ಮಗಳಾದ ಕುಮಾರಿ ಸಾನ್ವಿ ಸತೀಶ್ (ಮೈನರ್) ಇವರುಗಳಿಂದ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಹೆಬ್ಬಾಳ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ದಲ್ಲಿರುವ ಕೈಗಾರಿಕಾ ಶೆಡ್ ನಂ: ಸಿ–87, (ನಮೂನೆ–3(ನಿಯಮ 20)ರ ಪ್ರಕಾರ ಸ್ವತ್ತಿನ ಸಂಖ್ಯೆ: 9222576311) ಪ್ರಸ್ತುತ ಹೂಟಗಳ್ಳಿ ನಗರ ಸಭೆ ವ್ಯಾಪ್ತಿಗೊಳಪಟ್ಟಿದ್ದು, ಸ್ವತ್ತಿನ ಹಳೇ ಸಂಖ್ಯೆ ಹಾಗೂ ನಿರ್ಧರಣಾ ಸಂಖ್ಯೆ: 195 ಶೆಡ್ ನಂ. ಸಿ–87 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 19.40 ಮೀಟರ್ ಮತ್ತು ಉತ್ತರ–ದಕ್ಷಿಣ: 24.20 ಮೀಟರ್, ಒಟ್ಟು ವಿಸ್ತೀರ್ಣ: 469.48 ಚದರ ಅಡಿಗಳುಳ್ಳ ಕಟ್ಟಡವನ್ನೊಳಗೊಂಡ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಶೆಡ್ ನಂ. ಸಿ–47, ಪಶ್ಚಿಮಕ್ಕೆ: 3ನೇ ಮುಖ್ಯ ರಸ್ತೆ, ಉತ್ತರಕ್ಕೆ: ಶೆಡ್ ನಂ. ಸಿ–86 ಮತ್ತು ದಕ್ಷಿಣಕ್ಕೆ: ಶೆಡ್ ನಂ. ಸಿ–88.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್,
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು. ಮೊ: 9844640641.
email: sldlawfirm2021@gmail.com

